# ಕೆಂಧೂಳಿ

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

ಹೊಸ ಸವಾಲುಗಳ ಕನಸು

KENDHOOLI *Kannada Weekly*

kendhooli.com/e-paper/

**ಫ್ಯಾಸಿಸ್ಟ್ ಕನ್ನಡಿಯನ್ನು ಒಡೆಯಿರೆಂಬ ಹರಾರಿ ಕಿವಿಮಾತು**



ಡಿ.ಉಮಾಪತಿ ಅವರ ಅಂಕಣದಲ್ಲಿ

Volume-01 | Issue-37 PAGE-16 | Rs.16/- JULY 29 TO AUGUST 04, 2021 MAG(2)Npp/49/2020-21

## ಏನೇ ಆದ್ರೂ ಸರ್ಕಾರದ ಆಯಸ್ಸು

# 8-10 ತಿಂಗಳು ಅಷ್ಟೇ





**ಏಕೆ ಹೀಗಾದಿರಿ ನಿಡುಮಾಮಿಡಿ ಸ್ವಾಮೀಜಿ?**

ಎಂ.ಕೆ. ಭಾಸ್ಕರ ರಾವ್ ಅವರ ಅಂಕಣದಲ್ಲಿ

**ಅಂತೂ ಸಮರ್ಥ ಉತ್ತರಾಧಿಕಾರಿಯನ್ನೇ ಆಯ್ಕೆ ಮಾಡಿದ ಬಿಜೆಪಿ**

**ಬಿಜೆಪಿಯೇತರ ಪಕ್ಷಗಳ ಒಗ್ಗೂಡಿಸುವತ್ತ ಮಮತಾ ಚಿತ್ತ**

# ಸೆಲೆಬ್ರೆಟಿಗಳ ವರ್ತನೆ ಮುಂದಿನ ಪೀಳಿಗೆಗೂ ಮಾದರಿಯಾಗಬೇಕು!

ಕನ್ನಡ ಚಿತ್ರರಂಗಕ್ಕೆ ಒಂದು ಇತಿಹಾಸವಿದೆ, ವಿಶೇಷ ಸ್ಥಾನ-ಮಾನ ಇದೆ, ಚಿತ್ರರಂಗವು ತನ್ನ ದಾರಿಯುದ್ದಕ್ಕೂ ಶ್ರಮಿಸಿದ ನಟರು,ನಿರ್ದೇಶಕರು,ನಿರ್ಮಾಪಕರು,ಗೀತ ರಚನೆ ಕಾರರು,ಹಿನ್ನೆಲೆ ಗಾಯಕರು,ನೃತ್ಯಕಲಾವಿದರು,ಸಂಗೀತ ನಿರ್ದೇಶಕರು,ಕ್ಯಾಮರಾ ಮನ್ ಗಳು,ಎಡಿಟರ್ ಗಳು,ಕಲಾ ತಂತ್ರಜ್ಞರು ಹೀಗೆ ಹತ್ತು ಹಲವು ತಂತ್ರಜ್ಞರ ಕೊಡುಗೆಯಿಂದ ತನ್ನ ವರ್ಣರಂಜಿತ ಇತಿಹಾಸವನ್ನ ಪಡೆದುಕೊಂಡು ಬಂದಿದೆ.

ಸಿನಿಮಾ ಉದ್ಯಮ ಕೇವಲ ಮನೋರಂಜನೆಗಾಗಿ ಸೀಮಿತವಾಗದೆ ಸಾಮಾಜಿಕ ಆದರ್ಶಗಳು,ಬದುಕಿನ ದಾರಿಗಳಿಗೆ ಮಹತ್ವದ ಸಂದೇಶಗಳನ್ನು ಸಾರಿದ ಅದೆಷ್ಟೋ ಉದಾಹರಣೆಗಳಿವೆ. ಇಲ್ಲಿ ಅದೆಷ್ಟೋ ವ್ಯಕ್ತಿಗಳು ಆದರ್ಶವಾಗಿದ್ದಾರೆ.



ಭಾರತೀಯ ಚಿತ್ರರಂಗವನ್ನು ಒಮ್ಮೆ ಗಮನಿಸಿದರೆ ನಮಗೆ ಆದರ್ಶ,ಉತ್ತಮ ಚಿತ್ರಗಳ ಸಾಲು ಸಾಲು ಸಂಗತಿಗಳಲ್ಲಿ ಕನ್ನಡಕ್ಕೂ ಮಹತ್ವದ ಸ್ಥಾನವಿದೆ ಎಂಬುದನ್ನು ಮಾತ್ರ ಮರೆಯುವಂತಿಲ್ಲ.

ಕನ್ನಡ ಚಿತ್ರರಂಗದ,ಸುಬ್ಬಯ್ಯನಾಯ್ಡು,ಹೊನ್ನಪ್ಪ ಭಾಗವತರ್,ಹುಣಸೂರು ಕೃಷ್ಣಮೂರ್ತಿ,ಜಿ.ವಿ.ಅಯ್ಯರ್,ಪುಟ್ಟಣ್ಣಕಣಗಲ್.ಪಂತಲು, ವಿಷ್ಣುವರ್ಧನ್,ಶಂಕರ್‌ನಾಗ್,ನರಸಿಂಹರಾಜ್,ದ್ವಾರಕೀಶ್ ,ಮೊದಲಾದ ಮಹಾನ್ ವ್ಯಕ್ತಿಗಳು ನಡೆದ ದಾರಿ ಅಷ್ಟು ಸುಲಭವಾಗಿಲ್ಲ. ತಾವು ಬೆಳೆದ ಎತ್ತರಕ್ಕೆ ಅವರ ಬೆವರ ಹನಿಯೂ ಇದೆ ಎನ್ನುವುದು ಬೇರೆ ಹೇಳಬೇಕಿಲ್ಲ. ಹೀಗೆ ನಡೆದು ಕೊಂಡು ಬಂದವರು ಇತರರ ಜೀವನಕ್ಕೂ ಮಾದರಿಯಾಗಬೇಕು. ಆಗಿರಬೇಕು. ಅವರ ವರ್ತನೆ ಅದು ಕನ್ನಡ ಚಿತ್ರರಂಗದ ಹಲವಾರು ಹಳೆಯ ಚಿತ್ರರಂಗದ ನಟರು,ನಿರ್ದೇಶಕರು ತೋರಿಸಿಕೊಟ್ಟಿದ್ದಾರೆ. ಹಾಗಾಗಿಯೇ ಕನ್ನಡ ಚಿತ್ರರಂಗಕ್ಕೆ ತನ್ನದೇ ಆದ ಇತಿಹಾಸವಿದೆ.

ಆದರೆ ಇತ್ತೀಚಿನ ದಿನಮಾನದಲ್ಲಿ ಅದೇಕೋ ಕೆಲ ನಟರು ಒಂದಿಷ್ಟು ಹೆಸರು ಮಾಡಿದ ತಕ್ಷಣ ಅವರು ನಡೆದುಕೊಳ್ಳುವ ರೀತಿ,ಅವರ ಹಾವ-ಭಾವ,ವರ್ತನೆಗಳು ಸಾರ್ವಜನಿಕ ಜೀವನದಲ್ಲಿ ನಡೆದುಕೊಳ್ಳುವ ರೀತಿ ಇದೆಯಲ್ಲ ಅದು ಚಿತ್ರರಂಗದ ಇಡೀ ದಾರಿಗೆ ಒಂದಿಷ್ಟು ಕಪ್ಪುಚುಕ್ಕೆಯಂತಾಗಿಬಿಡುತ್ತದೆ.

ಹೌದು ಇತ್ತೀಚೆಗೆ ಕಳೆದ ಎರಡು ಮೂರು ವರ್ಷಗಳಿಂದ ಕೆಲವು ನಟರು ನಡೆದುಕೊಂಡ ರೀತಿ ನೋಡಿದರೆ ಅವರು ಮಾದರಿಯಾಗುವ ಬದಲು ಅಪಾಯಕಾರಿಯಾಗುತ್ತಿದ್ದಾರೆ ಎನಿಸುತ್ತದೆ. ಅವರ ಅಭಿಮಾನಿಗಳಲ್ಲಿಯೂ ಅದೇ ವರ್ತನೆಗಳು ಮನೆ ಮಾಡುತ್ತವೆಯೇ ಎನ್ನುವ ಪ್ರಶ್ನೆಗಳು ಮೂಡುತ್ತವೆ.

ಇದಕ್ಕೆ ತಾಜಾ ಉದಾಹರಣೆಯಂತೆ ಇತ್ತೀಚಗೆ ನಡೆದ ಘಟನಾವಳಿಗಳು ಸಾಕ್ಷಿಯಾಗಿವೆ; ನಟ ದರ್ಶನ ಮತ್ತು ಅವರ ನಡುವಳಿಕೆಗಳು ನಿಜಕ್ಕೂ ಭಯಾನಕವಾಗಿವೆ. ಅವರ ನಡೆ,ನುಡಿ ವರ್ತನೆಗಳು ಈ ಸಮಾಜಕ್ಕೆ ದಮನಕಾರಿಯಂತಿವೆ, ಅದರಲ್ಲೂ ಮಾಧ್ಯಮಗಳ ಬಗ್ಗೆ ಮಾತನಾಡಿರುವ ಅವಾಚ್ಯ ಶಬ್ದಗಳು ಅವರ ವರ್ತನೆಗಳಿಗೆ ಸಾಕ್ಷಿಯಾಗಿವೆ. ಒಬ್ಬ ನಟ ಈ ಸಮಾಜದ ಸೆಲಬ್ರೆಟಿ ಎನಿಸಿಕೊಂಡಾಗ ಆತನ ಪ್ರತಿ ವರ್ತನೆಗಳನ್ನು ಈ ಸಮಾಜ ಗಮನಿಸುತ್ತಿರುತ್ತದೆ ಅದನ್ನು ತಿಳಿದುಕೊಂಡಾದರು ಅವರ ನಡವಳಿಕೆಗಳಿಗೆ ಮಿತಿ ಹಾಕಿಕೊಳ್ಳಬೇಕು. ಆದರೆ ಆ ಹೆಜ್ಜೆ ಕೆಸರಲ್ಲಿ ಇಟ್ಟರೆ ಬದುಕು ಅಷ್ಟೆ ಹೊಲಸಾಗುತ್ತದೆ ಎನ್ನುವುದನ್ನು ಮರೆಯಬಾರದು.

ಇದಕ್ಕೆ ಮತ್ತೊಂದು ಉದಾಹರಣೆ ನೋಡಿ ಇತ್ತೀಚಗೆ ಮದ್ರಾಸ್ ಹೈಕೋರ್ಟ್ ನೀಡಿದ ಹೇಳಿಕೆ ಇಡೀ ಚಿತ್ರರಂಗಕ್ಕೆ ಒಂದು ಮಾದರಿಯಾಗಿದೆ;

ಸಿನಿಮಾದ ಹೀರೊ ಆಗಿ ಮಾತ್ರ ಉಳಿಯಬೇಡಿ, ನಿಜ ಜೀವನದಲ್ಲಿಯೂ ಹೀರೊ ತರಹ ವರ್ತಿಸಿ' ಎಂದು ತಮಿಳು ಚಿತ್ರರಂಗದ ಜನಪ್ರಿಯ ನಟ ವಿಜಯ್ ಅವರನ್ನು ಮದ್ರಾಸ್ ಹೈಕೋರ್ಟ್ ಇತ್ತೀಚೆಗೆ ತರಾಟೆಗೆ ತೆಗೆದುಕೊಂಡಿತ್ತು . ವಿಜಯ್ ಬ್ರಿಟನ್‌ನಿಂದ ಕೊಂಡುತಂದ ಐಷಾರಾಮಿ ಕಾರಿಗೆ ತಮಿಳುನಾಡು ಸರ್ಕಾರ ಪ್ರವೇಶ ತೆರಿಗೆ ವಿಧಿಸುವುದರಿಂದ ವಿನಾಯಿತಿ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿಗಳು ಈ ಮಾತನ್ನು ಹೇಳಿದ್ದರು.

ಅದೇ ಕಳೆದ ಕೆಲವು ವರ್ಷಗಳ ಹಿಂದೆಯೂ ಕೂಡ ಜೋದ್ ಪುರ ನ್ಯಾಯಾಲಯ ಕೂಡ ಸಲ್ಮಾನ್ ಖಾನ್ ವಿಷಯದಲ್ಲೂ ಇದೇ ಹೇಳಿಕೆಯನ್ನು ನ್ಯಾಯಮೂರ್ತಿಗಳು ನೀಡಿದ್ದರು. ಜೋದ್ ಪುರದ ಸಮೀಪದಲ್ಲಿ ಕಂಕಣಿ ಗ್ರಾಮದಲ್ಲಿ 1998ರಲ್ಲಿ ಅಕ್ಟೋಬರ್ ಒಂದು ಮತ್ತು ಎರಡನೇ ತಾರಿಕು ರಕ್ಷಿತಾ ಅಭಯಾರಣ್ಯದಲ್ಲಿ ಕೃಷ್ಣಮೃಗವನ್ನು ಭೇಟಿಯಾಡಿದ್ದ ಎನ್ನುವ ಆರೋಪದ ಹಿನ್ನಲೆಯಲ್ಲಿ ಅಲ್ಲಿನ ಅರಣ್ಯಾಧಿಕಾರಿಗಳು ಅಕ್ರಮ ಶಸ್ತ್ರಾಸ್ತ್ರ ಹೊಂದಿದ್ದಾರೆ ಎಂಬ ಕೇಸ್ ದಾಖಲಿಸಿದ್ದರು. ಈ ಕೇಸ್ ಕುಲಾಸೆಯಾಯಿತಾದರೂ ಅವರು ಜೈಲುವಾಸ ಅನುಭವಿಸಿದರು. ಆದರೆ ಇದರಿಂದ ಈ ಸಮಾಜಕ್ಕೆ ಹೋದ ಸಂದೇಶವೇನು ಎನ್ನುವುದು ಮುಖ್ಯ ಒಬ್ಬ ಸೆಲೆಬ್ರಟಿ ಅತ್ಯಂತ ಸೂಕ್ಷ್ಮವಾಗಿರಬೇಕು ಎನ್ನುವುದು ಇಲ್ಲಿನ ಕಾಳಜಿ ಅಷ್ಟೆ.

ಇತ್ತೀಚೆಗೆ ಹೋಟೆಲೊಂದರಲ್ಲಿ ಕಾರ್ಮಿಕನೊಬ್ಬನ ಮೇಲೆ ನಟ ದರ್ಶನ ಹಲ್ಲೆ ಮಾಡಿದ್ದಾರೆ ಎನ್ನಲಾದ ಸುದ್ದಿ ವಿವಾದಕ್ಕೆ ಗುರಿಯಾಯಿತು. ಅದು ಎಲ್ಲೆಲ್ಲಿಗೋ ಹೋಯಿತು.ದರ್ಶನ್ ಅವರು ನಡೆದುಕೊಂಡ ಬಗೆಯೂ ಕೂಡ ವಿವಾದಗಳೇ ಆದವು ಎನ್ನುವುದು ಬೇರೆ ಮಾತು.ಆದರೆ ಈ ಸಮಾಜಕ್ಕೆ ಇಂತ ಸೆಲೆಬ್ರಟಿಗಳಿಂದ ಯಾವ ಆದರ್ಶ ಪಾಲನೆಯಾಗುತ್ತದೆ ಎನ್ನುವುದು ಕೂಡ ಕಾರಣವಾಗುತ್ತದೆ.

ಇಂತಹ ಸಂದರ್ಭಗಳಲ್ಲೆಲ್ಲ ಕನ್ನಡದ ವರನಟ ಡಾ. ರಾಜ್‌ಕುಮಾರ್ ನೆನಪಾಗುತ್ತಾರೆ. ಜನಪ್ರಿಯತೆಯ ಉತ್ತುಂಗದಲ್ಲಿರುವ ವ್ಯಕ್ತಿಗಳು ಸಾರ್ವಜನಿಕ ಬದುಕಿ ನಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ರಾಜ್‌ಕುಮಾರ್ ಮಾದರಿಯಾಗಿದ್ದಾರೆ. ಜನಪ್ರಿಯ ನಟನಟಿಯರ ಮಾತಂತಿರಲಿ, ಒಂದೆರಡು ಧಾರಾವಾಹಿಗಳಲ್ಲಿ ಅಭಿನಯಿಸಿದ ಕಾರಣಕ್ಕೇ ಅವರನ್ನು ಆರಾಧಿಸುವ, ಸೆಲೆಬ್ರೆಟಿಗಳನ್ನಾಗಿಸಿ ಹೊತ್ತು ಮೆರೆಸುವ ಈ ದಿನ ಮಾನಗಳಲ್ಲಿ, ಸಾರ್ವಜನಿಕವಾಗಿ ಪ್ರಖ್ಯಾತಿ ಪಡೆದವರು ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ.

ನಮ್ಮ ಸುತ್ತ ನೂರಾರು ನಟ-ನಟಿಯರಿದ್ದಾರೆ. ಆದರೆ ಕಲಾವಿದರ ಸಂಖ್ಯೆ ಅಪರೂಪ. ಕಲಾವಿದರಾಗಲು ಘನವಾದ ವ್ಯಕ್ತಿತ್ವವಿರಬೇಕು. ರಾಜ್ ತಮ್ಮ ಪಾತ್ರಗಳ ಆಯ್ಕೆಯಂತೆಯೇ ಬದುಕಿನಲ್ಲಿಯೂ ಅತ್ಯಂತ ಎಚ್ಚರ ವಹಿಸುತ್ತಿದ್ದರು. 'ಸಮಾಜದಲ್ಲಿ ಏನಿದೆಯೋ ಅದನ್ನು ತೋರಿಸ್ತೀವಿ ಅನ್ನುವ ಧೋರಣೆ ಸರಿಯಲ್ಲ. ಸಮಾಜ ಹೇಗಿರಬೇಕು ಎನ್ನುವ ಹೊಣೆಗಾರಿಕೆ ಕೂಡಾ ನಮಗಿದೆ. ಅದಿಲ್ಲದಿದ್ದರೆ ಚಲನಚಿತ್ರ ಕಲೆಯಾಗುವುದಿಲ್ಲ, ವ್ಯಾಪಾರವಾಗುತ್ತದೆ' ಎಂದಿದ್ದರು ರಾಜ್‌ಕುಮಾರ್.



ಮಹಾಕವಿ ಕುವೆಂಪು ಅವರಂತೆಯೆ ಘನವಾದ ಬದುಕನ್ನು ಬದುಕಿದವರು ಅವರು. ಇವರಿಬ್ಬರ ನಡುವೆ ಕೆಲವು ಸಾಮ್ಯತೆಗಳಿವೆ. ಕುವೆಂಪು ಬೀದಿಗಿಳಿಯದೆ ತಮ್ಮ ಸಾಹಿತ್ಯ ರಚನೆಯ ಮೂಲಕ ಹತ್ತು ಹಲವು ಜನಪರ ಹೋರಾಟಗಳಿಗೆ ಪ್ರೇರಣೆ ನೀಡಿರುವಂತೆಯೆ, ತಮ್ಮ ಸಾಮಾಜಿಕ ಕಾಳಜಿಯ ಚಲನಚಿತ್ರಗಳ ಮೂಲಕ ಜನಪರ ಹೋರಾಟಗಳಿಗೆ ಸ್ಫೂರ್ತಿಯಾದವರು ರಾಜ್. ಇಬ್ಬರೂ ಜಾತಿ-ಮತಗಳನ್ನು ಮೀರಿ ವಿಶ್ವಮಾನವರಾಗಿ ತಮ್ಮನ್ನು ಭಾವಿಸಿದವರು. ಮೊದಲು 'ಕರ್ನಾಟಕ ರತ್ನ' ಗೌರವ ಕುವೆಂಪು ಅವರಿಗೆ ಸಲ್ಲಬೇಕು ಎಂದು ರಾಜ್ ಹೇಳಿದರೆ, ನನ್ನ 'ವಿಶ್ವಮಾನವ ತತ್ವ'ವನ್ನು ಕರ್ನಾಟಕದ ಮೂಲೆ ಮೂಲೆಗಳಿಗೆ ತಲುಪಿಸಬಲ್ಲ ಏಕೈಕ ವ್ಯಕ್ತಿ ರಾಜ್‌ಕುಮಾರ್ ಎಂದಿದ್ದರು ಕುವೆಂಪು.ಇಂತಹ ಘಟನೆಗಳು ಇತಿಹಾಸವನ್ನು ಸೃಷ್ಟಿಮಾಡುತ್ತವೆ. ಇತರರ ಬದುಕಿಗೆ ಮಾದರಿಯಾಗುತ್ತವೆ. ಜಾತಿ-ಮತಗಳನ್ನು ಮೀರಿ ನಡೆದ ಈ ನಡೆಗಳು ನಮ್ಮ ಯುವ ಪೀಳಿಗೆಗೆ ಮಾದರಿಯಾಗುತ್ತವೆ ಎನ್ನುವುದು ನಮಗಿರುವ ಕಾಳಜಿ.

ಇಲ್ಲಿ ರೈತ ಹೋರಾಟಗಾರ ಪ್ರೊ ನಂಜುಂಡ ಸ್ವಾಮಿ ಅವರು ಒಂದು ಮಾತನ್ನು ನೆನಪಿಸಿಕೊಂಡಿದ್ದರು ಈ ಮಾತನ್ನು ತೇಜಸ್ವಿ ಅವರಿಗೆ ಹೇಳಿದ್ದರಂತೆ,ಸ್ವಾತಂತ್ರ್ಯ ನಂತರದ ಕರ್ನಾಟಕದಲ್ಲಿ ರೈತ ಚಳವಳಿ, ದಲಿತ ಚಳವಳಿಗಿಂತ ದೊಡ್ಡ ಹೋರಾಟ ನಡೆಸಿದವರು ರಾಜ್‌ಕುಮಾರ್. ಅದನ್ನ ನಾವು ಅರ್ಥ ಮಾಡ್ಕೊಳ್ಳಲಿಲ್ಲ ಅಷ್ಟೆ!'


ಗೋಕಾಕ್ ಚಳವಳಿಯ ಯಶಸ್ಸಿನ ನಂತರ ಮುಖ್ಯಮಂತ್ರಿಯಾಗುವ ಅವಕಾಶ ತಾನಾಗಿಯೇ ಒಲಿದು ಬಂದಿದ್ದರೂ ಅದನ್ನು ತಿರಸ್ಕರಿಸಿ ರಾಜ್ ತಮ್ಮತನವನ್ನು ಮೆರೆದರು.

ಇಂದು ಚಲನಚಿತ್ರಗಳಲ್ಲಿ ಹೆಸರು ಮಾಡಿದವರಲ್ಲಿ ಕೆಲವರು ಶಾಸಕ, ಮಂತ್ರಿಯಾಗಲು ಹೇಗೆಲ್ಲಾ ಹಪಹಪಿಸುತ್ತಿದ್ದಾರೆ ಎಂಬುದನ್ನು ನೋಡಿ ದಾಗ ರಾಜ್ ನಿಲುವಿನ ಮಹತ್ವದ ಅರಿವಾಗುತ್ತದೆ.ತಮ್ಮನ್ನು ಅನುಸರಿಸುವ 'ಅಭಿಮಾನಿ ದೇವರು' ಗಳಿಗೆ ಅವರು ತಪ್ಪು ಸಂದೇಶಗಳನ್ನು ನೀಡಲಿಲ್ಲ. ತಮ್ಮೊಳಗೆ ಅಹಂ ಬಿಟ್ಟುಕೊಳ್ಳಲಿಲ್ಲ. ತಮ್ಮ ಎತ್ತರಕ್ಕೆ ಬಂಗಾರ ಸುರಿಯುವ ಆಮಿಷ ಒಡ್ಡಿದರೂ ಜಾಹೀರಾತು ಕಂಪನಿಗಳಿಗೆ ತಮ್ಮನ್ನು ಮಾರಿಕೊಳ್ಳಲಿಲ್ಲ. ಶೂಟಿಂಗ್ ವೇಳೆ ಸಹಪಂಕ್ತಿ ಭೋಜನ, ಕಷ್ಟದಲ್ಲಿದ್ದ ಕಲಾವಿದರಿಗೆ ತೆರೆಮರೆಯಲ್ಲಿ ನೆರವು- ಹೀಗೆ ಅವರು ಬದುಕಿದ ರೀತಿ ಅಪರೂಪದ್ದು.ಹಿಂದೊಮ್ಮೆ ಕರ್ನಾಟಕದಲ್ಲಿ ನಟರೊಬ್ಬರ ಹುಚ್ಚಾಟವನ್ನು ಕಂಡ ಹೈಕೋರ್ಟ್ ನ್ಯಾಯಮೂರ್ತಿಯೊಬ್ಬರು 'ಸಮಾಜ ಹಾಗೂ ಸಂಸ್ಕೃತಿಯನ್ನು ರಕ್ಷಿಸುವ ದೃಷ್ಟಿಕೋನದಲ್ಲಿ ಡಾ. ರಾಜ್‌ಕುಮಾರ್ ನಂತರ ಒಳ್ಳೆಯ ಸಿನಿಮಾಗಳು ಬರುತ್ತಿಲ್ಲ' ಎಂದಿದ್ದರು.

ರಾಜ್‌ಕುಮಾರ್ ಅಭಿನಯದ ಹಲವು ಕಲಾಕೃತಿಗಳನ್ನು ಸಾಹಿತ್ಯ ಕೃತಿಯಾಗಿ ನೋಡಲು ಅವಕಾಶವಿದೆ. ಅವರ ಕುರಿತಾಗಿ ಹಲವಾರು ಗ್ರಂಥಗಳು ಪಿ.ಹೆಚ್.ಡಿ.ಗಳು ರಚನೆಯಾಗಿವೆ. ಸಾಕ್ಷ್ಯಚಿತ್ರಗಳನ್ನು ಸಂಗ್ರಹಿಸಲಾಗಿದೆ. ಅಧ್ಯಯನ ಕೇಂದ್ರಗಳು ಸ್ಥಾಪನೆಗೊಂಡಿವೆ.

ಹೀಗೆ ಬದುಕಬೇಕು, ಸಮಾಜದಲ್ಲಿ ದೊಡ್ಡವನಾಗಬೇಕೆಂದರೆ ಈ ವರ್ತನೆಗಳು ಸಾಕ್ಷಿ. ಎಂಬುದಕ್ಕೆ ಶಂಕರ್ ನಾಗ್ ಎವರ್ ಗ್ರೀನ್ ಮಾದರಿಯಂತಿದ್ದಾರೆ. ಆದರೆ ನಾನು ಒಂದೆರಡು ಚಿತ್ರಗಳು ಯಶಸ್ಸು ಕಂಡ ತಕ್ಷಣ ನಾನೇನೋ ಆಗಿಬಿಟ್ಟೆ ಎಂದು ನಡೆದುಕೊಳ್ಳುವ ವರ್ತನೆಗಳನ್ನು ಬಿಟ್ಟು ಹಿರಿಯರಂತೆಯೇ ಮಾದರಿಯಾಗಿ ನಡೆದು ಕೊಂಡರೆ (ನಡೆ ಮತ್ತು ನುಡಿಯಲ್ಲಿ) ತಾನೇ ತಾನಾಗಿ ಮುಂದಿನ ಪೀಳಿಗೆ ನಿಮ್ಮನ್ನು ನಿಮ್ಮ ಆದರ್ಶವನ್ನು ಅನುಸರಿಸುತ್ತಾರೆ.

(ಸಂಪಾದಕರು)





## ಪ್ರಿಯ ಓದುಗರೆ

'ಕೆಂಧೂಳಿ' ಪತ್ರಿಕೆಯನ್ನು ಒಂದು ಒಳ್ಳೆ ಉದ್ದೇಶದಿಂದ ಆರಂಭಿಸಲಾಗಿದೆ, ಗುಣಮಟ್ಟ,ಓದುಗರಿಗೆ ಅಗತ್ಯ ವಿಶ್ಲೇಷಣಾತ್ಮಕ ವರದಿಗಳು ಸೇರಿದಂತೆ ಯಾವುದರಲ್ಲೂ ರಾಜೀಯಾಗದೆ ತನ್ನ ಗುಣಾತ್ಮಕವನ್ನು ಕಾಯ್ದುಕೊಂಡು ನಿಮ್ಮ ಮುಂದೆ ಬರಲಿದೆ. ಹೀಗಾಗಿ ಪತ್ರಿಕೆಗೆ ಓದುಗರೆ ಅಗತ್ಯವಾಗಿರುವುದರಿಂದ ಆದಷ್ಟು ಕೊಂಡು ಓದಿ ಪತ್ರಿಕೆಯನ್ನು ಬೆಳಸಿ ಎನ್ನುವುದು ನಮ್ಮ ಕಳಕಳಿಯ ಮನವಿ. ಅಲ್ಲದೆ ಪತ್ರಿಕೆ ಬೆಳವಣಿಗೆಗೆ ಆರ್ಥಿಕ ಸಹಾಯವೂ ಅಷ್ಟೆ ಅಗತ್ಯವಾಗಿದೆ, ಈ ಕಾರಣಕ್ಕಾಗಿ ತಾವು ಚಂದಾದಾರ ರಾಗುವ ಮೂಲಕ ತಮ್ಮ ಪತ್ರಿಕೆ ಬೆನ್ನೆಲುಬಾಗಿ ನಿಂತುಕೊಳ್ಳಬೇಕು ಎನ್ನುವುದು ತಮ್ಮ ಬೇಡಿಕೆ.

-ಪ್ರಧಾನ ಸಂಪಾದಕ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109




ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜಿ.ಎನ್.


ಅಗ್ರಲೇಖನ

# ಸವಾಲುಗಳ ನಿರ್ವಹಣೆಯೇ ನಿಮ್ಮ ಮುಂದಿನ ಭವಿಷ್ಯದ ಹಾದಿ..!

ಹೊಸ ಮುಖ್ಯಮಂತ್ರಿಗಳ ಮುಂದೆ ಹಲವಾರು ಸವಾಲುಗಳ ಪಟ್ಟಿಯೇ ಇದೆ; ಅವೆಲ್ಲವನ್ನೂ ಸಮಚಿತ್ತವಾಗಿ ನಿರ್ವಹಿಸುವ ಗುರಿ ಅವರದ್ದಾಗಬೇಕು,ಕೊರೊನಾ ಸಂಕಷ್ಟದ ಈ ಕಾಲದಲ್ಲಿ ಹೊಸ ಆಗಮನದ ಈ ಕಾಲ ವಸಂತವಂತೂ ಅಲ್ಲ ಮುಂಗಾರು ಮಳೆಯ ಆಗಮನದಲ್ಲಿ ಅವತರಿಸಿರುವ ಹೊಸ ಹುದ್ದೆ ಭೋರ್ಗರೆಯುವ ಮಳೆಯ ಮಧ್ಯೆ ರಾಜಕೀಯ ಸೋನೆ ಮಳೆಯಂತೆಯೂ ಅಲ್ಲದ ಒಂದು ರೀತಿ ತುಂತರ ಮಳೆ ಹನಿಯ ಮಧ್ಯೆಯೇ ಬೇಸಿಗೆ ಬಿರು ಬಿಸಿಲಿನ ಅನುಭವದಂತಿರುವ ಈ ಹೊಸ ಕಾಲ ಕೊರೊನಾ ಸಂಕಷ್ಟದ ನರ್ವಹಣೆಯ ಹೇಗೆ ಸವಾಲಾಗಿ ಸ್ವೀಕರಿಸುತ್ತಾರೆ ಎನ್ನುವುದೇ ಮೊದಲ ಹೆಜ್ಜೆಯ ಜಾಡು. ಈ ಮೂಲಕವೇ ತಮ್ಮ ಕಾರ್ಯಗಳು ಆರಂಭವಾಗಬೇಕು ಮತ್ತು ಅದರ ಸ್ಪೀಡು ಕಾಣಬೇಕಿದೆ. ಈಗಾಗಲೇ ಈ ಸಂಕಷ್ಟವನ್ನು ಎದುರಿಸಿರುವ ಹಿಂದಿನ ಸಿಎಂ ಬಿಎಸ್‌ವೈ ಮತ್ತು ಸಚಿವರು ಪೂರ್ಣ ಸಫಲರಾಗದಿದ್ದರೂ ಒಂದಿಷ್ಟು ಸಂತೃಪ್ತಿಯ ಕೆಲಸವಂತೂ ಮಾಡಿದ್ದಾರೆ ಅದರ ಜೊತೆ ಜೊತೆ ಭ್ರಷ್ಟತೆಯ ವಾಸನೆಯೂ ಕಂಡು ಬಂದಿದೆ ಹೀಗಿರುವಾಗ ಕೊರೊನಾ ನಿರ್ವಹಣೆಯ ಹೊಣೆ ಇದೆಯಲ್ಲ ಅದು ಅವರ ಆಡಳಿತದ ವೈಖರಿಯನ್ನು ತಿಳಿಸುತ್ತದೆ.

ಇನ್ನೂ ಮೂರನೇ ಅಲೆಯ ಆಗಮನವೂ ಇದೆ, ಆ ಆಗಮನದ ಜೊತೆ ಬಂದಿರುವ ತಾವು ಈ ಮೂರನೇ ಅಲೆಯ ಮುಂಜಾಗೃತೆಯನ್ನು ಅತ್ಯಂತ ನಿಷ್ಠೆಯಿಂದಲೇ ಮುಂದಾಗುವ ಅನಾಹುತಗಳನ್ನು ಗಮನಿಸಿ ಜಾಗೃತಿ ವಹಿಸಬೇಕಾಗುತ್ತದೆ ಅದು ಆದರೆ ನೀವು ಬಹುಶಃ ಗೆದ್ದಂತೆ. ಯಾಕೆಂದರೆ ಈಗಾಗಲೇ ರಾಜ್ಯದಲ್ಲಿ ಮತ್ತೇ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿವೆ ಸಾವಿನ ಸಂಖ್ಯೆಗಳು ಕಳೆದ ಒಂದು ವಾರದಿಂದ ಹೆಚ್ಚಾಗುತ್ತಿವೆ ಈ ವೇಳೆಯೇ ಬರುತ್ತಿರುವ ಮೂರನೇ ಅಲೆ ಮಕ್ಕಳಿಗೆ ಸೋಂಕು ಹರಡುತ್ತದೆ ಎನ್ನುವ ಅನುಮಾನಗಳು ಇವೆ. ಹೀಗಾಗಿ ಹೇಗೆ ತಮ್ಮ ನಿರ್ವಹಣೆ ಇರುತ್ತದೆ ಎನ್ನುವುದೇ ಇಲ್ಲಿ ಮುಖ್ಯವಾಗುತ್ತದೆ. ಇನ್ನೂ ಇದರ ಜೊತೆ ಜೊತೆಯಲ್ಲೇ ಶಾಲೆಗಳ ಅರಂಭಕ್ಕೆ ಹಿಂದಿನ ಸಚಿವರು ಮುನ್ನಡಿ ಬರೆದು ಹೋಗಿದ್ದಾರೆ ಮೂರನೇ ಅಲೆ ಆಗಮನದ ವೇಳೆ ಶಾಲೆಗಳು ತೆರಯವು ಸಂದರ್ಭ ಎಷ್ಟು ಉಚಿತ ಎನ್ನುವುದು ಈಗ ಪ್ರಶ್ನೆಯಾಗಿಯೇ ಉಳಿದಿದೆ. ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಂಡು ಮುಂದಿನ ದಾರಿ ಸಾಗಬೇಕಿದೆ, ಯಾಕೆಂದರೆ



ಮೂರನೆಯ ಅಲೆಯ ಹೊಡೆತ ಹೇಗಿರುತ್ತದೆ ಎನ್ನುವ ಕಲ್ಪನೆ ಇನ್ನೂ ಇಲ್ಲ ಒಂದು ವೇಳೆ ಅದು ಮಕ್ಕಳಿಗೆ ಸೋಂಕು ತಗಲುತ್ತದೆ, ಅದು ಬಹು ದೊಡ್ಡ ಹೊಡೆತವಾಗುತ್ತದೆ ಎನ್ನುವುದು ನಿಮ್ಮ ಮುಂದಿರುವ ಯಕ್ಷಪ್ರಶ್ನೆ .

ರಾಜ್ಯದಲ್ಲಿ ಮಳೆ ಕಳೆದ ಹದಿನೈದು ದಿನಗಳಿಂದಲೂ ನಿರಂತರವಾಗಿ ಉದುರುತ್ತಿದೆ ,ಅತ್ತ ನೆರೆ ಹಾವಳಿಯೂ ಹೆಚ್ಚುತ್ತಿದೆ ಇದು ದೊಡ್ಡ ಸವಾಲಿನ ಕೆಲಸವೆ,ಕಳೆದ ಬಾರಿಯೂ ಬಿಎಸ್‌ವೈ ಇದೇ ನೆರೆ ಹಾವಳಿಯ ಸಂದರ್ಭದಲ್ಲೇ ಸಿಎಂ ಆಗಿ ಅಧಿಕಾರ ಸ್ವೀಕರಿಸಿ ನೆರೆ ಹಾವಳಿಯ ಪ್ರದೇಶಗಳಿಗೆ ಒಬ್ಬಂಟಿಯಾಗಿ ತಿರುಗಾಡಿದ್ದರು ,ಈಗಲೂ ನೀವು ಅದೇ ಹಾದಿಯಲ್ಲಿದ್ದೀರಿ ಹೀಗಾಗಿ ಈ ನಿರ್ವಹಣೆ ಮಾಡಿ ಸೈ ಎನಿಸಿಕೊಂಡರೆ ನೀವು ಈ ರಾಜ್ಯದ ಸಮರ್ಥ ಆಡಳಿತಗಾರ ಎನ್ನುವುದರಲ್ಲಿ ಎರಡು ಮಾತಿಲ್ಲ. ಕಳೆದ ಬಾರಿ ನೆರೆ ಹಾವಳಿಗೆ ಬಿಡುಗಡೆ ಮಾಡಿದ ಹಣವೇ ಇನ್ನೂ ಪೂರ್ತಿಯಾಗಿ ಬಿಡುಗಡೆಯಾಗದ ಕಾಲ , ಈ ಕಾಲದಲ್ಲಿ ನಿಮ್ಮ ನಿರ್ವಹಣೆಯಲ್ಲಿ ಹೇಗೆ ಹಣ ಬಿಡುಗಡೆಯಾಗುತ್ತದೆ ಮತ್ತು ಅದನ್ನು ನಿರ್ವಹಿಸುರ ರೀತಿಯ ಮೇಲೆ ನಿಂತಿದೆ.

ಇದಾದ ನಂತರ ನಿಮಗೆ ಮತ್ತೊಂದು ಕಾರ್ಯವೂ ಇದೆ ಅದು ಮೇಕೆದಾಟು ಯೋಜನೆ ಈ ಮಹತ್ತರ ಯೋಜನೆಯನ್ನು ನಿರ್ವಹಿಸುವುದೇ ಈಗ ನಿಮ್ಮ ಮುಂದಿರುವ ಬಹು ದೊಡ್ಡ ಸವಾಲು ಯಾಕೆಂದರೆ ಹೇಳಿ ಕೇಳಿ ತಮಿಳುನಾಡು ಪರ ಕೇಂದ್ರ ಸರ್ಕಾರ ನಿಂತಿದೆ ಈ ಹೊತ್ತಿನಲ್ಲಿ ಅದರ ಕಾರ್ಯವನ್ನು ಹೇಗೆ ಮುಂದುವರಿಸುತ್ತೀರಾ ಎನ್ನುವ ಸವಾಲು ಇದೆ ಈ ಸವಾಲು ಗೆದ್ದರೆ ನೀವು ಈ ರಾಜ್ಯದ ಉತ್ತಮ ಆಡಳಿತಗಾರ ಮತ್ತು ಕನ್ನಡಿಗರ ಸಮರ್ಥ ನಾಯಕ ಎನಿಸಿಕೊಳ್ಳುತ್ತೀರ ಹೀಗಾಗಿ ಮೇಕೆದಾಟು ಯೋಜನೆಯೇ ನಿಮಗ ಸವಾಲು, ನೀವು ಹಿಂದೆ ಹಲವಾರು ಹುದ್ದೆಗಳನ್ನು ಅನುಭವಿಸಿದವರು ಜಲಸಂಪನ್ಮೂಲ ಸಚಿವರಾದವರು,ಸಹಕಾರ ಸಚಿವರಾದವರು ಕಳದೆ ಸಚಿವ ಸಂಪುಟದಲ್ಲಿ ಗೃಹಸಚಿವರಾಗಿಯೂ ಕಾರ್ಯನಿರ್ವಹಿಸಿದ ಅನುಭವವಿದೆ ಆ ಎಲ್ಲಾ ಅನುಭವಗಳು ಈಗ ನಿಮಗೆ ಅನುಕೂಲಕ್ಕೆ ಬರುತ್ತವೆ ಎನ್ನುವಾದರೂ ಈ ಮೇಕೆದಾಟು ಯೋಜನೆಯ ನಿರ್ವಹಣೆಯ ದೊಡ್ಡ ಸವಾಲು ಸ್ವೀಕರಿಸಿ ಸಮರ್ಥರಾದರೆ ನೀವು ನಿಜಕ್ಕೂ ದನ್ಯರೇ..!

ಇದೆಲ್ಲದರ ನಡುವೆ ನಿಮಗೆ ಇನ್ನೂ ಬೆಂಗಳೂರಿನಂತ ನಗರದ ಮಳೆ ಸಂದರ್ಭದಲ್ಲಿ ಆಗುವ ಅನಾಹುತಗಳು, ಇಲ್ಲಿನ ಕಸ ನಿರ್ವಹಣೆ ಸಮಸ್ಯೆ ಹೀಗೆ ಹತ್ತು ಹಲವಾರು ಸಮಸ್ಯೆಗಳ ಪಟ್ಟಿಯೇ ನಿಮ್ಮಮುಂದಿದೆ ಆ ಎಲ್ಲವನ್ನು ನಿರ್ವಹಿಸುವ ಛಲ ನಿಮ್ಮದಾಗಬೇಕು ಅದೆಷ್ಟರ ಮಟ್ಟಿಗೆನೀವು ಸಮರ್ಥರಾಗುತ್ತೀರಾ ಎನ್ನುವುದೇ ಎಲ್ಲರ ಮುಂದಿರುವ ಬಹುದೊಡ್ಡ ಪ್ರಶ್ನೆ.

ಈ ಎಲ್ಲಾ ಕಾರ್ಯಗಳ ನಡುವೆ ನಿಮಗೆ ಮತ್ತೊಂದು ಸಮರ್ಥತೆಯೂ ಬೇಕು ಅದು ರಾಜಕಾರಣದ ಸಮಸ್ಯೆಗಳು..ಹೌದು ಈ ಎಲ್ಲವನ್ನೂ ನೀವು ಹೇಗೋ ನಿಭಾಯಿಸಿಬಿಡಬಹುದು ಅದಕ್ಕೆ ಅಧಿಕಾರಿಗಳು ಜೊತೆಗಿರುತ್ತಾರೆ..ಆದರೆ ಈ ರಾಜಕೀಯ ತಂತ್ರಗಾರಿಕೆಗಳು ಇವೆಯಲ್ಲ ಇವುಗಳನ್ನು ನಿರ್ವಹಿಸುವುದು ಮತ್ತೊಂದು ಸವಾಲು ಹೀಗಾಗಿ ಪ್ರತಿ ನಿಮಿಷಕ್ಕೂ ನಿಮಗೆ ರಾಜಕಾರಣದ ಗಂಡಾಂತರಗಳು ಎದುರಾಗುತ್ತವೆ, ಬಂದಿರುವ ವಲಸಿಗರು ಮತ್ತು ಬಂಡಾಯದ ಬಿಸಿ ನಿಮ್ಮನ್ನು ಕಾಡುವುದೇ ಬಿಡುವುದಿಲ್ಲ ಆ ಕಾಡುವುಕೆಗೆ ನಿಮ್ಮ ರಾಜಕೀಯ ತಂತ್ರಗಳ ಗಾಳ ಉರುಳಿದರೆ ಆಗ ನೀವು ಗೆದ್ದಂತೆ . ಒಟ್ಟಾರೆ ಸವಾಲುಗಳ ಮೇಲೆ ಸವಾರಿ ಮಾಡಬೇಕಾದ ನೀವು ಹೇಗೆ ಈ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತೀರಾ ಎನ್ನುವುದರ ಮೇಲೆ ನಿಮ್ಮ ಮುಂದಿನ ಭವಿಷ್ಯ ನಿರ್ಧಾರವಾಗಲಿದೆ..ಈ ಎಲ್ಲಾ ಸವಲುಗಳನ್ನು ಎದುರಿಸುವ ಶಕ್ತಿ ನಿಮಗೆ ನೀಡಲಿ ಎನ್ನುವುದು ನಮ್ಮ ಹಾರೈಕೆ.

# ಮೂಢನಂಬಿಕೆಗಳು ನಿಮ್ಮ ಟಿಆರ್‌ಪಿಯೇ..?!

ಹಿಟ್ & ರನ್




ಬಹುಶಃ ಭಾರತದ ಇತರೆ ಚಾನೆಲ್‌ಗಳು ಇಷ್ಟೊಂದು ಮೂಢನಂಬಿಕೆಗಳಿಗೆ ಮೌಢ್ಯತೆಗೆ ಒತ್ತು ಕೊಡುತ್ತಿಲ್ಲ ಎನಿಸುತ್ತದೆ ಆದರೆ ನಮ್ಮ ಕರ್ನಾಟಕದ ಚಾನೆಲ್‌ಗಳು ಹೆಜ್ಜೆ ಹೆಜ್ಜೆಗೂ ಮೂಢನಂಬಿಕೆಗಳು ಮೌಢ್ಯತೆಗಳನ್ನೇ ಜನರಿಗೆ ಬಿತ್ತುತ್ತಿವೆ ಎಂದರೆ ಯಾವ ಸಂದೇಶವನ್ನು ಎಂಥಾ ಜಾಗೃತಿಯನ್ನು ಮೂಡಿಸುತ್ತದೆ ನೋಡಿ. ಪ್ರತಿ ದಿನ ಬೆಳಿಗಿನ ಹೊತ್ತು ಜೋತಿಷಿಗಳನ್ನು ಇಟ್ಟುಕೊಂಡು ಸಾವಿರಾರು ಜನರನ್ನು ಮೂರ್ಖರನ್ನಾಗಿಸುತ್ತಿವೆ.

ಈ ಹಿಂದೆ ಸಿದ್ದರಾಮಯ್ಯ ಸರ್ಕಾರ ಇದ್ದಾಗ ಮೌಢ್ಯತೆಯ ಕಾನೂನನ್ನು ಜಾರಿಗೆ ತರಲು ಮುಂದಾದಾಗ ಹಲವಾರು ವಿರೋಧಗಳು ವ್ಯಕ್ತವಾದವು ಅದನ್ನು ವಿರೋಧಿಸಿದವರು ಈಚಾನೆಗಳು ಕೂಡ ಮೌಢ್ಯತೆ ಎನ್ನುವುದು ನಂಬಿಕೆ ಮತ್ತು ಮೌಢ್ಯತೆ ಇವರೆಡರ ನಡುವೆ ಸಾಕಷ್ಟು ಅಂತರ ಇದೆ ಆದರೆ ಕೆಲವು ಬಾರಿ ಹಳ್ಳಿಗಳಲ್ಲಿ ನಡೆಯುವ ನಂಬಿಕೆಗಳನ್ನು ಮೌಢ್ಯ ಎಂದು ಬಿಂಬಿಸಲು ಹೊರಟಿರುವ ಚಾನೆಲ್‌ಗಳು ಯಾಕೆ ಪ್ರತಿ ಬೆಳಿಗಿನ ವೇಳೆ ಜೋತಿಷಿಗಳನ್ನಿಟ್ಟುಕೊಂಡು ಜನರನ್ನು ಮೂರ್ಖರನ್ನಾಗಿ ಮಾಡುತ್ತೀರಾ?

ಕೆಲ ದಿನಗಳ ಹಿಂದೆ ಹಳ್ಳಿಯೊಂದರಲ್ಲಿ ಅದು ಕೊರೊನಾ ಸಂದರ್ಭದಲ್ಲಿ ತಮ್ಮ ಸಂಪ್ರದಾಯದಂತೆ ತಮ್ಮ ನಂಬಿಕೆಯ ಊರ ಹಬ್ಬವನ್ನು ಮಾಡುವ ವೇಳೆ ಅದನ್ನು ಮೌಢ್ಯ ಎಂದು ಬಿಂಬಿಸಲು ಹೊರಟರು ಆದರೆ ಈ ಚಾನೆಲ್‌ಗಳಿಗೆ ಮೌಢ್ಯತೆ ಮತ್ತು ನಂಬಿಕೆ ಸಂಪ್ರದಾಯಗಳ ಬಗ್ಗೆ ಅಂತರ ಗೊತ್ತಿಲ್ಲ ಎನಿಸುತ್ತದೆ. ಈ ಅಂತರಗಳ ಬಗ್ಗೆ ಗೊತ್ತಿದ್ದರೆ ಈ ರೀತಿಯ ಪ್ರದರ್ಶನ ಮಾಡುತ್ತಿರಲಿಲ್ಲ.

ಆಗಲೇ ಹೇಳಿದ ಹಾಗೆ ಸಿದ್ದರಾಮಯ್ಯ ಸಿಎಂ ಆದ ವೇಳೆ ಮೌಢ್ಯದ ವಿರುದ್ದ ಕಾನೂನು ತರಲು ಹೊರಟಾಗ ಅದನ್ನು ವಿರೋಧಿಸಿದ ಈ ಚಾನೆಲ್‌ಗಳು ಇಂತ ನಂಬಿಕೆಗಳನ್ನು ಯಾಕೆ ವಿರೋಧಿಸಬೇಕು? ಇದಕ್ಕೆ ಚಾನೆಲ್‌ಗಳಲ್ಲಿ ಉತ್ತರಿಸುವ ಅದರ ಬಗ್ಗೆ ತಿಳುವಳಿಕೆಗಳೇ ಇಲ್ಲದ ತಂಡ ಸೇರಿಕೊಂಡಿರುವುದೇ ಈ ಯಡವಟ್ಟುಗಳಿಗೆ ಕಾರಣವಾಗಿವೆ.

ಇನ್ನೂ ಮೊನ್ನೆ ಮೊನ್ನೆ ಯಡಿಯೂರಪ್ಪ ಸಿಎಂ ಆಗಿ ಮುಂದುವರೆಯುತ್ತಾರೆ ಎಂದು ಒಬ್ಬ ಜೋತಿಷಿ ಹೇಳಿದರೆ ಮತ್ತೊಬ್ಬ ಬ್ರಹ್ಮಾಂಡ ಸ್ವಾಮಿ ಎನ್ನುವವರು ಈಗ ಅವರು ಗೆದ್ದರೆ ಮುಂದೆ ಒಳ್ಳೆಯದಾಗುತ್ತದೆ ಎನ್ನುವ ಭವಿಷ್ಯ ಹೇಳಿದ ರೀತಿಗಳು ಅದನ್ನು ಚಾನೆಲ್‌ಗಳು ಬಿಂಬಿಸಿದ ರೀತಿ ಇದೆಯಲ್ಲ ಅದು ನಿಜಕ್ಕೂ ತಮಗೆ ತಾವು ಮಾಡಿಕೊಂಡ ದ್ರೋಹ.ಪದೆ ಪದೆ ಆ ಸುದ್ದಿಯನ್ನು ಪ್ರಕಟಿಸುತ್ತಲೆ ಹೋದವು. ಮತ್ತೊಬ್ಬ ಕೋಡಿಮಠದ ಸ್ವಾಮೀಜಿ ನೀಡಿದ ಭವಿಷ್ಯವಾಣಿಯನ್ನಂತು ಎಡಬಿಡದೆ ಪ್ರಸಾರ ಮಾಡುವ ಮೂಲಕ ಜನರನ್ನು ಮೂರ್ಖರನ್ನಾಗಿಸಿದರು. ಬದಲಾಗಿ ತಮ್ಮ ಮೂರ್ಖತನಕ್ಕೆ ಜನರನ್ನು ಮೂರ್ಖರನ್ನಾಗಿಸುವ ನಿಮ್ಮ ಚಾಳಿ ಬಿಟ್ಟು ಮೌಢ್ಯತೆಯ ಕುರಿತು ಜಾಗೃತಿ ಮೂಡಿಸಿ ಯಾವುದು ಸಂಪ್ರದಾಯಯ,ಯಾವುದು ನಂಬಿಕೆ ಎನ್ನುವ ಅಂತರ ತಿಳಿದುಕೊಂಡು ಮೌಢ್ಯವನ್ನು ಬಿತ್ತದೆ ಜನರಿಗೆ ಜಾಗೃತಿ ಮೂಡಿಸಿ ಆಗ ನಿಮ್ಮ ಚಾನಲ್‌ಗಳ ಬಗ್ಗೆ ಎಲ್ಲರಿಗೂ ಗೌರವ ಬರುತ್ತದೆ.


# ಸಿನಿಮಾ ರಂಗದಲ್ಲಿ ಕಾಸ್ಟ್ ಕೌಚಿಂಗ್ ತಲೆಹಿಡುಕರ ಹಾವಳಿ!!

● ಪರಶಿವ ಧನಗೂರು


ಈಗ ಸದ್ಯಕ್ಕೆ ಭಾರತೀಯ ಸಿನಿಮಾ ರಂಗದಲ್ಲಿ ನಟಿ ಶಿಲ್ಪಾ ಶೆಟ್ಟಿಯ ಗಂಡ ರಾಜ್ ಕುಂದ್ರಾನ ನೀಲಿಚಿತ್ರಗಳಯರ್ಾಕೆಟ್ ನಿಂದ ಕಲಾ ಮಾಧ್ಯಮಕ್ಕೆ ಕಳಂಕ ಮೆತ್ತುಕೊಂಡು ಭಾರತೀಯ ಚಿತ್ರರಂಗವೇ ಜಗತ್ತಿನೆದುರು ತಲೆತಗ್ಗಿಸುವಂತಾಗಿದೆ.


"ಯಂತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ..!" ಎಲ್ಲಿ ಮಹಿಳೆಯರನ್ನು ಗೌರವಾದರಗಳಿಂದ ಕಾಣಲಾಗುತ್ತದೋ ಅಲ್ಲಿ ದೇವಾನೂ ದೇವತೆಗಳಿರುತ್ತಾರೆ. ಎಂದು ಶತಮಾನಗಳಿಂದಲೂ ಪಠಿಸುತ್ತಲೇ ಬರುತ್ತಿರುವ, ದೇಶದ ಉದ್ದಗಲಕ್ಕೂ ಸಾವಿರಾರು ಹೆಣ್ಣು ದೇವತೆಗಳ ದೇವಾಲಯಗಳನ್ನು ಕಟ್ಟಿಸಿ, ದಿನನಿತ್ಯ ಪೂಜೇ ಪುರಸ್ಕಾರ ಗಳಲ್ಲಿ ತೊಡಗಿರುವ, ಭಾರತೀಯರಾದ ನಮ್ಮ ನೆಲದಲ್ಲೆ ನಿಜವಾಗಿಯೂ ಹೆಣ್ಣಿಗೆ ಸಿಗಬೇಕಾದ ಗೌರವ ಸ್ಥಾನಮಾನ ಸಿಗುತ್ತಿಲ್ಲ. ಹಾಡು ಹಗಲೇ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳಾಗುತ್ತಿವೆ. ಕೊಲೆಗಳಾಗುತ್ತಿವೆ. ಜಗತ್ತು ಎಷ್ಟೇ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಮುಂದುವರಿಯುತ್ತಿದ್ದರೂ ಮಹಿಳೆಯನ್ನು ಕೇವಲ ಭೋಗದ ವಸ್ತುವನ್ನಾಗಿ ನೋಡುವ ಕಾಮುಕರು ಮನಸ್ಥಿತಿ ಬದಲಾಗುತ್ತಿಲ್ಲ. ಮಹಿಳೆಯರ ಮೇಲೆ ಎಲ್ಲಾ ರಂಗಗಳಲ್ಲೂ ನಡೆಯುತ್ತಿರುವ ಎಲ್ಲಾ ರೀತಿಯ ಶೋಷಣೆಗೆ ಇನ್ನೂ ಮುಕ್ತಿ ಸಿಕ್ಕಿಲ್ಲ. ಇದಕ್ಕೆ ಸಿನಿಮಾ ರಂಗವೂ ಹೊರತಲ್ಲ. ಕಲೆಯನ್ನು ದೇವರಿಗೆ ಓಲಿಸಿಕೊಂಡು ಕಲಾಸೇವೆಯ ಹೆಸರಲ್ಲಿ ಸಿನಿಮಾ ರಂಗಬೆಳೆದು ನಿಂತಿದೆ. ಆದರೆ ಕಲೆಯೆಂಬ ಪರಿಶುದ್ದ ಪವಿತ್ರ ಕರ್ಮಭೂಮಿಯಲ್ಲಿ ಕೊಳಕು ಮನಸ್ಥಿತಿಯ ಜನರು ಬಂದು ಸೇರಿಕೊಂಡು ಇಡೀ ಸಿನಿಮಾ ಇಂಡಸ್ಟ್ರಿಗೆ ಇತ್ತೀಚೆಗೆ ಕಾಸ್ಟ್ ಕೌಚಿಂಗ್ ಎಂಬ ಕಳಂಕ ಮೆತ್ತಿ ಕೊಂಡು ಅಸಹ್ಯ ಹುಟ್ಟಿಸುತ್ತಿದೆ. ಈಗ ಮುಂಬೈನಲ್ಲಿ ಬಂಧನವಾಗಿರುವ ಒಬ್ಬ ವ್ಯಕ್ತಿ ರಾಜ್ ಕುಂದ್ರಾ ಮಾತ್ರ ಸಿಕ್ಕಿಬಿದ್ದು ಕಣ್ಣಿಗೆ ಕಾಣುತ್ತಿದ್ದಾನೆ. ಬಾಲಿವುಡ್ ನ ಪೋರ್ನೋಗ್ರಫಿಯ ಕಿಂಗ್ ಪಿನ್ ನಂತೆ ಕಾಣುತ್ತಿರುವ ಶಿಲ್ಪಾ ಶೆಟ್ಟಿಯ ಗಂಡ ಕುಂದ್ರಾನಂತವರು ಭಾರತೀಯ ಚಿತ್ರರಂಗದಲ್ಲಿ ಎಲ್ಲಾ ಕಡೆಯೂ ಇದ್ದಾರೆ. ಕಾಲಿವುಡ್, ಟಾಲಿವುಡ್, ಸ್ಯಾಂಡಲ್ ವುಡ್, ಮಲೆಯಾಳಂ ಸಿನಿ ಇಂಡಸ್ಟ್ರಿ ಪ್ರತಿ ಯಾವೊಂದು ಭಾಷೆಯ ಚಿತ್ರರಂಗದಲ್ಲೂ ಈ ಕಮರ್ಷಿಯಲ್ ಸೆಕ್ಸ್ ಬಿಸಿನೆಸ್ ಈಗ ಚಾಲ್ತಿಯಲ್ಲಿದೆ! ಇದಕ್ಕೆ ನಾನಾತರ ಲೇಬಲ್ಸ್ ಮುಖವಾಡ ಟೈಟಲ್ಸ್, ಟ್ಯಾಗ್ ಲೈನ್ ಇರುತ್ತವೆ ಅಷ್ಟೇ! ರಾಜ್ ಕುಂದ್ರಾನ ಪೋರ್ನೋಗ್ರಫಿ ದಂಧೆಯ ದಿನದ ಆದಾಯ ಹತ್ತು ಲಕ್ಷ ! ಈನ್ನೂ ಹೆಚ್ಚೂ ಇರಬಹುದು. ಆದರೆ ಆತನ ಆದಾಯದ ಮೂಲ ಮಹಿಳೆಯ ಮೈಮಾಟವೆಂಬುದಂತು ಕಠೋರ ಕಟುಸತ್ಯ!! ಕಲೆಯನ್ನು ಅರಸಿ ಸಿನಿಮಾ ರಂಗದಲ್ಲಿ ತಮ್ಮ ಅದ್ರಷ್ಟ ಪರಿಕ್ಷೆ ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳಲು ಬರುವ ಅಮಾಯಕ ಮುಗ್ಧ ಹುಡುಗಿಯರನ್ನು ಇದೇ ರಾಜ್ ಕುಂದ್ರಾ ನಂತವರು ಆಡಿಷನ್ ಹೆಸರಿನಲ್ಲಿ ಉತ್ತಮ ಪಾತ್ರ ಕೊಡಿಸುವ ಆಸೆ ಹುಟ್ಟಿಸಿ ಬುಟ್ಟಿಗೆ ಹಾಕಿಕೊಂಡು ನೇಕೆಡ್ ಚಿತ್ರಗಳು, ವೀಡಿಯೋ ಗಳನ್ನ ಸೆರೆಹಿಡಿದು ವ್ಯಾಪಾರಕ್ಕಿಟ್ಟು ಹಣಮಾಡಿಕೊಂಡು ಹೆಣ್ಣು ಮಕ್ಕಳ ಬದುಕನ್ನು ಬರ್ಬಾದ್ ಮಾಡುತ್ತಿರುವುದು ಅಕ್ಷಮ್ಯ ಅಪರಾಧ.

ಬಾಲಿವುಡ್ ನಟಿಯೊಬ್ಬಳ ಗಂಡನೆಂಬ ಟ್ಯಾಗ್ ಲೈನ್ ನೊಂದಿಗೆ ಸಮಾಜದಲ್ಲಿ ಸೆಲೆಬ್ರಿಟಿಯಂತೆ ಗುರುತಿಸಿಕೊಂಡು ಒಳಗೇ ಹೊಲಸು ಬಿಸಿನೆಸ್ ಮಾಡಿ ಅನ್ನ ತಿನ್ನುತ್ತಿದ್ದರೂ ಹೊರಗೆ ಉದ್ಯಮಿ, ಬಿಸಿನೆಸ್ ಮ್ಯಾನ್ ಎಂಬ ಹಣೆಪಟ್ಟಿ ಕಟ್ಟಿಕೊಂಡು ಚಾಲ್ತಿಯಲ್ಲಿರುವ ಈ ರಾಜ್ ಕುಂದ್ರಾನೆಂಬ ಹೆಣ್ಣುಬಾಕ ಹಣಗಳಿಸಲು ಮನಸಾಕ್ಷಿಯನ್ನೇ ಮಾರಿಕೊಂಡು ಯಾವ ಅಡ್ಡ ದಾರಿಯನ್ನಾದರೂ ಇಡಿಯಬಲ್ಲನೆಂಬುದು ಆತನ ಐ.ಪಿ.ಎಲ್.ಕ್ರಿಕೆಟ್ ಸ್ಪಾಟ್ ಫಿಕ್ಸಿಂಗ್ ಪ್ರಕರಣದಲ್ಲಿಯೇ ಸಾಬೀತಾಗುತ್ತು. ಆತನಿಗೆ ದುಡ್ಡು ದುಡಿಯಬೇಕಷ್ಟೇ. ದಾರಿ ಯಾವುದಾದರೇನೂ? ಒಳ್ಳೆಯದು, ಕೆಟ್ಟದ್ದೂ ನೀತಿ ನಿಯಮ, ಮನಸಾಕ್ಷಿ ಯಾವುದೂ ಲೆಕ್ಕಕ್ಕಿಲ್ಲ. ಆತ ಒಬ್ಬ ಸೋ ಕಾಲ್ಡ್ ಪಕ್ಕಾ ಬಂಡವಾಳ ಶಾಹಿ ಬಿಸಿನೆಸ್ ಮ್ಯಾನ್. ಅದಕ್ಕಾಗಿಯೇ ಆತ ಒಂದು ಹಾಟ್ ಶಾಟ್ ಆಫ್ ನೀಶೇದಿಷಲ್ಪಟ್ಟರೇ ಮತ್ತೊಂದು ಹೊಸ ನಗ್ನ ವೀಡಿಯೋ ಗಳು ಪೋರ್ನ್ ಆಫ್ ಬೀಡಲು ಸಜ್ಜಾಗುತ್ತಾನೆ! ಮಾಡೆಲಿಂಗ್ ಕ್ಷೇತ್ರದಲ್ಲಿ,



ಈತನ ಸಿನಿಮಾಗಳಲ್ಲಿ ಕೆಲಸಕೇಳಿಕೊಂಡು ಬಂದ ಹೆಣ್ಮಕ್ಕಳ ಬಟ್ಟೆ ಬಿಚ್ಚಿಸಿ ಬೆತ್ತಲೆಮಾಡುವುದು ಈತನ ವ್ಯಾಪಾರ ವಹಿವಾಟಿನ ಒಂದು ಭಾಗ ಅಷ್ಟೇ!! ಇದೂ ಒಂದು ವ್ಯಾಪಾರ..!ಇವನದೂ ಒಂದು ಜನ್ಮ!! ಇಂತಹ ವ್ಯಾಪಾರದ ದುಡ್ಡಲ್ಲಿ ಹೆಂಡತಿ ಮಕ್ಕಳೊಂದಿಗೆ ಐಷಾರಾಮಿ ಜೀವನ ನಡೆಸುವುದು ಸೆಲೆಬ್ರಿಟಿ ಗಳ ದೊಡ್ಡಸ್ತಿಕೆ! ನಾಚಿಕೆ ಯಾಗಬೇಕು ಇಂತಹ ಬದುಕಿಗೇ. ಜೀವನ ಮಾಡಲು ಕನಸು ಕಟ್ಟಿಕೊಂಡು ಕೆಲಸ ಕೇಳಿಬರುವ ಕಂಡೋರ ಹೆಣ್ಮಕ್ಕಳ ಕತ್ತಲ ಕಣ್ಣೀರಿನ ಶಾಪದ ಹಣ ರಾಜ್ ಕುಂದ್ರಾ ನಂತಹ ಸಿನಿಮಾ ನಿರ್ಮಾಪಕರಿಗೆ ದಿನದ ತುತ್ತಿನ ಬುತ್ತಿ! ಈ ಬಾಂಬೆಯ ಬೆತ್ತಲೆ ಆಡಿಷನ್ ಸರದಾರನ ಪೋರ್ನೋಗ್ರಫಿಯ ಒಂದೊಂದೇ ಕರಾಳ ಕತೆಗಳು ಹನ್ನೊಂದು ಜನರ ಬಂಧನದ ನಂತರ ಈಗ ಹೊರಬರುತ್ತಿವೆ. ನಟಿ ಶಿಲ್ಪಾ ಶೆಟ್ಟಿ ತನ್ನ ಗಂಡನ ಪರವಾಗಿ ವಕಾಲತ್ತು ವಹಿಸುತ್ತಾ .. ನನ್ನ ಗಂಡನ ಕಂಪನಿಯಲ್ಲಿ ನೀಲಿ ಚಿತ್ರ ಶೂಟಿಂಗ್ ನಡೆಯುತ್ತಿರಲಿಲ್ಲ! ಬರೀ ಶ್ರಂಗಾರ ಸಂಬಂಧಿ ಕಾಮೋತ್ತೇಜಕ(?) ಹಾಟ್ ಚಿತ್ರಗಳನ್ನಷ್ಟೆ ಚಿತ್ರೀಕರಿಸಲಾಗುತ್ತಿತ್ತು ಅಂತ ಪೇಚಾಡುತ್ತಿದ್ದಾಳೇ! ಆಕೆಯ ಮಾತಿನ ಪ್ರಕಾರ ಇವರ ಗಂಡನ ಕಂಪನಿಗೇ ಪಾತ್ರ ಕೇಳಿ ಬರುವ ಅಮಾಯಕ ಮುಗ್ಧ ಹುಡುಗಿಯರನ್ನು ಪುಸಲಾಯಿಸಿ ರಾಜ್ ಕುಂದ್ರಾ ನಾ ಟೀಂ ನ್ಯೂಡ್ ಫೋಟೋ ಶೂಟ್ ಮಾಡಿಸಿ ಅದನ್ನು ಆಪ್ ನಲ್ಲಿ ಅಪ್ಲೋಡ್ ಮಾಡಿ ಹಣಕ್ಕೆ ಮಾರುವುದು ಅಪರಾಧ ಅಲ್ಲವಂತೇ!! ಬ್ರಿಟನ್ನಿನಲ್ಲಿ ಕುಳಿತಿರುವ ರಾಜ್ ಕುಂದ್ರಾ ನ ಸಂಬಂಧಿ ಪ್ರದೀಪ್ ಭಕ್ಷಿಯ ಕೆನ್ರಿನ್ ಕಂಪನಿಯಲ್ಲಿ ನೀಲಿಚಿತ್ರ ತಯಾರಿಕೆಗಾಗಿ ಶಿಲ್ಪಾ ಶೆಟ್ಟಿಯ ಗಂಡ ಕುಂದ್ರಾ ಬರೋಬ್ಬರಿ ಹತ್ತುಕೋಟಿ ಹಣ ಹೂಡಿಕೆ ಮಾಡಿರುವುದು, ವಿದೇಶದ ವಿವಿಧ ಐಪಿ ನಂಬರ್ ಗಳಿಂದ ಬಾಂಬೆಯಲ್ಲಿ ಶೂಟ್ ಮಾಡಿದ ನ್ಯೂಡ್ ಫೋಟೋ ಗಳನ್ನು ಕುಂದ್ರಾ ನಾ 'ಹಾಟ್ ಶಾಟ್' ಆಫ್ಗೆ ಡೌನ್ ಲೋಡ್ ಮಾಡುವುದು. ಉಮೇಶ್ ಕಾಮತ್ ಎಂಬ ಇವರ ಮ್ಯಾನೇಜರ್ ಮೂಲಕ 'ಹಾಟ್ ಶಾಟ್ ಎಂಬ ಆಫ್ ಮೂಲಕ ವಿಶ್ವದಾದ್ಯಂತ ಅಶ್ಲೀಲ ಚಿತ್ರಗಳನ್ನು ಪ್ರಸರಣ ಮಾಡಿ ಹಣ ಮಾಡುತ್ತಿರುವುದು, ಇವೆಲ್ಲವೂ ನಟಿ ಶಿಲ್ಪಾ ಶೆಟ್ಟಿಗೆ ಗೊತ್ತಿರಲಿಲ್ಲವೇ? ಕುಂದ್ರಾನ ಪೋರ್ನೋಗ್ರಫಿ ಕಂಟೆಂಟ್ ಇರುವ ನ್ಯೂಡ್ ಫೋಟೋ ಗ್ಯಾಲರಿಯ ಹಾಟ್ ಶಾಟ್ ಎಂಬ ಓಟಿಟಿ ಪ್ಲಾಟ್ ಫಾರಂ ಕೆಟಗರಿಯ ಆಪ್ಗೆ ಈಗಾಗಲೇ ವಿಶ್ವದಾದ್ಯಂತ ಇಪ್ಪತ್ತು ಲಕ್ಷಕ್ಕೂ ಹೆಚ್ಚಿನ ಚಂದಾದಾರರಿದ್ದರೆಂದರೇ ದಿನದ ಆದಾಯ ಎಷ್ಟಿರಬಹುದು ನೀವೇ ಊಹಿಸಿ. ಈತನ ಕಾಸ್ಟಿಂಗ್ ಕೌಚ್ ಶೋಷಣೆ ನೊಂದು ಬೇಸತ್ತು ಅವಮಾನಿತಳಾಗಿ





ಸಾಗರಿಕ ಎನ್ನುವ ನಟಿ ಧೈರ್ಯವಾಗಿ ಮುಂಬೈ ಕ್ರೈಂ ಬ್ರಾಂಚ್ ಗೆ ದೂರುನೀಡಿದ್ದ ಪರಿಣಾಮ ಕುಂದ್ರಾನ ಮತ್ತೊಂದು ಕರಾಳ ಮುಖ ಅನಾವರಣವಾಗಿದೆ.ಕೇವಲ ಇದೊಂದು ನ್ಯೂಡ್ ಫೋಟೋ ಶೂಟ್ ಪ್ರಕರಣ ಮಾತ್ರವಾಗಿರದೇ ಭಾರತೀಯ ಸಿನಿಮಾ ರಂಗದಲ್ಲಿ ಅಸ್ತಿತ್ವ ದಲ್ಲಿರುವ ಕಾಸ್ಟ್ ಕೌಚಿಂಗ್ ಎಂಬ ಕರಾಳ ದಂಧೆಯ ಮತ್ತೊಂದು ಮುಖವಾಡ ಇದಾಗಿದೆ. ಕುಂದ್ರಾನಿಂದ ಶೋಷಣೆ ಒಳಗಾಗಿ ಮನೆಯಲ್ಲಿ ಬಿಚ್ಚಿಟ್ಟುಕೊಂಡಿದ್ದವರೂ ಕೂಡ ಈಗ ಹೊರ ಬಂದು ತಮಗೂ ಆಗಿದ್ದ ಇದೇ ಬೆತ್ತಲೆ ಆಡಿಷನ್ ಅನುಭವವನ್ನು ಬಿಚ್ಚಿಡುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೆ ಈ ಕಾಸ್ಟಿಂಗ್ ಕೌಚ್ ಎಂಬ ಅಸಹ್ಯಕರ ಪ್ರವ್ರತ್ತಿಗೆ ಅಂತಿಮ ಇತಿಶ್ರಿ ಹಾಡಲು ಇದೇ ಸಿನಿಮಾ ರಂಗದ ಒಳ್ಳೆಯ ವ್ಯಕ್ತಿಗಳು ಗಣ್ಯರು ಮಾಧ್ಯಮಗಳು, ಸರ್ಕಾರ ಪೊಲೀಸ್ ಕೈಜೋಡಿಸಬೇಕಿದೆ. ಇಲ್ಲದಿದ್ದರೇ ಎಷ್ಟೋ ಹೆಣ್ಣು ಮಕ್ಕಳು ಸಿನಿಮಾ ರಂಗದಲ್ಲಿ ಈ ಕಾಸ್ಟಿಂಗ್ ಕೌಚ್ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆ ಯಿಂದ ನೊಂದು ಜರ್ಜರಿತರಾಗಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಾವೇ ನೋಡಬೇಕಾಗುತ್ತದೆ.

ವೇಶ್ಯಾವಾಟಿಕೆ ಸಿನಿಮಾ ರಂಗದ ಒಂದು ಭಾಗವೇನೋ ಎನ್ನುವಷ್ಟರ ಮಟ್ಟಿಗೆ ಕೆಲವರು ತಪ್ಪಾಗಿ ಮಾತನಾಡಿಕೊಳ್ಳುತ್ತಿದ್ದಾರೆ! ಕಮರ್ಷಿಯಲ್ ಸೆಕ್ಸ್ ಬಿಸಿನೆಸ್ ಗೂ ಸಿನಿಮಾ ರಂಗದ ಕಾಸ್ಟಿಂಗ್ ಕೌಚ್ ಗೂ ನೇರ ಸಂಪರ್ಕ ಕಲ್ಪಿಸುವ ತಪ್ಪು ಗಳಾಗುತ್ತಿದೆ. 2018ರಲ್ಲೇ ಅಮೇರಿಕದ ಪೊಲೀಸರು ಶಾನ್ ಮೂದುಗುಮುಡಿ ಮತ್ತು ಆತನ ಹೆಂಡತಿ ಚಂದ್ರ ಇಬ್ಬರನ್ನೂ ಸೆಕ್ಸ್ ಯರ್ಾಕೆಟ್ ನಡೆಸುತ್ತಿರೆಂದು ಬಂಧಿಸಿದ್ದರು. ಆಗ ಟಾಲಿವುಡ್ ಮತ್ತು ಸ್ಯಾಂಡಲ್ ವುಡ್ ನ ಕೆಲವು ಸಹನಟಿಯರನ್ನು ಕಿರುತೆರೆ ಕಲಾವಿದರನ್ನು ಹಾದಿ ತಪ್ಪಿಸಿ ಈ ಸೆಕ್ಸ್ ಬಿಸಿನೆಸ್ ಗೆ ಬಳಸಿಕೊಂಡಿದ್ದು ಬೆಳಕಿಗೆ ಬಂದಿತ್ತು! ಕನ್ನಡದ ಮತ್ತು ತೆಲುಗು ಸಿನೆಮಾದ ನಟ ನಟಿಯರನ್ನು ಈವೆಂಟ್, ಸ್ಟಾರ್ ನೈಟ್ ಕಾರ್ಯಕ್ರಮಗಳ ಹೆಸರಲ್ಲಿ ತಾವೇ ವೀಸಾ ಅರೆಂಜ್ ಮಾಡಿ ಅಮೆರಿಕಾಗೆ ಕರೆಸಿಕೊಳ್ಳುತ್ತಿದ್ದ ಈ ದಂಪತಿಗಳು ತಲೆಗೆ ಸಾವಿರ ಡಾಲರ್ ನಿಂದ ಹತ್ತು ಸಾವಿರ ಡಾಲರ್ ವರೆಗೂ ಚಾರ್ಜ್ ಮಾಡೀ ವೇಶ್ಯಾವಾಟಿಕೆಗೆ ಸಹಕರಿಸುತ್ತಿದ್ದರೆಂಬುದು ತಿಳಿದು ಬಂದಿತ್ತು! ಆಗ ನಮ್ಮ ಸಿನಿಮಾ ಇಂಡಸ್ಟ್ರಿಗೂ ಕಳಂಕ ಬಂದಿತ್ತು. ಹಾಗೆಯೇ 2020ರಲ್ಲಿ ಬಾಂಬೆಯ ಜುಹೂ ಠಾಣೆವ್ಯಾಪ್ತಿಯಲ್ಲಿ ಬೀಚ್ ಪಕ್ಕದ ಹೋಟೆಲ್ ಗಳಲ್ಲಿ ನಡೆಯುತ್ತಿದ್ದ ಸಿನಿಮಾ ನಟಿಯರ ಸೆಕ್ಸ್ ಯರ್ಾಕೆಟ್ ಬೇಧಿಸಿ ಬಾಂಬೆ ಪೊಲೀಸರು ಎಂಟು ಜನ ನಟಿಯರನ್ನು ಬಂದಿಸಿ ಜೈಲಿಗಟ್ಟಿದ್ದರು! ಗಂಟೆಗೆ ನಲವತ್ತು ಸಾವಿರ ರೂಪಾಯಿ ಲೆಕ್ಕದಲ್ಲಿ ಸಿನಿಮಾ ನಟಿಯರನ್ನು ಅಲ್ಲಿ ಬಾಡಿಗೆಗೆ ಕೂಡಲಾಗುತ್ತಿತ್ತು! ಹಾಗೆಯೇ ಅಂಧೇರಿಯ ತ್ರೀ ಸ್ಟಾರ್ ಹೋಟೆಲ್ ನಡೆಯುತ್ತಿದ್ದ ಹೈಪ್ರೊಫೈಲ್ ಗ್ಲಾಮರಸ್ ಸೆಕ್ಸ್ ಯರ್ಾಕೆಟ್ ಬೇಧಿಸಿದ ಬಾಂಬೆ ಪೊಲೀಸರಿಗೇ ಡಜನ್ ಗಟ್ಟಲೆ ಟೆಲಿವಿಷನ್ ಸೀರಿಯಲ್ ನಟಿಯರು ಸಿಕ್ಕು ಬಿದ್ದಿದ್ದೂ! ಸಿನಿಮಾ ಮಂದಿಯ ಕಮರ್ಷಿಯಲ್ ಸೆಕ್ಸ್ ಬಿಸಿನೆಸ್ ಒಂದು ಕಡೆಯಾದರೇ ಆನ್ಲೈನ್ ಹೈಪ್ರೊಫೈಲ್ ವೇಶ್ಯಾವಾಟಿಕೆ ಗಳೆಂಬ ಫೀಮೇಲ್ ಎಸ್ಕಾರ್ಟ್ಸ್ ಸರ್ವೀಸ್ ಸೆಂಟರ್ ಗಳೂ ಸಹ ಸಿನಿಮಾ ಸಹ ನಟಿಯರನ್ನಿಟ್ಟುಕೊಂಡು ವಾಟ್ಸಾಪ್ ಮೆಸೇಂಜರ್ ತ್ರೋ ಮಲ್ಟೀ ಸ್ಟೇಟ್ ವೇಶ್ಯಾವಾಟಿಕೆ ನಡೀತಿದೆ! ಸಿನಿಮಾ ನಟಿಯರಾಗಲು ಮನೆ ತೊರೆದು ಬಂದ ಹೆಣ್ಮಕ್ಕಳನ್ನು ಈ ರೀತಿ ಕಾಸ್ಟ್ ಕೌಚಿಂಗ್ , ದಂಧೆಗೆ ಸೆಳೆದು ಕಾಂಪ್ರಮೈಸಿಂಗ್, ಕಮಿಟಿಂಗ್ ಪದಬಳಸಿ ಹಣದಾಸೆ-ಪಾತ್ರದಾಸೆ ತೋರಿಸಿ ಕೊನೆಗೆ ಬಳಸಿಕೊಂಡು ವೇಶ್ಯಾವಾಟಿಕೆಗೆ ನೂಕುತ್ತಿರುವವರು ಯಾರು? ಅತ್ತ ಸಿನಿಮಾ ರಂಗದಲ್ಲಿ ಪಾತ್ರಗಳೂ ಸಿಗದೇ ಹೊಟ್ಟೆ ತುಂಬಿಸಿಕೊಳ್ಳಲು ಅಡ್ಡದಾರಿ ಹಿಡಿಯುವಂತೆ ಆಸೆ ಹುಟ್ಟಿಸಿ ಪ್ರೇರೇಪಿಸುತ್ತಿರುವವರು ಯಾರು? ಈ ಈಗ ಈ ಕಾಸ್ಟಿಂಗ್ ಕೌಚ್ ಎಂಬುದು ಡಾರ್ಕ್ ಸೀಕ್ರೆಟ್ ಆಫ್ ಇಂಡಿಯನ್ ಫಿಲ್ಮ್ ಇಂಡಸ್ಟ್ರಿ ಎಂಬಂತಾಗಿಹೋಗಿದೆ! ಅದಕ್ಕೆ ಪೂರಕವೆಂಬಂತೆ ಅಲ್ಲಲ್ಲಿ ಕೆಲವು ನಟ-ನಟಿಯರೂ ಬಹಿರಂಗವಾಗಿ ಈ ಕಾಸ್ಟ್ ಕೌಚಿಂಗ್ ಮನಸ್ಥಿತಿಯ ವಿರುದ್ಧ ಬಂಡೆದ್ದು ಮಾತನಿಡಿದ್ದಾರೆ. ಬಾಲಿವುಡ್ ನ ಸ್ವರ ಭಾಸ್ಕರ್, ಶೆರ್ಲಿನ್ ಚೋಪ್ರಾ, ಮಮತಾ ಕುಲಕರ್ಣಿ, ಪ್ರಾಚೀನ ದೇಶಾಯಿ, ಅಂಕಿತಾ ಲಕಂಢೇ, ಟಿಸ್ಕಾ ಚೋಪ್ರಾ, ಕಲ್ಕಿ ಕೊಚಿಲಿನ್, ಸುಚಿತ್ರಾ ಕ್ರಿಷ್ಣ ಮೂರ್ತಿ, ಪಾಯಲ್ ರತಗಿ, ಸಮೀರಾ ರೆಡ್ಡಿ, ಸಂಭಾವನಾ ಸೇತ್, ಚಿತಾಂಗದಾ ಸಿಂಗ್, ಸುರ್ ವೀನಾ , ಕಿಶ್ವೆರ್ ಮರ್ಚೆಂಟ್, ಪಿಯೀಸು ಚಟರ್ಜಿ, ಕಂಗನಾ ರನಾವತ್ ಮುಂತಾದ ನಟಿಯರು ಈ ಕಾಸ್ಟ್ ಕೌಚಿಂಗ್ ಎಂಬ ಸೆಕ್ಸೂವಲ್ ಹೆರಾಸ್ಮೆಂಟ್ ಬಗ್ಗೆ ಮಾಧ್ಯಮಗಳಲ್ಲಿ ಬಾಯಿತೆರೆದು ಧ್ವನಿ ಎತ್ತಿದ್ದಾರೆ. ಬಾಲಿವುಡ್ ಹೀರೋಗಳಾದ ಆಯುಷ್ಮಾನ್ ಖುರಾನಾ, ರಣವೀರ್ ಸಿಂಗ್ ಗೂ ಕೂಡ ಕಾಸ್ಟಿಂಗ್ ಕೌಚ್ ಕಾಡಿದೆಯೆಂದರೆ ಇದರ ಕರಾಳತೆಯ ಬಗ್ಗೆ ಏನೆನ್ನಬೇಕು ಹೇಳಿ. ಸೀನ್ ಡಿಸ್ಕಸ್ ಮಾಡುವ ನೆಪದಲ್ಲಿ ರೂಮಿಗೆ ಕರೆಯಿಸಿಕೊಂಡು ಲೈಂಗಿಕ ಶೋಷಣೆಗೆ ಗುರಿಪಡಿಸುವ, ಹಾಸಿಗೆ ಹಂಚಿಕೊಂಡರೇ ಒಳ್ಳೆಯ ಪಾತ್ರ ಕೊಡುವುದಾಗಿ ಬಿಗ್ ಆಫರ್ ಆಸೆ ಹುಟ್ಟಿಸಿ ಓಲೈಸುವ ಪ್ರಯತ್ನಗಳ ಬಗ್ಗೆ ನಟಿ ಶ್ರೀರೆಡ್ಡಿ ಅಂತವರಿಂದ ಬೆತ್ತಲೆ ಪ್ರತಿಭಟನೆ ಗಳಾಗುತ್ತಿದ್ದರೂ, ಕಾಸ್ಟ್ ಕೌಚಿಂಗ್ ಒಪ್ಪಿಕೊಂಡೇ ಕೆಲವು ನಟಿಮಣಿಯರು ಸಕ್ಸಸ್ ನ ಶಿಖರವೇರುತ್ತಿದ್ದಾರೆಂಬ ವಾದವೂ ಇದೆ! ಕೆಲವು ಹೀರೋಗಳು ತಮ್ಮ ಮುಂದಿನ ಸಿನಿಮಾಗಳಿಗೂ ತಮಗೆ ಪ್ರಿಯವಾದ ಹೀರೋ ಹೀರೋಯಿನ್ ಅನ್ನೇ ಹಾಕಿಕೊಂಡರೆ ಮಾತ್ರ ಡೇಟ್ ಕೊಡುತ್ತೇನೆನ್ನುವ ಕಂಡೀಷನ್ ಹಾಕುತ್ತಾರಂತೆ! ಅಂಡರ್ ಸ್ಟುಡ್ ..! ಒಳ್ಳೆಯ ಪಾತ್ರಗಳು ಸಿಗಬೇಕಾದರೆ ಕಾಂಪ್ರಮೈಸ್ ಆಗಲೇಬೇಕಂತೇ! ಈ ಕಮಿಟೆಡ್ ಕಾಸ್ಟ್ ಕೌಚಿಂಗ್ ಎಂಬ ಡಾರ್ಕ್ ಟ್ರೂತ್ ಅನ್ನು ಅರಗಿಸಿಕೊಂಡು ಮುಂದೆ ಸಾಗಿದರೆ ಮಾತ್ರ ಸಿನಿಮಾದ ಅದ್ರಷ್ಟ ಪರೀಕ್ಷೆಯ ಆಟದಲ್ಲಿ ಗೆಲ್ಲಬಹುದು ಎನ್ನುವಂತಾಗಿದೆ! ಎಲ್ಲಿಗೆ ಬಂತು ನೋಡಿ ನಮ್ಮ ಕಲಾ ಸಂಸ್ಕ್ರತಿ.



ಸಿನಿಮಾಗಳಲ್ಲಿ, ಮಾಡೆಲಿಂಗ್ ಕ್ಷೇತ್ರದಲ್ಲಿ ಕಿರುತೆರೆಯಲ್ಲಿ ಎಲ್ಲಾ ಕಡೆಯೂ ನಟಿಸುವ ಅವಕಾಶ ಕೋರಿ ಹೋಗುವ ಹೆಣ್ಣು ಮಕ್ಕಳನ್ನು ಮಂಚಕ್ಕೆ ಕರೆಯುವ ಮಾನಸಿಕ ಕಾಯಿಲೆ ಹಾಲಿವುಡ್ ಅನ್ನು ಸೇರಿ ಎಲ್ಲಾ ಚಿತ್ರರಂಗದಲ್ಲೂ ಬೇರೂರಿದೆ. ನಟಿಸಿ ಮಹಾನ್ ಕಲಾವಿದೆ ಆಗಬೇಕು ಹೊಟ್ಟೆ ಬಟ್ಟೆಗೆ ದುಡಿದು ಕೊಂಡು ಜೀವನ ರೂಪಿಸಿಕೊಳ್ಳಬೇಕೆಂದು ಬಣ್ಣದ ಲೋಕವನ್ನು ಬಯಸಿ ಬಂದವರು ಈ ಕಾಸ್ಟ್ ಕೌಚಿಂಗ್ ಎಂಬ ಅಸಹ್ಯ ಧಂದೆಯಿಂದ ನೊಂದು ಚಿತ್ರರಂಗದ ಸಹವಾಸವೇ ಬೇಡವೆಂದು ಬೇಸತ್ತು ಮನೆಸೇರಿದವರೆಷ್ಟೋ.ಈ ಕರಾಳ ಕಾಸ್ಟ್ ಕೌಚಿಂಗ್ ಎಂಬ ಕಾಂಪ್ರಮೈಸಿಂಗ್ ಕಾಸ್ಟ್ ಕಾಲಿಂಗ್ ಮಾಫಿಯಾದ ವಿರುದ್ಧ ಧ್ವನಿ ಎತ್ತಿದ ಎಷ್ಟೋ ನಟಿಯರು ನಾಪತ್ತೆಯಾಗಿದ್ದಾರಂತೆ! ಬಹಳಷ್ಟು ಸಹಕಲಾವಿದೆಯರೂ ಬೆದರಿ ಬಾಯ್ ಮುಚ್ಚಿ ಕೊಂಡಿದ್ದಾರೆ. ಮತ್ತೆ ಕೆಲವರು ದಾರಿ ಕಾಣದೆ ಕಮಿಟ್ ಆಗಿ ಕತ್ತಲ ಪರದೆಯೊಳಗೆ ಒಂದಾಗಿದ್ದಾರೆ.ಇದು ಈವತ್ತಿನ ಸಿನಿ ದುನಿಯಾ. ಬಾಲಿವುಡ್ ಮತ್ತು ಎಲ್ಲಾ ಭಾಷೆಗಳಲ್ಲೂ ನಟಿಸುತ್ತಿರುವ ದೊಡ್ಡ ದೊಡ್ಡ ಪ್ರಸಿದ್ಧ ನಟಿಯರೆನಿಸಿಕೊಂಡವರೇ ಈ ಕಾಸ್ಟಿಂಗ್ ಕೌಚ್ ಬಗ್ಗೆ ಬೆದರಿ ಬಾಯ್ ಬಿಟ್ಟಿದ್ದಾರೆ. ಸಿನಿಮಾ ಗಳ ಆಡಿಷನ್ ಗೆ ಮೊದಲೇ ಅಥವಾ ಆಡಿಷನ್ ಮುಗಿದ ನಂತರ ಚಾನ್ಸ್ ನೀಡುವ ಆಸೆ



ತೋರಿಸಿ ಸಾಂದರ್ಭಿಕವಾಗಿ ಕೆಲವೊಮ್ಮೆ ನಿರ್ಮಾಪಕ ಒಮ್ಮೊಮ್ಮೆ ನಿರ್ದೇಶಕ ನಟಿಸಲು ಬಂದ ಹುಡಿಗಿಯನ್ನು ಹಾಸಿಗೆಗೆ ಕರೆದ ಅನುಭವವನ್ನು ಹೇಳಿಕೊಂಡು ಅಳುವ ಹೆಣ್ಮಕ್ಕಳಿದ್ದಾರೆ. ಇಂತಹ ಮಾನಸಿಕ ಹಿಂಸೆಯನ್ನೂ ಯಾವುದೋ ಕಾರಣಕ್ಕೆ ಕೆಲವು ನಟಿಯರು ಕಣ್ಣುಮುಚ್ಚಿ ಅವುಡುಗಚ್ಚಿ ಸಹಿಸಿಕೊಂಡು ಬರುತ್ತಿದ್ದಾರೆ. ಆರಂಭದಲ್ಲಿ ಮಲೆಯಾಳಂ ಚಿತ್ರರಂಗದಲ್ಲಿ ಯತೇಚ್ಛವಾಗಿದ್ದ ಈ ಪ್ರವ್ರತ್ತಿ ನಂತರ ತಮಿಳು ಸಿನಿಮಾದಿಂದ ತೆಲುಗು ನಂತರ ಕನ್ನಡಕ್ಕೆ ದಾಟಿ ಬಂದು ಎಲ್ಲಾ ಭಾಷೆಗಳಲ್ಲೂ ವ್ಯಾಪಿಸಿದೆ. ಬಾಲಿವುಡ್ ನಲ್ಲಂತೂ ಬಗೆದಷ್ಟೂ ಬೆಚ್ಚಿಬೀಳಿಸುವ ಸತ್ಯಗಳು ಈ ಕಾಸ್ಟ್ ಕೌಚಿಂಗ್ ಪ್ರಕರಣದ ಬಗ್ಗೆ ದಂತಕತೆಗಳಿವೆ. ಕೆಲವು ನಿರ್ಮಾಪಕರು ಮತ್ತು ನಿರ್ದೇಶಕರು ಹೆಣ್ಣು ಮಕ್ಕಳನ್ನು ದೈಹಿಕವಾಗಿ ಬಳಸಿಕೊಂಡು ತಮ್ಮ ವಾಂಛೆ ತೀರಿಸಿಕೊಳ್ಳಲೆಂದೇ ಸಿನಿಮಾ ರಂಗಕ್ಕೆ ಬಂದಿರುವ ಉದಾಹರಣೆ ಸಾವಿರಾರಿವೆ. ತಮ್ಮ ಮಾನ ಮರ್ಯಾದೆಗಂಜಿ ಶೋಷಣೆಗೊಳಗಾದ ನಟಿಯರು ಸುಮ್ಮನಿದ್ದಾರೆಷ್ಟೇ. ಸಿನಿಮಾ ಫೀಲ್ಡಿನಲ್ಲಿ ಆರ್ಟಿಸ್ಟ್ ಸಪ್ಲೈಯರ್ ಬ್ರೋಕರ್, ಏಜೆಂಟರೆಂಬ ವಿವಿಧ ಕೆಟಗರಿಯ ಜನ ಕೆಲಸಮಾಡುತ್ತಾರೆ. ಗಾಂಧಿನಗರದ ಭಾವೆಯಲ್ಲಿ ನಿರ್ಮಾಪಕ ರಿಗೆ ನಿರ್ಧೇಶಕರಿಗ, ಕಾಮುಕರಿಗೆ ಹೆಣ್ಣು ಹುಡಿಗೆಯಪ್ಪು ಒದಗಿಸಿಕೊದೋರಿಗೆ "ಮಾಮಾ ಕೆಲಸ ಮಾಡೋನು' ಎಂಬ ಟ್ಯಾಗ್ ಲೈನ್ ಪಿಂಪ್ ಎಂಬ ಬಿರುದು ಬಾವಲಿಗಳಿವೆ. ನೇರವಾಗಿ ಖಾರವಾಗಿ ಕೆಲವರು ಇವರನ್ನು 'ತಲೆಹಿಡುಕರು', ಅಂತ ಮುಖಕ್ಕೆ ರಾಚುವಂತೆ ಉಗಿದರೂ ಈ ಸಂತತಿ ಮಾತ್ರ ಸಿನಿಮಾ ರಂಗದಲ್ಲಿ ಕಡಿಮೆಯಾಗಿಲ್ಲ. ಈಗ ಈ ತಲೆಹಿಡುಕರ ಹಾವಳಿ ಹಿರಿತೆರೆಯಲ್ಲಿ ಮಾತ್ರವಲ್ಲ ಕಿರುತೆರೆಯೆಂಬ ರಿಯಾಲಿಟಿ ಶೋ ಮಾಡೆಲಿಂಗ್, ಕ್ಷೇತ್ರದಲ್ಲೂ ಹಬ್ಬಿ ಗಬ್ಬುನಾಥದಂತೆ ರಾವಡಿ ಎಬ್ಬಿಸಿ ಹೆಣ್ಣುಮಕ್ಕಳ ಕಣ್ಣೀರ ಕೋಡಿಗೆ ಕಾರಣವಾಗಿದೆ. ಮಹಿಳೆಯರ ಮಾನ ಮರ್ಯಾದೆ ರಕ್ಷಣೆಯ ವಿಷಯದಲ್ಲಿ ಅಂತಾರಾಷ್ಟ್ರೀಯ ಕಾನೂನು ಗಳೆ ಹೆಣ್ಮಕ್ಕಳ ಪರವಾಗಿ ತಲೆಬಾಗಿ ನಿಂತಿರುವಾಗ, ಹೆಣ್ಣು ನಮ್ಮದೇ ಮನೆಯ ಅಕ್ಕ-ತಂಗಿ ಅಮ್ಮ ಅಜ್ಜಿ, ಮಗಳು, ಗೆಳತಿ, ಎಲ್ಲಾ ಆಗಿರುವಾಗ ಸಿನಿಮಾ ರಂಗದಲ್ಲಿ ಹೆಣ್ಣುಮಕ್ಕಳ ಮೇಲಾಗುತ್ತಿರುವ ಈ ಕಾಸ್ಟ್ ಕೌಚಿಂಗ್ ಶೋಷಣೆಗೆ ಮುಕ್ತಿ ಕಾಣಿಸಲು ನಾವೆಲ್ಲರೂ ಟೊಂಕಕಟ್ಟಿ ನಿಲ್ಲಬೇಕಿದೆ.



ಹೊಸ ಹುರುಪಿನಿಂದ ಕೆಲಸವನ್ನು ನಿರ್ವಹಿಸಲು ಮುಂದಾಗುವ ಬಸವರಾಜ್ ಬೊಮ್ಮಾಯಿಗೆ ಸಲೀಸಾಗಿ ಮುನ್ನಡೆಯಲು ಸಾಧ್ಯವಿಲ್ಲ ಒಳಗೊಳಗೆ ಆರ್‌ಎಸ್‌ಎಸ್ ಮೂಲದ ನಾಯಕರು ತೊಡರು ಹಾಕುವ ಕೆಲಸವಂತೂ ಮಾಡಿಯೇ ತೀರುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈಗ ಆರಂಭದಲ್ಲೇ ವಿಘ್ನಗಳು ಸಂಭವಿಸುವ ಸಾಧ್ಯತೆಗಳು ಇವೆ. ಯಾಕೆಂದರೆ ಸಚಿವ ಸ್ಥಾನ ಸಿಗದ ಶಾಸಕರು ಸಹಜವಾಗಿಯೇ ಬಂಡೇಳುವ ಲಕ್ಷಣಗಳಿವೆ.



# ಏನೇ ಆದ್ರೂ ಸರ್ಕಾರದ ಆಯಸ್ಸು 8-10 ತಿಂಗಳು ಅಷ್ಟೇ

● ವತಿಮ

ಬಹುಶಃ ಬಿಜೆಪಿ ಸರ್ಕಾರದಲ್ಲಿ ಬಿ.ಎಸ್.ಯಡಿಯೂರಪ್ಪ ಇದ್ದಿದ್ದರೆ ಇದೆಲ್ಲವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದರು ,ಹೊಸ ಮುಖ್ಯಮಂತ್ರಿಯಾಗಿರುವ ಬಸವರಾಜ್ ಬೊಮ್ಮಾಯಿ ಅತ್ಯಂತ ತಾಳ್ಮೆ ಮತ್ತು ವಿನಯೆಯತೆಯುಳ್ಳವರು ಎನ್ನುವದರಲ್ಲಿಎರಡು ಮಾತಿಲ್ಲ ಆದರೆ ಸಚಿವರಾಗಿ ಮಾಡಿದ ಕಾರ್ಯ ಬೇರೆ ಒಬ್ಬ ಸಿಎಂ ಆಗಿ ಆ ಸ್ಥಾನದಲ್ಲಿ ಕೂತು ಎಲ್ಲವನ್ನೂ ನಿಭಾಯಿಸುವ ಆ ತಾಕತ್ತು ಇದೆಯಲ್ಲ ಅದು ಅಷ್ಟು ಸುಲಭದ ಮಾತಲ್ಲ ಅದು ಬೊಮ್ಮಾಯಿ ಅವರಿಗೆ ಒಂದಿಷ್ಟು ಕಷ್ಟವಾದರೂ ಆಗಬಹುದು, ಎಲ್ಲವನ್ನೂ ನಿಭಾಯಿಸುವ ಶಕ್ತಿವಂತರಂತು ಆಗಿರಲಾರರು.

ಯಾಕೆಂದರೆ ಬಿಜೆಪಿಗೆ ವಲಸೆ ಬಂದಿರುವ 17 ಮಂದಿ ಶಾಸಕರನ್ನು ವಿಶ್ವಾಸಕ್ಕೆ ತಗೆದುಕೊಳ್ಳುವುದಿದೆಯಲ್ಲ ಅದು ಅಷ್ಟು ಸುಲಬದ ಮಾತಲ್ಲ , ಅವರು ಬಂದಿರುವ ಷರತ್ತುಗಳು ಏನು ಎನ್ನುವ ತಿಳುವಳಿಕೆ ಇದ್ದರೂ ಕೂಡ ಅದನ್ನು ನಿಭಾಯಿಸುವ ಶಕ್ತಿ ಸಾಮರ್ಥ್ಯದ ಬಗ್ಗೆ ಅನುಮಾನಮೂಡುತ್ತಿದೆ.

ಹೊಸ ಹುರುಪಿನಿಂದ ಕೆಲಸವನ್ನು ನಿರ್ವಹಿಸಲು ಮುಂದಾಗುವ ಬಸವರಾಜ್ ಬೊಮ್ಮಾಯಿಗೆ ಸಲೀಸಾಗಿ ಮುನ್ನಡೆಯಲು ಸಾಧ್ಯವಿಲ್ಲ ಒಳಗೊಳಗೆ ಆರ್‌ಎಸ್‌ಎಸ್ ಮೂಲದ ನಾಯಕರು ತೊಡರು ಹಾಕುವ ಕೆಲಸವಂತೂ ಮಾಡಿಯೇ ತೀರುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಈಗ ಆರಂಭದಲ್ಲೇ ವಿಘ್ನಗಳು ಸಂಭವಿಸುವ ಸಾಧ್ಯತೆಗಳು ಇವೆ. ಯಾಕೆಂದರೆ ಸಚಿವ ಸ್ಥಾನ ಸಿಗದ ಶಾಸಕರು ಸಹಜವಾಗಿಯೇ ಬಂಡೇಳುವ ಸಾಧ್ಯತೆಗಳೇ ಹೆಚ್ಚು . ಇದರ ಜೊತೆಗೆ ವಲಸೆ ಬಂದ 17 ಜನರಿಗೆ ಸಚಿವ ಸ್ಥಾನ ಸಿಗದಿದ್ದರೆ ಮುಂದಿನ ಅಲೋಚನೆಗಳನ್ನು ಮಾಡುತ್ತಾರೆ ಅವರು ಬಿಜೆಪಿಯನ್ನು ತೊರೆಯುವ ನಿರ್ಧಾರಗಳನ್ನು ಮಾಡುವ ಲಕ್ಷಣಗಳಿವೆ

## ಮುಂದಿನ ಚುನಾವಣೆಯೇ ಮಾದದಂಡ

ಭವಿಷ್ಯದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕ್ಯಾಬಿನೆಟ್ ರಚನೆಗೆ ಮುಂದಾಗಿರುವ ಹೈಕಮಾಂಡ್ ಈಗಾಗಲೇ ಆಯ್ಕೆಗೆ ಕೆಲ ಮಾನದಂಡಗಳನ್ನು ಹಾಕಿದೆ. ಸಂಪುಟ ಸೇರಲು ಕ್ಲೀನ್ ಇಮೇಜ್ ಹೊಂದಿರಬೇಕು. ಜಾತಿವಾರು,











ಪ್ರಾದೇಶಿಕವಾರು ಆಧಾರದಲ್ಲಿ ಯುವ ಮುಖಗಳಿಗೆ ಆದ್ಯತೆ. ಭ್ರಷ್ಟಾಚಾರ, ಕುಟುಂಬ ರಾಜಕಾರಣ ಸೇರಿ ಯಾವುದೇ ಆರೋಪ ಇರಬಾರದು.ಅಂತವರನ್ನೇ ಸಚಿವ ಸಪುಟಕ್ಕೆ ಸೇರಿಸಿಕೊಳ್ಳುವ ಇರಾದೆ ಹೈಕಮಾಂಡ್ ಹೊಂದಿದೆ ಹೀಗಾಗಿ ಹೊರಗೆ ಉಳಿಯುವ ಹಿರಿಯರ ರಾಜಕೀಯ ತಂತ್ರಗಾರಿಕೆಗಳು ಸುಮ್ಮನಿರುವುದಿಲ್ಲ ಕಡ್ಡಿ ಆಡಿಸುವ ಕೆಲಸಗಳಂತೂ ಮಾಡಿಯೇ ಸಿದ್ದ ಹೀಗಾಗಿ ಪಕ್ಷದಲ್ಲಿ ಬಂಡಾಯ ಎನ್ನುವ ಗಾಳಿ ಸದಾ ಇದ್ದೇ ತೀರುತ್ತದೆ ಅದನ್ನು ಶಮನ ಮಾಡಲು ಹೋಗಿ ಇನ್ನೇನೋ ಆಗುವ ಎಲ್ಲಾ ಲಕ್ಷಣಗಳು ಇವೆ ಹೀಗಾಗಿಯೆ ಸರ್ಕಾರ ಬಹುತೇಕ 8 –10 ತಿಂಗಳುಗಳ ಕಾಲ ನಡೆದರೆ ಅದು ಹೆಚ್ಚು ಅನಿಸುತ್ತದೆ ಅಷ್ಟು ಹೊತ್ತಿದೆ ಬಂದ 17 ಜನರು ಬಹುತೇಕ ತಮ್ಮ ಮೂಲ ಪಕ್ಷದತ್ತ ಕಾಲು ಕೀಳುವು ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ.

ಪಕ್ಷಕ್ಕೆ ಮುಂದಿನ 10–15 ವರ್ಷ ದುಡಿಯಬಲ್ಲ ಯುವಕರಿಗೆ ಅವಕಾಶ ನೀಡಬೇಕು. ಸರ್ಕಾರಕ್ಕೆ ಇಮೇಜ್, ಪಕ್ಷದ ವರ್ಚಸ್ಸು ಹೆಚ್ಚಿಸುವ ಯುವ ಮುಖಗಳಿಗೆ ಆದ್ಯತೆ ಜೊತೆಗೆ ಶಿಕ್ಷಣ, ಸಂಘಟನಾ ಚತುರತೆ, ಜನರ ನಡುವೆ ಬೆರೆಯುವ ನಾಯಕನಿಗೆ ಅವಕಾಶ ಕೊಡುವ ಸಾಧ್ಯತೆ ಇದೆ. ಪ್ರತಿ ಬಾರಿ ಸಂಪುಟದಲ್ಲಿ ಸಾಧಾರಣವಾಗಿ ಹಿರಿಯರಿಗೆ ಮಣೆ ಹಾಕಲಾಗುತ್ತದೆ. ಆದರೆ ಈ ಬಾರಿ ಶೇ.40ರಷ್ಟು ಮಂದಿ ಹಿರಿಯರು, ಶೇ.60ರಷ್ಟು ಮಂದಿ ಯುವ ಮುಖಗಳಿಗೆ ಸ್ಥಾನ ಕಲ್ಪಿಸಲು ಹೈಕಮಾಂಡ್ ಕಾರ್ಯತಂತ್ರ ಮಾಡಿದೆ ಎನ್ನಲಾಗಿದೆ.

## ಇಲ್ಲಿಂದಿಲೇ ವಿಘ್ನಗಳು ಆರಂಭ

ಹೈಕಮಾಂಡ್ ಇಂತ ಎಲ್ಲಾ ಷರತ್ತುಗಳನ್ನು ಹಾಕಿದೆ ಯಾಕೆಂದರೆ ಪಕ್ಷ ಮುಂದಿನ ಬಾರಿ ಅಧಿಕಾರಕ್ಕೆ ಬರಬೇಕು ಎಂದು, ಆದರೆ ಅದರ ಅರಿವು ಇಲ್ಲದ ಅಧಿಕಾರವೇ ಮುಖ್ಯ ಪಕ್ಷ ನಗಣ್ಯ ಎನ್ನುವವರಿಗೆ ಇದೆಲ್ಲವೂ ಒಗ್ಗುವುದಿಲ್ಲ ನಮಗೆ ಅಧಿಕಾರ ಬೇಕು ಇಲ್ಲದಿದ್ದರೆ ಮುಂದೆ ಆಟ ನೋಡಿ ಎನ್ನುವವರ ಗುಂಪು ವಿಘ್ನಗಳಿಗೆ ಮುಂದಾಗುತ್ತಾರೆ . ಬಹುತೇಕ ಹಿರಿಯ ನಾಯಕರಿಗೆ ಸಚಿವ ಸ್ಥಾನ ಸಿಗದೆ ಇರುವ ಕಾರಣ ಅವರು ಅಸಾಮಾಧಾನವಾಗುವುದು ಸಹಜವೇ ಆದರೆ ಅವರು ಧೈರ್ಯವಾಗಿ ಮುನ್ನಗ್ಗದೆ ಇನ್ನೊಬ್ಬರ ಗಾಳವನ್ನಾಗಿ ಮಾಡಿಕೊಂಡು ಬಂಡಾಯ ಹೇಳುವ ಸಾಧ್ಯತೆಗಳು ಹೆಚ್ಚಾಗುತ್ತವೆ ಎನ್ನುವ ಸುಳಿವು ಆರಂಭದಲ್ಲೆ ಕಾಣುತ್ತಿವೆ ಹೀಗಾಗಿ ಬೊಮ್ಮಾಯಿ ಅವರು ನಿಭಾಯಿಸುವ ಶಕ್ತಿಯ ಮೇಲೆ ನಿಂತಿದೆ ಅಧಿಕಾರ ಹೀಗಾಗಿಯೇ ಅವರಿಗೆ ಅತ್ಯಂತ ತಾಳ್ಮೆ ಶಕ್ತಿ ಬೇಕಾಗುತ್ತದೆ ಅದಿದ್ದರು ಕೂಡ ಕೆಂಗೆಟ್ಟು ಹೋಗುವ ಸಾಧ್ಯತೆಗಳು ಇವೆ.

● 6ನೇ ಪುಟಕ್ಕೆ...

## ಬಿಎಸ್‌ವೈ ಮಾತು ಕೇಳದಿದ್ದರೆ ಅಷ್ಟೆ!

ಇನ್ನೂ ಬಸವರಾಜ್ ಬೊಮ್ಮಾಯಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಅವರ ಮಾತನ್ನು ಕೇಳದೆ ಹೋದರೆ ಅವರ ಸರ್ಕಾರ ಬರಾಕಸ್ತ್ ಅಂತು ನಿಜವೇ, ಯಾಕೆಂದರೆ ಅವರ ಪ್ರತಿ ಹೆಜ್ಜೆ ಗುರಿತು ಕೂಡ ಅಷ್ಟೆ ಸೂಕ್ಷ್ಮತೆ ಇರುತ್ತದೆ ಅವರು ಹೇಳಿದ ಕೆಲಸಗಳನ್ನೇನಾದರೂ ಬೊಮ್ಮಾಯಿ ಅವರು ನಿರ್ಲಕ್ಷ್ಯಸಿದರೆ ನಿಜಕ್ಕೂ ಕುರ್ಚಿಯಿಂದ ಕೆಳಗಿಳಿಸುವ ತಂತ್ರವಂತೂ ಮಾಡಿಯೇ ತೀರುತ್ತಾರೆ, ಅದು ಹಿಂದೆಯೂ ನಡೆದಿದೆ. ಅದು ಬಸವರಾಜ್ ಬೊಮ್ಮಾಯಿ ಅವರಿಗೆ ಚನ್ನಾಗಿ ಅರಿವಿದೆ ಆದರೆ.. ಬಿಎಸ್‌ವೈ ಹೇಳುವ ಎಲ್ಲಾ ಕೆಲಸಗಳನ್ನು ಮಾಡುವಲ್ಲಿ ಬೊಮ್ಮಾಯಿ ಅವರು ಹಿಂದೇಟು ಆಕಬಹುದು ಯಾಕೆಂದರೆ ಅವರು ಹೇಳುವ ಕೆಲಸಗಳು ಹಾಗೆಯೇ ಇರುತ್ತವೆ ಹಾಗಾಗಿ ಒಂದೊಮ್ಮೆ ಬಿಎಸ್‌ವೈ ಕೆಂಗಣ್ಣಿಗೆ ಗುರಿಯಾಗುವ ಸಾಧ್ಯತೆಗಳೂ ಇವೆ ಆ ವೇಳೆ ಅವರನ್ನು ಇಳಿಸುವ ತಂತ್ರ ಹೂಡುವದರಲ್ಲಿ ಎರಡು ಮಾತಿಲ್ಲ.

# ಫ್ಯಾಸಿಸ್ಟ್ ಕನ್ನಡಿಯನ್ನು ಒಡೆಯಿರೆಂಬ ಹರಾರಿ ಕಿವಿಮಾತು



ದೆಹಲಿ ದೃಷ್ಟಿ

ಡಿ.ಉಮಾಪತಿ
ಹಿರಿಯ ಪತ್ರಕರ್ತರು



ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನದ ಮಹಾಸ್ಫೋಟಕ್ಕೆ ಭೂಮಂಡಲ ಸಾಕ್ಷಿಯಾಗಿದೆ. ಮಾಹಿತಿ ಅಥವಾ ಡೇಟಾವನ್ನು ಹೊಸ ಪ್ರಬಲ ಅಸ್ತ್ರ ಎಂದು ಬಣ್ಣಿಸಲಾಗುತ್ತಿದೆ. ಡೇಟಾವನ್ನು ನಿಯಂತ್ರಿಸುವಾತನೇ ಸರ್ವಶಕ್ತ ಎಂಬುದು ಈ ಯುಗದ ಹೊಸ ಸತ್ಯ.


ಚಿಂತಕರು, ತಂತ್ರಜ್ಞನಿಪುಣರು ಕೆಲವು ವರ್ಷಗಳಿಂದ ಪ್ರತಿಪಾದಿಸುತ್ತ ಬಂದಿರುವ ಈ ಅಂಶ ದಿನಗಳೆದಂತೆ ಮತ್ತಷ್ಟು ಗಟ್ಟಿಯಾಗಿ ಸ್ಫುಟವಾಗಿ ಹರಳುಗಟ್ಟತೊಡಗಿದೆ. ಜೊತೆ ಜೊತೆಗೆ ಸರ್ವಾಧಿಕಾರಗಳು, ಧೃವೀಕರಣ ರಾಜಕಾರಣ ಬೇರಿಳಿಸುತ್ತಿರುವುದನ್ನು ಕಾಣುತ್ತಿದ್ದೇವೆ.



ಜನಸಮುದಾಯಗಳು ತಮ್ಮ ಮೇಲೆ ಪ್ರಯೋಗಿಸಲಾಗಿರುವ ಮಂಕುಬೂದಿಯನ್ನು ಕೊಡವಿಕೊಳ್ಳದಿದ್ದರೆ ಈ ಅಪಾಯ ಕೈಮೀರಲಿದೆ ಗಹಗಹಿಸಲಿದೆ. ಈ ಎಚ್ಚರಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಈ ಸನ್ನಿವೇಶದಲ್ಲಿ ಇಸ್ರೇಲಿ ಮೂಲದ ಜಗತ್ಪ್ರಸಿದ್ಧ ಯುವ ಚಿಂತಕ ಯುವಾಲ್ ನೋವಾ ಹರಾರಿ ಅವರ ಕೆಳಕಂಡ ಚಿಂತನೆಗೆ ಕಿವಿಗೊಟ್ಟು ಧೇನಿಸಬೇಕಿದೆ.

ಹರಾರಿ ಹೇಳುತ್ತಾರೆ?..



ಆರಂಭದಲ್ಲಿ ಭೂವಿಸ್ತಾರ, ಆನಂತರ ಯಂತ್ರಗಳು, ಇದೀಗ ಡೇಟಾ ಬಹುದೊಡ್ಡ ಆಸ್ತಿಯೆಂದು ಪರಿಗಣಿಸಲಾಗಿದೆ. ಡೇಟಾವನ್ನು ನಿಯಂತ್ರಿಸುವವರು ಭಾರೀ ಜನಸಮೂಹಗಳನ್ನು ಮತ್ತು ಆ ಮೂಲಕ ಅಧಿಕಾರವನ್ನು ನಿಯಂತ್ರಿಸುತ್ತಾರೆ ಎನ್ನುವ ವಾದ ಊರ್ಜಿತಗೊಂಡಿದೆ.


ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉಂಟಾಗಿರುವ ಕ್ರಾಂತಿಯೇ ಉದಾರವಾದಿ ಜನತಂತ್ರದ ಪಾಲಿಗೆ ಬಲು ದೊಡ್ಡ ಬೆದರಿಕೆಯಾಗಿ ಪರಿಣಮಿಸಿದೆ. ಮಾಹಿತಿ ತಂತ್ರಜ್ಞಾನವು ಕಟಾವು ಮಾಡಿರುವ ಡೇಟಾದ ಮಹಾ ಇಳುವರಿಯು ಜನತಂತ್ರಗಳಿಗೆ ಶಕ್ತಿ ತುಂಬುವ ಬದಲು ಸರ್ವಾಧಿಕಾರಗಳ ಕೈ ಬಲಪಡಿಸಲಿದೆ

ಸರ್ವಾಧಿಕಾರಗಳು ತಮ್ಮ ಲಾಭಕ್ಕಾಗಿ ಎಲ್ಲ ಡೇಟಾವನ್ನು ಒಂದೆಡೆ ಕೇಂದ್ರೀಕರಿಸುವಲ್ಲಿ ಯಶಸ್ವಿಯಾಗಿವೆ. ತಂತ್ರಜ್ಞಾನ ಬೆಳೆದಂತೆಲ್ಲ ಅಪಾರ ಡೇಟಾವನ್ನು ಒಂದೆಡೆ ಸಂಸ್ಕರಿಸಿ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಸಲೀಸಾಗಿ ಹೋಗಿದೆ.

ಮಾಹಿತಿ ತಂತ್ರಜ್ಞಾನ ಮತ್ತು ಜೀವತಂತ್ರಜ್ಞಾನ (ಐಟಿ ಮತ್ತು ಬಿಟಿ) ಒಂದರೊಡನೆ ಮತ್ತೊಂದು ವಿಲೀನಗೊಳ್ಳುವ ವಿದ್ಯಮಾನವು 'ಆಲ್ಗರಿದಮ್' ಗಳನ್ನು ಸೃಷ್ಟಿಸಿದೆ. ಈ 'ಆಲ್ಗರಿದಮ್' ಗಳು ವ್ಯಕ್ತಿಗಳ ಅನಿಸಿಕೆ ಆಶಯ ಆಯ್ಕೆಗಳನ್ನು ಖುದ್ದು ಅವರೇ ಅರಿತಿರುವುದಕ್ಕಿಂತ ಹೆಚ್ಚು ನಿಕರವಾಗಿ ನಿಚ್ಚಳವಾಗಿ ಅರಿಯಬಲ್ಲವು. ಸರ್ಕಾರದಂತಹ ಸಂಸ್ಥೆಗಳು ಈ ತಂತ್ರಜ್ಞಾನದ ಲಾಭ ಪಡೆದು ಜನಸಮುದಾಯಗಳ ಒಲವು ನಿಲುವುಗಳನ್ನು ಮುಂದಾಗಿಯೇ ಕಂಡುಕೊಳ್ಳಬಲ್ಲವು. ಆವರ ಭಾವನೆಗಳನ್ನು ತಮಗೆ ಬೇಕಾದಂತೆ ತಿದ್ದಿ ತೀಡಬಲ್ಲವು. ಉದಾಹರಣೆಗೆ ತನ್ನ ಜನರಿಗೆ ಉತ್ತಮ ಆರೋಗ್ಯ ವ್ಯವಸ್ಥೆಯನ್ನು ಕಲ್ಪಿಸಲಾರದ ಸರ್ವಾಧಿಕಾರಿಯೊಬ್ಬನು ತನ್ನ ಜನರು ತನ್ನನ್ನು ಪ್ರೀತಿಸುವಂತೆಯೂ ಪ್ರತಿಪಕ್ಷಗಳನ್ನು ದ್ವೇಷಿಸುವಂತೆಯೂ ಮಾಡಬಲ್ಲ. ಅಂತಹ ವಿರೋಧಾಭಾಸದ ಪರಿಸ್ಥಿತಿಯಲ್ಲಿ ಜನತಂತ್ರ ಉಳಿದು ಬೆಳೆಯಲಾರದು. ಅಂತಹ ವಾತಾವರಣದಲ್ಲಿ ಜನತಂತ್ರವು ಸರಿತಪ್ಪುಗಳನ್ನು ವಿವೇಚಿಸುವ ಮಾನವ ಆಲೋಚನಾ ಶಕ್ತಿಯ ಆಧಾರವನ್ನು ಕಳೆದುಕೊಳ್ಳುತ್ತದೆ. ಬುದ್ಧಿಯ ಜಾಗವನ್ನು ಭಾವುಕತೆ ಆವರಿಸುತ್ತದೆ. ನಮ್ಮ ಭಾವನೆಗಳನ್ನು ಹ್ಯಾಕ್ ಮಾಡಿ ಧೃವೀಕರಣ ಮಾಡಿ ಜನತಂತ್ರವನ್ನು ನಾಶ ಮಾಡಲು ಬಳಸಿಕೊಳ್ಳುತ್ತಾರೆ. ಜನತಂತ್ರವು ಕೇವಲ ಒಂದು ಭಾವನಾತ್ಮಕ ಗೊಂಬೆಯಾಟ ಆಗಿಬಿಡುತ್ತದೆ.

ಇಂತಹ ಅಪಾಯವನ್ನು ತಪ್ಪಿಸಲು ಭಾರೀ ಡೇಟಾ ಒಂದೇ ಕಡೆ ಕೇಂದ್ರೀಕೃತ ಆಗುವುದನ್ನು ತಪ್ಪಿಸಬೇಕು. ಡೇಟಾ ನಿಯಂತ್ರಿಸುವವರು ನಮ್ಮ ಭಾವನೆಗಳನ್ನು ತಮ್ಮ ಅಗತ್ಯಗಳಿಗೆ ತಕ್ಕಂತೆ ತಿದ್ದಿ ತೀಡಿಕೊಳ್ಳುವುದು ಆಗ ಸಾಧ್ಯವಾಗುವುದಿಲ್ಲ.

ದೈನಂದಿನ ಗ್ರಾಹಕ ಸರಕು ಸರಂಜಾಮುಗಳನ್ನು ನಮಗೆ ಮಾರಾಟ ಮಾಡಲು ಮಾಹಿತಿ ತಂತ್ರಜ್ಞಾನದ ಆಲ್ಗರಿದಂ ವಿಧಾನದ ಪ್ರಯೋಗ ಈಗಾಗಲೆ ಜಾರಿಯಲ್ಲಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಜನತಂತ್ರದ ಶತೃಗಳು ಇದೇ ವಿಧಾನವನ್ನು ಅನುಸರಿಸಿ ಭಯ, ದ್ವೇಷ ಹಾಗೂ ಒಣಪ್ರತಿಷ್ಠೆಗಳನ್ನು ಮಾರಾಟ ಮಾಡುತ್ತಿದ್ದಾರೆ. ಇವುಗಳ ಮಾರಾಟ ಶೂನ್ಯದಲ್ಲಿ ಸಾಧ್ಯವಿಲ್ಲ. ಅವರು ಜನಸಮೂಹಗಳ ದೌರ್ಬಲ್ಯಗಳನ್ನು ಗುರುತಿಸಿ ಅವುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ. ತಮ್ಮ



ದೌರ್ಬಲ್ಯಗಳು ಜನತಂತ್ರದ ಶತೃಗಳ ಕೈಯಲ್ಲಿನ ಅಸ್ತ್ರವಾಗದಂತೆ ಜನಸಮೂಹಗಳು ಜಾಗ್ರತೆ ವಹಿಸಬೇಕು. ದೌರ್ಬಲ್ಯಗಳನ್ನು ಅರಿತು ಇಂತಹ ಎಚ್ಚರಿಕೆ ವಹಿಸುವುದು ಜನರನ್ನು ಫ್ಯಾಸಿಸ್ಟ್ ಕನ್ನಡಿಯಿಂದಲೂ ಕಾಪಾಡುತ್ತದೆ. ಫ್ಯಾಸಿಸಮ್ ನಮ್ಮ ಒಣಪ್ರತಿಷ್ಠೆಯಂತಹ ದೌರ್ಬಲ್ಯಗಳನ್ನು ಬಳಸಿಕೊಂಡು ಬೇರೂರತ್ತದೆ. ನಾವು ಇರುವುದಕ್ಕಿಂತಲೂ ಹೆಚ್ಚು ಸುಂದರವಾಗಿ ನಮ್ಮನ್ನು ತೋರುತ್ತದೆ. ನಮ್ಮನ್ನು ನಾವು ಚೆನ್ನಾಗಿ ಬಲ್ಲೆವಾದರೆ ಈ ಮೋಹಪರವಶತೆಗೆ ಬಲಿ ಬೀಳುವುದು ಸಾಧ್ಯವಿಲ್ಲ. ಸರ್ವಾಧಿಕಾರಿಗಳು ನಿಮ್ಮ ಕಣ್ಣೆದುರಿಗೆ ಫ್ಯಾಸಿಸ್ಟ್ ಕನ್ನಡಿಯೊಂದನ್ನು ಇಡುತ್ತಾರೆ. ಆ ಕನ್ನಡಿಯು ನಿಮ್ಮ ಎಲ್ಲ ಕುರೂಪವನ್ನು ಅಡಗಿಸಿಟ್ಟು ನೀವು ಇರುವುದಕ್ಕಿಂತಲೂ ಹೆಚ್ಚು ಸುಂದರವಾಗಿ ತೋರಿಸುತ್ತದೆ. ನಿಮಗೆ ವಾಸ್ತವದಲ್ಲಿ ಇಲ್ಲದ ಸಲ್ಲದ ಪ್ರಾಮುಖ್ಯತೆಯನ್ನು ತೊಡಿಸುತ್ತದೆ. ಈ ಅವಾಸ್ತವಿಕ ಕನ್ನಡಿಯನ್ನು ಒಡೆಯಿರಿ....

# ಏನೇ ಆದ್ರೂ ಸರ್ಕಾರದ ಆಯಸ್ಸು 8-10 ತಿಂಗಳು ಅಷ್ಟೇ

● 5ನೇ ಪುಟದಿಂದ...

ಹೇಳಿ ಕೇಳಿ ಬಿಜೆಪಿ ಶಿಸ್ತಿನ ಪಕ್ಷ ಎನ್ನುವುದು ನಿಜವಾದರೂ ಶಿಸ್ತಿಗಿಂತ ಅಶಿಸ್ತುಗಳೆ ಹೆಚ್ಚಾಗುತ್ತಿವೆ ಇತ್ತೀಚೆಗೆ ಈಗ ಬಿಎಸ್‌ವೈ ಅಧಿಕಾರದಿಂದ ಇಳಿಯಲು ಅವರು ಮಾಡಿದ ಒಂದೆರಡು ಅಪರಾಧಗಳು ಕಾರಣವಾಗಿವೆ ಅದನ್ನೇ ಇಟ್ಟುಕೊಂಡು ಹೈಕಮಾಂಡ್ ಬಳಿ ಚಾಡಿಹೇಳುವ ಮೂಲಕ ಅವರನ್ನು ಅಧಿಕಾರದಿಂದ ಇಳಿಸಲು ಕಾರಣಕರ್ತರಾದರು. ಪಕ್ಷ ಅಧಿಕಾರಕ್ಕೆ ಬರಲು ಬಿಎಸ್‌ವೈ ಶ್ರಮವೆಲ್ಲವೂ ವ್ಯರ್ಥವಾಯಿತು ಆದರೆ ಯಾವುದೆ ಶ್ರಮವಿಲ್ಲದೆ ಅಧಿಕಾರಕ್ಕೆ ಬಂದಿರುವ ಬಸವರಾಜ್ ಬೊಮ್ಮಾಯಿ ಅವರನ್ನು ಬಿಜೆಪಿ ನಾಯಕರು ಅಷ್ಟು ಸುಲುಭವಾಗಿ ಬಿಡುವುದಿಲ್ಲ ಹಲವು ತೊಂದರೆಗಳನ್ನಂತು ನೀಡಿಯೇ ತೀರುತ್ತಾರೆ. ಚಿವುಟುವ ಕೆಲಸವನ್ನಜು ಮಾಡಿ ಸರ್ಕಾರದವನ್ನು ಕೆಡುವವ ಹಂತಕ್ಕೆ ತರುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ.

## ವಲಸಿಗರ ನಡೆಯೇ ಮುಖ್ಯ


ವಲಸಿಗರನ್ನು ನಿಭಾಯಿಸುವುದೆ ಬಹು ಮುಖ್ಯ ಕೆಲಸ ಬೊಮ್ಮಾಯಿ ಅವರದ್ದು ಯಾಕೆಂದರೆ ಅಧಿಕಾರಕ್ಕಾಗಿಯೇ ಪಕ್ಷವನ್ನು ತೊರೆದು ಬಂದ



17 ಮಂದಿಯ ಪೈಕಿ ಕೆಲವರಿಗೆ ಮಾತ್ರ ಅಧಿಕಾರ ಕೊಟ್ಟು ಉಳಿದವರನ್ನು ಹೊರಗುಳಿಸಿದರೆ ಅವರು ಸುಮ್ಮನಿರಲು ಸಾಧ್ಯವೇ? ಹೇಳಿ ಕೇಳಿ ಈ ಬಾರಿ ಹಿರಿಯ ಶಾಸಕರಿಗೆ ಸಚಿವ ಸ್ಥಾನ ಇಲ್ಲ ಎನ್ನಲಾಗುತ್ತಿದೆ .ಇಲ್ಲಿಯೇ ಆರಂಭವಾಗುತ್ತದೆ ಬಂಡಾಯ. ಈ ಬಂಡಾಯ ಶಮನ ಮಾಡುವುದರಲ್ಲೇ ಬೊಮ್ಮಾಯಿ ಕಾಲಕಳೆಯಬೇಕಾಗುತ್ತದೆ.

ಯಾವುದೇ ಕಾರಣಕ್ಕೂ ವಲಸೆ ಬಂದಶಾಸಕರು ಬಿಜೆಪಿಯಲ್ಲಂತೂ ಶಾಶ್ವತವಾಗಿ ಇರುವವರಲ್ಲ ಅಧಿಕಾರ ಮುಗಿದ ಮೇಲೆ ತಮ್ಮ ಮೂಲ ಸ್ಥಾನಕ್ಕೆ ಹೊರಟು ಹೋಗುವುದರಲ್ಲಿ ಎರಡು ಮಾತಿಲ್ಲ ಅವರು ಬಂದಿರುವ ಉದ್ದೇಶವೇ ಅಧಿಕಾರ ಹೀಗಾಗಿ ಅಧಿಕಾರ ಅನುಭವಿಸಿ ಹೊರಟು ಹೋಗುತ್ತಾರೆ.

ಹಳ್ಳಿ ಹಕ್ಕಿ ವಿಶ್ವನಾಥ್ ಪ್ರಕಾರ ಅಧಿಕಾರಕ್ಕಾಗಿ ನಾವು ಬಂದಿಲ್ಲ ಭ್ರಷ್ಟಸರ್ಕಾರವನ್ನು ಹೊಡೆದುಳಿಸಬೇಕಾಗಿತ್ತು ಅದಕ್ಕಾಗಿ ನಾವು ಕಾಂಗ್ರೆಸ್-ಜೆಡಿಎಸ್ ಬಿಟ್ಟು ಬಿಜೆಪಿ ಸೇರುವ ಮೂಲಕ ಬಿಎಸ್‌ವೈಗೆ ಅಧಿಕಾರ ನೀಡಿದೆವು ಆದರೆ ಅವರು ಭ್ರಷ್ಟರಾದ ಕಾರಣ ಅವರನ್ನು ಕೆಳಗಿಳುವುದು ನಮ್ಮ ಕರ್ತವ್ಯ ಹಾಗಾಗಿ ಅವರನ್ನು ಕೆಳಗಿಳಿಸಿದ್ದೇವೆ ಎನ್ನುತ್ತಾರೆ.





ಇನ್ನೂ ಉಳಿದ ನಾಯಕರು ಅಧಿಕಾರವೇ ಮುಖ್ಯ ಎನ್ನುತ್ತಿದ್ದಾರೆ ಹಾಗಾಗಿ ಕಾಂಗ್ರೆಸ್‌ನಿಂದ ಮೂಲ ಕಾಂಗ್ರೆಸ್‌ನ ಶಾಸಕರು ಬಹುತೇಕ ತಮ್ಮ ಮೂಲ ನಿವಾಸಕ್ಕೆ ತೆರಳುವದುರಲ್ಲಿ ಸಂದೇಹವೇ ಇಲ್ಲ ಹೀಗಾಗಿ ಅವರಿಗೆ ಅಧಿಕಾರ ಸಿಗದಿದ್ದರೆ ಅವು ಇಂದಲ್ಲಾ ನಾಳೆ ಪಕ್ಷವನ್ನು ತೊರೆದು ಹೋಗುತ್ತಾರೆ ಆಗ ಸಹಜವಾಗಿಯೇ ಬಹುಮತವನ್ನು ಬಿಜೆಪಿ ಕಳೆದುಕೊಳ್ಳುವ ಮೂಲಕ ಅಧಿಕಾರ ಹೊರಟು ಹೋಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ ಹೀಗಾಗಿಯೇ ಆಗು ಹೀಗು 8-10 ತಿಂಗಳು ಸರ್ಕಸ್‌ನಲ್ಲೇ ಸರ್ಕಾರ ನಡೆಸಿ ತಥಾಸ್ತು ಹೇಳುವ ಸಾಧ್ಯತೆಳೇ ಹೆಚ್ಚಿವೆ.

ಯಡಿಯೂರಪ್ಪ ನಿರೀಕ್ಷಿಸಿದ ರೀತಿಯಲ್ಲೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ತೆರಳಿದ್ದಾರೆ. ಬಸವರಾಜ ಬೊಮ್ಮಾಯಿ ನೂತನ ಮುಖ್ಯಮಂತ್ರಿಯಾಗಿ ಸರ್ಕಾರ ರಚಿಸಿದ್ದಾಗಿದೆ. ಯಡಿಯೂರಪ್ಪನವರ ಹಿಂದೆ ಕೋಟೆಯಾಗಿ ನಿಂತಿದ್ದ ಲಿಂಗಾಯತ ಸ್ವಾಮಿಗಳು, ಜಗದ್ಗುರುಗಳು, ಮಠಾಧೀಶರು ತಮ್ಮ ಬೆದರಿಕೆ ಕೆಲಸಕ್ಕೆ ಬರಲಿಲ್ಲ ಎಂದು ವ್ಯಘ್ರರಾಗಿದ್ದಾರೆ. ಅವರ ಮುಂದಿನ ನಡೆ ಚುನಾವಣೆಯಲ್ಲಿ ಬಿಜೆಪಿಗೆ ಪಾಠ ಕಲಿಸುವುದು. ಆದರೆ ಲಿಂಗಾಯತ ಬೊಮ್ಮಾಯಿ ಸಿಎಂ ಆಗಿರುವ ಕಾರಣ ಅವರ ಬೆದರಿಕೆ ಠುಸ್ ಆಗಿದೆ. ಒಂದೇ ಕಲ್ಲಿನಲ್ಲಿ ಬಿಜೆಪಿ ಎರಡು ಹಣ್ಣನ್ನು ಉದುರಿಸಿದೆ. ವಿಪರ್ಯಾಸವೆಂದರೆ ಭಿನ್ನವಾಗಿ ಯೋಚಿಸುವವರು ಎಂದು ಭಾವಿಸಿರುವ ನಿಡುಮಾಮಿಡಿ ಮಠದ ಸ್ವಾಮೀಜಿ ಅವರು ಕೂಡಾ ಯಡಿಯೂರಪ್ಪ ಜೊತೆ ನಿಂತು ಗುಂಪಿನಲ್ಲಿ ಗೋವಿಂದ ಆಗಿರುವುದು...

# ಏಕೆ ಹೀಗಾದಿರಿ ನಿಡುಮಾಮಿಡಿ ಸ್ವಾಮೀಜಿ?


ರಾಜಸೂತ್ರ

ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು






ಇತ್ತೀಚಿನ ದಶಕಗಳಲ್ಲಿ ಸ್ವಾಮಿಗಳು, ಮಠಾಧೀಶರು, ಜಗದ್ಗುರುಗಳು ಬೇರೆ ಬೇರೆ ಕಾರಣಗಳಿಗಾಗಿ ಕು-ಖ್ಯಾತರಾಗುತ್ತಿದ್ದಾರೆ. ಯಾವ ಯಾವ ಕಾರಣಕ್ಕಾಗಿ ಮಠಗಳ ಹಿರಿಮೆ ಗರಿಮೆ ಕಳೆಗುಂದುತ್ತಿದೆಯೆನ್ನುವುದು ಬಹುತೇಕ ಎಲ್ಲ ಮಠ, ಸ್ವಾಮಿ, ಜಗದ್ಗುರುಗಳ ಅನುಯಾಯಿಗಳಿಗೆ ಗೊತ್ತಿದೆ. ಭಯದಲ್ಲೋ ಭಕ್ತಿಯಲ್ಲೋ ಮೂಢ ನಂಬಿಕೆಯಲ್ಲೋ ಅವರ ಬಾಯಿ ಕಟ್ಟಿದೆ. ಜಡಭರತ ಕಾವ್ಯನಾಮದಲ್ಲಿ ಜಿ.ಬಿ. ಜೋಷಿಯವರು ನಾಲ್ಕೂವರೆ ದಶಕದ ಹಿಂದೆ ರಚಿಸಿದ "ಸತ್ತವರ ನೆರಳು" ನಾಟಕ ನಮ್ಮ ಮಠಗಳ ಒಳಹೊರಗನ್ನು ಅನಾವರಣಗೊಳಿಸಿ ಸತ್ಯ ಮತ್ತು ಸುಳ್ಳಿನ ನಡುವಣ ಗೆರೆ ಎಷ್ಟು ತೆಳ್ಳಗೆ ಎನ್ನುವುದನ್ನು ಸಾದರಪಡಿಸಿದ್ದರು. ಅದು ಒಂದು ನಾಟಕ ಮಾತ್ರ. ಈಗ ಎಲ್ಲೆಡೆಗಳಲ್ಲೂ "ಸತ್ತವರ ನೆರಳು" ಕಾಣಿಸದಂತೆ ಅಳಿಸಿ ಹಾಕುವ ದೊಡ್ಡಾಟಗಳ ಸರಮಾಲೆಯೇ ನಡೆದಿದೆ.



ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪನವರನ್ನು ಪದಚ್ಯುತಗೊಳಿಸುವ ಯತ್ನ ಕೆಲವು ತಿಂಗಳುಗಳಿಂದ ನಡೆದಿದ್ದು ಮತ್ತು ಆಡಳಿತ ಪಕ್ಷದೊಳಗಿನ ಭಿನ್ನಮತೀಯರು ತಮ್ಮ ಗುರಿಯನ್ನು ಸಾಧಿಸಿದ್ದು ಸರ್ವವೇದ್ಯ ಬೆಳವಣಿಗೆ. ಕರ್ನಾಟಕದ ವಿಶೇಷವೆಂದರೆ ಆಡಳಿತ ಪಕ್ಷದ ಶಾಸಕರು ಮುಖಂಡರೇ ತಮ್ಮ ಪಕ್ಷದ ಮುಖ್ಯಮಂತ್ರಿಯ ತಲೆದಂಡ ಪಡೆದುದು. ಅಧಿಕಾರದಲ್ಲಿರುವ ಪಕ್ಷವೊಂದು ಮುಖ್ಯಮಂತ್ರಿಯನ್ನು ಬದಲಿಸಿದರೆ ಜನಕ್ಕೆ ವಿವರಣೆ ಕೊಡಬೇಕು, ಯಾವ ಕಾರಣಕ್ಕೆ ಈ ಬದಲಾವಣೆ ಎಂದು ಹೇಳಬೇಕು. ಬಿಜೆಪಿ ವರಿಷ್ಠರು ಕದ್ದುಮುಚ್ಚಿ ಆಟ ಆಡುತ್ತಿದ್ದಾರೆ. ಇತ್ತ; ವರಿಷ್ಠರು ಸೂಚಿಸಿದರೆ ಕ್ಷಣ ಮಾತ್ರವೂ ಅಧಿಕಾರಕ್ಕೆ ಅಂಟಿ ಕೂರುವುದಿಲ್ಲ; ಮರುಘಳಿಗೆಯಲ್ಲೇ ರಾಜೀನಾಮೆ ಕೊಟ್ಟು ಪಕ್ಷದ ಸಂಘಟನೆಗೆ ಹೊರಳುತ್ತೇನೆ ಎಂದು ಯಡಿಯೂರಪ್ಪ ಪದೇ ಪದೇ ಹೇಳುತ್ತಿದ್ದುದು ಹೌದಾದರೂ ಅದು ಅವರ ತುಟಿಯಂಚಿನಿಂದ ಬಿದ್ದ ಶಬ್ದಗಳಾಗಿದ್ದವೇ ಹೊರತೂ ಒಡಲಾಳದ ಮಾತಾಗಿರಲಿಲ್ಲ. ರಾಜ್ಯದಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದಾಖಲೆ ಅವರದು. ಆದರೆ ಒಟ್ಟಾರೆ ಸಿಎಂ ಗಾದಿಯಲ್ಲಿ ಅವರು ಕುಳಿತುದು ಐದು ವರ್ಷ 79 ದಿವಸ. ಮೂರು ತಿಂಗಳು ಆರು ತಿಂಗಳು ಆ ಸೀಟಿನಲ್ಲಿ ಕೂತವರೂ ಈ ರಾಜ್ಯದ ಇತಿಹಾಸದಲ್ಲಿ ದಾಖಲಾಗಿದ್ದಾರೆ. ಎಂಟು ವರ್ಷ ದೇವರಾಜ ಅರಸು ಸಿಎಂ ಆಗಿದ್ದ ದಾಖಲೆಯೂ ಇದೆ.



ಯಡಿಯೂರಪ್ಪ ಸ್ಥಾನ ತೆರವು ಮಾಡಿಯಾಗಿದೆ. ಪಕ್ಷ ಸಂಘಟನೆ ಹೊರತಾಗಿ ರಾಜ್ಯಪಾಲರಾಗುವುದಕ್ಕೆ ಅಥವಾ ಸಕ್ರಿಯ ರಾಜಕೀಯ ನಿವೃತ್ತಿಗೇ ಎಂದು ಹೇಳಿ ಮಾಡಿಸಿಟ್ಟಂಥ ಯಾವುದೆ ಹುದ್ದೆಯನ್ನೂ ತಾವು ಒಪ್ಪಿಕೊಳ್ಳುವುದಿಲ್ಲ ಎಂದು ಘೋಷಿಸಿದ್ದಾರೆ. ರಾಜಭವನಗಳು ಇತ್ತೀಚಿನ ದಶಕಗಳಲ್ಲಿ ಅಕ್ಷರಶಃ ಗಂಜಿ ಕೇಂದ್ರಗಳೇ ಆಗಿವೆ. ಮನೆ ಮಠ ಕಳೆದುಕೊಂಡವರಿಗೆ ಎಂದೇ ನಿರ್ಮಿಸುವ ಪುನರ್ವಸತಿ ಕೇಂದ್ರಗಳಂತೆ ರಾಜಭವನ. ಅಲ್ಲಿ ನಡೆಯುವುದು ರಾಜಕಾರಣಿಗಳ ಪುನರ್ವಸತಿ. ತಾವು ಅದಕ್ಕೆ ಒಪ್ಪುವವರಲ್ಲ ಎಂದು ಕಡ್ಡಿಮುರಿದಂತೆ ಯಡಿಯೂರಪ್ಪ ಹೇಳಿದ್ದಾರೆ. ಎಲ್.ಕೆ. ಆಡ್ವಾಣಿ, ಮುರಳಿಮನೋಹರ ಜೋಷಿ ಮುಂತಾದವರು ಗಾಯ ನೆಕ್ಕುತ್ತ ಕುಳಿತಿರುವ ಬಿಜೆಪಿ ಮಾರ್ಗದರ್ಶಕ ಮಂಡಲಿಯ ಭಾಗವೂ ತಾವಾಗುವುದಿಲ್ಲ ಎಂದಿದ್ದಾರೆ. ತಾವು ಹೇಳಿಕೊಂಡಂತೆ ಪಕ್ಷದ ಸಂಘಟನಾ ಕೆಲಸಕ್ಕೆ ಅವರು ಹೊರಳುತ್ತಾರಾ...? ಯಾವ ಸ್ಥಾನಮಾನದಲ್ಲಿ ಅವರು ಈ ಕೆಲಸಕ್ಕೆ ಮುಂದಾಗಲಿದ್ದಾರೆ ಎಂಬಿತ್ಯಾದಿ ಪ್ರಶ್ನೆಗಳಿಗೆ ತಕ್ಷಣದಲ್ಲೇ ಉತ್ತರ ಸಿಗುವ ಸಂಭವ ಕಡಿಮೆ.

ಭ್ರಷ್ಟಾಚಾರದ ಆರೋಪವನ್ನು ವಿರೋಧ ಪಕ್ಷಗಳು ಮಾಡುವುದು ಸಹಜ. ಆದರೆ ಬಿಜೆಪಿ ಶಾಸಕರೇ ಆಗಿರುವ ಬಸವನಗೌಡ ಯತ್ನಾಳ, ಎಚ್.ವಿಶ್ವನಾಥ ಕೂಡಾ ಅದೇ ಜಾಡಿನಲ್ಲಿ ಟೀಕಿಸುವ ಗುತ್ತಿಗೆ ಹಿಡಿದು ಒಂಥರಾ ಯಶಸ್ಸು ಕಂಡಿದ್ದಾರೆ. ಯಡಿಯೂರಪ್ಪ ಸಂಪುಟದ ಸಚಿವ ಸಿ.ಪಿ. ಯೋಗೇಶ್ವರ್ ಪ್ರಕಾರ ಯಡಿಯೂರಪ್ಪ ಮಗ ಬಿ.ವೈ. ವಿಜಯೇಂದ್ರ ಸಚಿವರ ಕೆಲಸದಲ್ಲಿ ಎಲ್ಲ ಮಿತಿಗಳನ್ನೂ ಮೀರಿ ಹಸ್ತಕ್ಷೇಪ ನಡೆಸುತ್ತ ಜನತಂತ್ರದ ಅಣಕ ಮಾಡುತ್ತಿದ್ದರು. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕುಟುಂಬ ರಾಜಕೀಯದ ಅಸಹ್ಯಕರ ಪ್ರದರ್ಶನ ಮುಂತಾದನ್ನೆಲ್ಲ ಯಡಿಯೂರಪ್ಪ ಒಪ್ಪಿಕೊಂಡು ರಾಜೀನಾಮೆ ನೀಡಿದ್ದಾರೆಯೆ...? ತಮ್ಮ ಸರ್ಕಾರದಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರ ನಡೆದಿಲ್ಲ ಎಂದು ಅವರು ಸಿಎಂ ಆಗಿದ್ದಾಗ ಹೇಳಲಿಲ್ಲ. ತಮ್ಮ ಮಗ ಸರ್ಕಾರದ ದೈನಂದಿನ ಕೆಲಸ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದುದು ಸುಳ್ಳು ಎಂದೂ ಅಲ್ಲಗಳೆದಿಲ್ಲ. ಹಾಗಾದರೆ ಯಾವ ಬಗೆಯ ಸಂದೇಶವನ್ನು ಯಡಿಯೂರಪ್ಪ ರವಾನಿಸಲು ಬಯಸಿದ್ದಾರೆ...? ಅರ್ಥ ಮಾಡಿಕೊಳ್ಳಲು ಕೆಲವು ದಿವಸವೇ ಬೇಕಾಗಿದೆ.

ಯಡಿಯೂರಪ್ಪನವರಿಗೆ ಕೋಟೆಯಾಗಿ ನಿಂತವರು ಲಿಂಗಾಯತ ವೀರಶೈವ ಸ್ವಾಮಿಗಳು. ಕರ್ನಾಟಕದಲ್ಲಿ ಮಹತ್ವದ ಲಿಂಗಾಯತ ಮಠಗಳೆನಿಸಿರುವ ಮೈಸೂರಿನ ಸುತ್ತೂರು ಮತ್ತು ಚಿತ್ರದುರ್ಗದ ತರಳಬಾಳು ಮಠಗಳು ಯಡಿಯೂರಪ್ಪ ರಕ್ಷಣೆ ವಿಚಾರದಲ್ಲಿ ಬೀದಿಗೆ ಬರಲಿಲ್ಲ. ಸಿದ್ಧಗಂಗಾ ಮಠದ ಹಿರಿಯ ಸ್ವಾಮಿಗಳು ಈಗ ಇದ್ದಿದ್ದರೆ ಆ ಮಠದ ನಿಲುವು ಏನಾಗಿರುತ್ತಿತ್ತೋ ಗೊತ್ತಿಲ್ಲ. ಈಗಿನ ಸ್ವಾಮಿಗಳಂತೂ ಯಡಿಯೂರಪ್ಪ ಪರವಾಗಿ ನಿಂತರು. ಇವರೆಲ್ಲರ ಜೊತೆಗೆ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಕಾಂಗ್ರೆಸ್ ಶಾಸಕ ಶ್ಯಾಮನೂರು ಶಿವಶಂಕರಪ್ಪ, ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನಕ್ಕಾಗಿ ಹೋರಾಡಿದ ಮುಖಂಡರಲ್ಲಿ ಒಬ್ಬರಾಗಿರುವ ಕಾಂಗ್ರೆಸ್ ಶಾಸಕ ಎಂ.ಬಿ. ಪಾಟೀಲರು ಬಹಿರಂಗವಾಗಿಯೇ ಯಡಿಯೂರಪ್ಪ ಜೊತೆ ನಿಂತರು. ಆದರೆ ಅದೇ ಅಖಿಲ ಭಾರತ ವೀರಶೈವ ಮಹಾಸಭಾದ ಉಪಾಧ್ಯಕ್ಷ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶಂಕರ ಬಿದರಿಯವರು ಯಡಿಯೂರಪ್ಪ ವಿರುದ ಕಿಡಿ ಹಾರಿಸಿದರು. ಯಡಿಯೂರಪ್ಪನವರಿಂದ ಯಾರಿಗೆ ಒಳಿತಾಗಿದೆ ಎಂಬ ಪ್ರಶ್ನೆಯನ್ನು ಬಿದರಿಯವರು ಟಿವಿ ಸಂದರ್ಶನವೊಂದರಲ್ಲಿ ಹೇಳಿದ್ದು ಗಮನಾರ್ಹ. ಮೇಲೆ ಉಲ್ಲೇಖಿಸಿದ ಮಠಗಳ ಹೊರತುಪಡಿಸಿದರೆ ಉಳಿದ ಮಠಾಧೀಶರಲ್ಲಿ ಅನೇಕರಿಗೆ ಸ್ವಂತಿಕೆ ಇಲ್ಲ ಎನ್ನುವುದು ಗೊತ್ತಿರುವ ಸಂಗತಿ. ಹಿಂಡಿನೊಂದಿಗೆ ಹೆಜ್ಜೆ ಹಾಕುವುದರ ಆಚೆಗೆ ಅವರು ಯೋಚನೆ ಮಾಡುವವರಲ್ಲ.



ಲೆಕ್ಕಕ್ಕುಂಟು ಆಟಕ್ಕಿಲ್ಲ ಎನ್ನುತ್ತಾರಲ್ಲ ಹಾಗೆ. ಆದರೆ ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಆ ಗುಂಪಿಗೆ ಸೇರದೆ ತಮ್ಮ ಸ್ವಂತ ಆಚಾರ ವಿಚಾರಗಳಿಗಾಗಿಯೇ ಹೆಸರಾದವರು. ಅವರು ಅರಗಿಸಿಕೊಂಡಿರುವ ಎಡಪಂಥೀಯ ವಿಚಾರಧಾರೆ ಅವರೊಂದಿಗೆ ಮಾತನಾಡಿದ ಯಾರಿಗೇ ಆದರೂ ತಟ್ಟುತ್ತದೆ. ಮಾರ್ಕ್ಸ್‌ನ ಬರಹಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದ ಸ್ವಾಮೀಜಿಗಳಲ್ಲಿ ಒಬ್ಬರು ಗದುಗಿನ ತೋಂಟದಾರ್ಯ ಸ್ವಾಮೀಜಿ. ಅವರು ಈಗ ಬದುಕಿಲ್ಲ. ಇನ್ನೊಬ್ಬರು ನಿಡುಮಾಮಿಡಿ ಸ್ವಾಮೀಜಿ. 12ನೆ ಶತಮಾನದಲ್ಲಿ ಸಾಮಾಜಿಕ ಐತಿಹಾಸಿಕ ಅಗತ್ಯವಾಗಿ ಘಟಿಸಿದ ಕಲ್ಯಾಣ ಕ್ರಾಂತಿಯನ್ನು ಅರ್ಥ ಮಾಡಿಕೊಂಡಿರುವವರಲ್ಲಿ ನಿಡುಮಾಮಿಡಿ ಸ್ವಾಮೀಜಿ ನಿಸ್ಸಂಶಯವಾಗಿ ಒಬ್ಬರು. ಇತರ ಲಿಂಗಾಯತ ವೀರಶೈವ ಸ್ವಾಮೀಜಿಗಳದು ಒಂದು ತೂಕವಾದರೆ ನಿಡುಮಾಮಿಡಿಯವರದೇ ಒಂದು ತೂಕ. ಅವರ ಮಾತಿಗೆ ವೈಚಾರಿಕ ವಲಯದಲ್ಲಿ ಅಷ್ಟು ಬೆಲೆ. ವೀರಶೈವ ಎನ್ನುವುದು ವೈದಿಕದಂತೆ ಕರ್ಮಠ ಯೋಚನೆಗಳ ಹೊಂಡ. ಆ ಹೊಂಡವೇ ಅಲ್ಲಿಯ ಜಗತ್ತು. ಆದರೆ ಲಿಂಗಾಯತ ಹಾಗಲ್ಲ. ಜಾತಿ, ಮತ, ವರ್ಗ, ವರ್ಣ, ಲಿಂಗ ಅಸಮಾನತೆ ವಿರುದ್ಧ ಸಿಡಿದೆದ್ದ ಧರ್ಮ ಅದು. ವರ್ಗ ಮತ್ತು ವರ್ಣದ ವಿರುದ್ಧ ಬಸವಾದಿ ಶರಣರು ನಡೆಸಿದ ಚಳವಳಿ ಹೋರಾಟ ಹಳ್ಳ ಹಿಡಿಯುವ ಸಂದರ್ಭಗಳಲ್ಲೆಲ್ಲ ತೋಂಟದಾರ್ಯರಂಥವರು ನಿಡುಮಾಮಿಡಿಯಂಥವರು ಪ್ರಕಾಶಕ್ಕೆ ಬಂದು ಹತಾಶ ಸ್ಥಿತಿಗೆ ತಡೆಗೋಡೆಯಾಗಿ ನಿಂತಿದ್ದಾರೆ. ಈಗ ನೋಡಿದರೆ ನಿಡುಮಾಮಿಡಿ ಸ್ವಾಮೀಜಿಯವರೂ ಲಿಂಗಾಯತ ಸ್ವಾಮಿ ಸಮುದಾಯದೊಂದಿಗೆ ಸೇರಿ ಯಡಿಯೂರಪ್ಪ ಜಿಂದಾಬಾದ್ ಎನ್ನುತ್ತಿದ್ದಾರೆ. ಆ ಮೂಲಕ ಅವರೂ ಕೂಡಾ ಗುಂಪಿನಲ್ಲಿ ಗೋವಿಂದಾ ಆಗಿದ್ದಾರೆ. ಯಡಿಯೂರಪ್ಪನವರೇ ಮುಖ್ಯಮಂತ್ರಿಯಾಗಿ ಯಾಕೆ ಮುಂದುವರಿಯಬೇಕು ಎಂಬುದನ್ನು ವಿವರಿಸಿ ಪ್ರಕಟಣೆಗೆ ಸ್ವಾಮೀಜಿ ಬಿಡುಗಡೆ ಮಾಡಿರುವ ನಾಲ್ಕು ಪುಟಗಳ ಹೇಳಿಕೆ ನಿಡುಮಾಮಿಡಿ ಮಠ ಇದುವರೆಗೆ ಅಂದರೆ ಈ ಸ್ವಾಮೀಜಿ ಕಾಲಾವಧಿಯಲ್ಲಿ ನಡೆದುಕೊಂಡು ಬಂದಿರುವ ನೀತಿನಿಷ್ಟುರತೆಗೆ ತಕ್ಕುದಾದ ರೀತಿಯಲ್ಲಿಲ್ಲ. ಯಡಿಯೂರಪ್ಪ ಸರ್ಕಾರದ ಭ್ರಷ್ಟ ನಡವಳಿಕೆಗಳನ್ನು ಟೀಕಿಸುವ ಉಸಾಬರಿಗೆ ಸ್ವಾಮೀಜಿ ಹೋಗಿಲ್ಲ; ಯಡಿಯೂರಪ್ಪ ಕುಟುಂಬದ ರಾಜಕೀಯ ಹಸ್ತಕ್ಷೇಪದ ವಿಚಾರದಲ್ಲಿ ತುಟಿಪಿಟಿಕ್ ಎಂದಿಲ್ಲ. ಚುನಾವಣಾ ಆಧರಿತ ಜನತಂತ್ರ ಹೀಗೆಯೇ ನಡೆಯಬೇಕೆಂಬ ಸರ್ವಸಮ್ಮತ ಲಿಖಿತ ರೀತಿ ರಿವಾಜು ನಮ್ಮಲ್ಲಿ ಇದೆ. ಅದನ್ನು ಉಲ್ಲಂಘಿಸುವುದು ಎಂದರೆ ಸಂವಿಧಾನಕ್ಕೆ ಅಪಚಾರ ಮಾಡಿದಂತೆ. ಈ ವಿಚಾರದಲ್ಲಿ ಸ್ವಾಮೀಜಿ ಮಾತಾಡಿಲ್ಲ.



ಅವಕಾಶ ಸಿಕ್ಕಾಗಲೆಲ್ಲ ಜಾತಿ ಮತ ಪಂಥ ಧರ್ಮದ ಚೌಕಟ್ಟಿನಾಚೆ ನಿಂತು ಮಾತನಾಡುವ ವೈಚಾರಿಕ ಸಿದ್ಧಾಂತ ಮಂಡಿಸುವ ಸ್ವಾಮೀಜಿಗೆ ಯಡಿಯೂರಪ್ಪ ಬೆನ್ನ ಹಿಂದೆ ಧರ್ಮದ ಸೋಗಿನಲ್ಲಿ ಲಿಂಗಾಯತ ಮಠಗಳ ಸ್ವಾಮೀಜಿಗಳು ತಂಡೋಪತಂಡವಾಗಿ ಮೆರವಣಿಗೆ ನಡೆಸಿದ್ದು ಅನುಚಿತ ಎನಿಸಲಿಲ್ಲ. ಬದಲಿಗೆ ತಾವೇ ಆ ಹಿಂಡಿನೊಳಗೆ ಸೇರಿ ಹೋದರು. ಇನ್ನು ಆರು ತಿಂಗಳಾದರೂ ಯಡಿಯೂರಪ್ಪನವರನ್ನು ಅಧಿಕಾರದಲ್ಲಿ ಮುಂದುವರಿಸಬೇಕು; ಅವರಿಗೆ ಗೌರವಯುತ ಬೀಳ್ಕೊಡುಗೆ ನೀಡಬೇಕು ಎನ್ನುವುದು ಸ್ವಾಮೀಜಿ ಆಶಯ. ಯಡಿಯೂರಪ್ಪನವರ ಗೌರವಕ್ಕೆ ಚ್ಯುತಿ ಉಂಟಾಗಿದ್ದರೆ ಅದು ಆಗಿದ್ದಾದರೂ ಎಲ್ಲಿ ಯಾರಿಂದ ಮತ್ತು (ಇವರ ಪ್ರಕಾರ) ಯಾಕಾಗಿ ಎನ್ನುವುದನ್ನು ಸ್ವಾಮೀಜಿ ಹೇಳುವುದಿಲ್ಲ.

ಯಡಿಯೂರಪ್ಪ 2008ರ ಚುನಾವಣೆಯಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದವರು. ಕೊರತೆಯಾದ ಶಾಸಕರ ಸ್ಥಾನವನ್ನು ಆಪರೇಷನ್ ಕಮಲದ ಮೂಲಕ ಭರ್ತಿ ಮಾಡಿಕೊಂಡವರು. ಅದೊಂದು ಸಂವಿಧಾನ ವಿರೋಧೀ ನಡೆ. ಮೂರೇ ವರ್ಷದಲ್ಲಿ ಅವರು ಜೈಲಿಗೆ ಹೋಗಬೇಕಾಗಿ ಬಂತು. ಈಗ ಇನ್ನೊಂದು ಡೀನೋಟಿಫಿಕೇಷನ್ ಪ್ರಕರಣ ಯಡಿಯೂರಪ್ಪ ಕೊರಳಿಗೆ ಸುತ್ತಿಕೊಳ್ಳುವ ಸೂಚನೆ ಕಾಣುತ್ತಿದೆ. ಈ ಮಧ್ಯೆ ಅವರ ಮಗನ ಆರೋಪಿತ ಬ್ರಹ್ಮಾಂಡ ಭ್ರಷ್ಟಾಚಾರ. ನಿಮ್ಮ ಮಗನನ್ನು ಹದ್ದುಬಸ್ತಿನಲ್ಲಿಡಿ ಎಂದು ಸ್ವಾಮೀಜಿ ಯಡಿಯೂರಪ್ಪನವರಿಗೆ ಹೇಳಲಿಲ್ಲ ಅಥವಾ ಹೇಳಿಕೆ ಬಿಡುಗಡೆ ಮಾಡಲಿಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತ ಕೊಡಿ ಎಂದು ಯಡಿಯೂರಪ್ಪನವರಲ್ಲಿ ಕೇಳಲಿಲ್ಲ. ರಾಜಕೀಯ ಪಕ್ಷಕ್ಕೆ ಅದು ಯಾವುದೇ ಇರಲಿ ಒಂದು ನೀತಿ ಸಿದ್ಧಾಂತ ಇರುತ್ತದೆ. ಅದನ್ನು ಒಪ್ಪುವವರಿಗೆ ಅಲ್ಲಿ ಜಾಗ. ಒಪ್ಪದೇ ಇರುವವರಿಗೆ ಬೇರೆ ರಾಜಕೀಯ ಸಿದ್ಧಾಂತದಡಿ ಸೂರು ಇದ್ದೇ ಇದೆ.

ಕರ್ನಾಟಕದಲ್ಲಿ ಬಿಜೆಪಿಗೆ ಲಿಂಗಾಯತ ವೀರಶೈವರ ಬೆಂಬಲ ಅಖಂಡವಾಗಿದೆ ಎನ್ನುವುದು ಸುಳ್ಳಲ್ಲ. ಆದರೆ ಇಂಥವರೇ ಸಿಎಂ ಆಗಬೇಕು, ಮುಂದುವರಿಯಬೇಕೆನ್ನುವುದು ದಬಾವಣೆ ಅಲ್ಲದೆ ಇನ್ನೇನೂ ಅಲ್ಲ. ಅಂಥ ಮನಃಸ್ಥಿತಿಗೆ ಈಗಲೇ ತಡೆ ಹಾಕದಿದ್ದರೆ ಮುಂದೆ ಕಷ್ಟವಾಗಬಹುದು ಎಂದು ಬಿಜೆಪಿ ನಾಯಕತ್ವ ಭಾವಿಸಿದ್ದರ ಪರಿಣಾಮ ಇಂದಿನ ರಾಜಕೀಯದ ಚಿತ್ರಣ. ಬೆಂಗಳೂರಿನಲ್ಲಿ ನೂರಾರು ಮಠಾಧೀಶರು ನಡೆಸಿದ ಸಮಾವೇಶದಲ್ಲಿ ಯಡಿಯೂರಪ್ಪನವರು ಅಧಿಕಾರ ಬಿಟ್ಟು ಇಳಿಯಬೇಕಾಗಿ ಬಂದ ಅಸಲಿ ಬೆಳವಣಿಗೆಗಳ ಚರ್ಚೆ ನಡೆಯಲೇ ಇಲ್ಲ. ಯಡಿಯೂರಪ್ಪನವರನ್ನು ಮುಟ್ಟಿದರೆ ಹುಷಾರ್ ಎನ್ನುವ ಬೆದರಿಕೆ; ಮುಟ್ಟಿದರೆ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಚಿಂದಿ ಚಿತ್ರಾನ್ನ ಎಂಬ ಧಮಕಿ. ಈ ಎರಡು ಅಂಶಗಳ ಹೊರತಾಗಿ ಮತ್ತೊಂದರತ್ತ ಸಭೆ ಕಣ್ಣೆತ್ತಿಯೂ ನೋಡಲಿಲ್ಲ. ಅನೇಕ ಲಿಂಗಾಯತ ಮಠಗಳು ಎಂಜಿನಿಯರಿಂಗ್, ಮೆಡಿಕಲ್ ಮತ್ತಿತರ ವೃತ್ತಿಪರ ಶಿಕ್ಷಣದ ಕಾಲೇಜುಗಳನ್ನು ನಡೆಸುತ್ತಿವೆ. ಅಲ್ಲಿ ಕ್ಯಾಪಿಟೇಷನ್ ಶುಲ್ಕದ್ದೇ ಹಾವಳಿ. ಶಿಕ್ಷಣವನ್ನು ವ್ಯಾಪಾರವನ್ನಾಗಿಸಿದ ಲಿಂಗಾಯತ ಮಠಗಳ ವಿರುದ್ಧ ನಿಡುಮಾಮಿಡಿ ಸ್ವಾಮೀಜಿ ಗುಟುರು ಹಾಕಿದ್ದು ನೆನಪಿನಲ್ಲಿದೆ. ಎಷ್ಟೋ ಮಠಗಳು ರಾಜಕಾರಣಿಗಳ ಭ್ರಷ್ಟಾಚಾರದ ಹಣವನ್ನು ಕಾಯ್ದಿಡುವ ಅಡ್ಡೆಗಳಾಗಿವೆ ಎಂಬ ಅವರ ಸಿಡಿಲಬ್ಬರದ ಮಾತೂ ನೆನಪಿನಲ್ಲಿದೆ. ಸ್ವಾಮೀಜಿ ಮಾತಾಡುತ್ತಾರೆಂದರೆ ಸಿಡಿಗುಂಡು ಈ ಕಾರಣಕ್ಕಾಗಿ ತೇಲುತ್ತದೆ. ಆದರೆ ಯಡಿಯೂರಪ್ಪ ಅಧಿಕಾರದಲ್ಲಿ ಮುಂದುವರಿಯಬೇಕೆಂಬ ಕೂಗಿಗೆ ತಮ್ಮ ಧ್ವನಿಯನ್ನೂ ಸೇರಿಸುವ ಮೂಲಕ ನಿಡುಮಾಮಿಡಿ ಸ್ವಾಮೀಜಿ ಲೆಕ್ಕ ತಪ್ಪುವಂಥ ಹೆಜ್ಜೆಯನ್ನಿಟ್ಟಿದ್ದಾರೆಂದು ವಿಷಾದದಲ್ಲೇ ಹೇಳಬೇಕಾಗಿದೆ.



ಕರ್ನಾಟಕದಲ್ಲಿ ಬಿಜೆಪಿಯ ಹುಟ್ಟು ಹಾಗೂ ಬೆಳವಣಿಗೆಯಲ್ಲಿ ಯಡಿಯೂರಪ್ಪ ಅವರದು ಪ್ರಮುಖ ಪಾತ್ರ. ಅವರು, ಲಿಂಗಾಯತ ಸಮುದಾಯ
ಮತ್ತೊಂದು ರೀತಿಯಲ್ಲಿ ಯಾವುದೇ ಹಾನಿ ಆಗದಂತೆ ಈ ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಅಳೆದೂ ಸುರಿದು ಮಾಡಬೇಕಾದುದರ ಅಗತ್ಯ
ಹಾಗೂ ಅತ್ಯಂತ ಕಠಿಣ ಸಂಧಾನ ಪ್ರಕ್ರಿಯೆಗಳ ಸಂಕಟಗಳನ್ನೂ ಇದು ಒಳ ಗೊಂಡಿದೆ. ಅಂತಿಮವಾದ ಅಧಿಕಾರ ಹಸ್ತಾಂತರದ ಕಡೆಯ ಹೆಜ್ಜೆಗಳ
ಕೆಲ ದಿನಗಳು ಇದಕ್ಕೆ ಸೂಚಕವಾಗಲಿವೆ.ಕಳೆದ ಕೆಲವು ದಿನಗಳಿಂದ ಯಡಿಯೂರಪ್ಪ ಅವರ ಮಾತುಗಳು ಹಾಗೂ ತಮ್ಮ ಸರ್ಕಾರವು ಎರಡು ವ
ಅವರು ಆಡಿದ ಮಾತುಗಳು ಅವರ ನಿಲುವಿಗೆ ಸಾಕಷ್ಟು ಸೂಚನೆಗಳನ್ನು ಒದಗಿಸಿ

# ಹೊಸ ಸವಾಲುಗಳ ಗು
# ಹೆಜ್ಜೆಗಳ ಗುರ

● ವ.ತಿ.ಮಂಜುನಾಥ

ಅವರು ಛಲದಂಕಮಲ್ಲ, ಹೇಳಿದ್ದನ್ನು ಮಾಡಿಯೇ ತೀರಬೇಕು ಎಂಬ ಛಲಗಾರ, ಇಂತ ಛಲಗಾರನ ಹೋರಾಟದ ಹಾದಿ ಇದೆಯಲ್ಲ ಅದು ನಿಜಕ್ಕೂ ಈ ರಾಜ್ಯ ಕಂಡ ಅತ್ಯಂತ ಪ್ರಭಲ ಮನಸ್ಸಿನ ಮತ್ತು ಬಿಜೆಪಿ ಪಕ್ಷಕ್ಕೆ ಒಂದು ಟ್ರೆಡ್ ಸೃಷ್ಟಿಸಿದ ಜಗದಂಕಮಲ್ಲ ಎಂದೇ ಹೇಳಬಹುದು.

ಅವರು ಸೈಕಲ್ ತುಳಿದು ಈ ರಾಜ್ಯದಲ್ಲಿ ಸಂಚಾರ ಮಾಡಿದವರು, ಜನರ ಸಮಸ್ಯೆಗಳನ್ನು ಅರಿತವರು, ಜನರ ಮಧ್ಯೆದಿಂದಲೇ ಬಂದವರು ಅಧಿಕಾರ ಎನ್ನುವುದು ಅವರಿಗೆ ಅಷ್ಟು ಸುಲಭವಾಗಿ ದಕ್ಕಿದ್ದಲ್ಲ ಯಾರ ಆಸರೆಯಿಲ್ಲದೆ,ಯಾರ ನೆರವು ಇಲ್ಲದೆ ಬೆಳದು ಬಂದ ಆ ಪಯಣವೇ ಒಂದು ರೋಚಕ ಅಂತ ಜನಗಳ ಮಧ್ಯೆದಿಂದ ಹಂತ ಹಂತವಾಗಿ ಬಳದು ಕೊನೆಗೆ ಮುಖ್ಯಮಂತ್ರಿ ಸ್ಥಾನವನ್ನು ಗಿಟ್ಟಿಸಿಕೊಂಡವರು ಹಾಗಾಗಿಯೇ ಅವರಿಗೆ ಆ ಸ್ಥಾನದ ಮತ್ತು ಜನರ ಸಮಸ್ಯೆಗಳೇನು ಎನ್ನುವ ಅರಿವು ಇದ್ದಿದ್ದು ಪರಿಹಾರಗಳನ್ನು ಬೇಗ ಜನರಿಗೆ ಸಿಗುವಂತೆ ಮಾಡುತ್ತಿದ್ದರು.ಆದರೆ ಅವರು ಬೆಳೆದಂತೆಲ್ಲ ಅವರ ಆಪ್ತವಲಯದಲ್ಲೇ ವಿರೋಧಿಳು ಸೃಷ್ಟಿಯಾದರು ಅವರ ಅಧಿಕಾರವನ್ನು ಅನುಭವಿಸುವಾಗಲೆಲ್ಲ ಅವರಿಗೆ ತೊಂದರೆಗಳನ್ನು ನೀಡುತ್ತಲೇ ಬಂದವರು ಆದರೂ ಅದನ್ನೆ ಲೆಕ್ಕಿಸದೆ ಪಕ್ಷವನ್ನು ಅಧಿಕಾರಕ್ಕೆ ತಂದು ನಾಲ್ಕು ಬಾರಿ ಸಿಎಂ ಆಗಿ ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಅಧಿಕಾರದ ಬಾಗಿಲು ತೆರಸಿದವರು ಇದರ ಹಿಂದೆ ಇರುವ ಶ್ರಮ ಬಿಎಸ್‌ವೈ ಅವರದ್ದೇ ಅದರಲ್ಲಿ ಎರಡು ಮಾತಿಲ್ಲ



ಅವರು ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಈಗ ಅಧಿಕಾರದ ಗದ್ದುಗೆಯಿಂದ ಕೆಳಗಿಳಿಯುತ್ತಿರುವ ಈ ಸಂದರ್ಭದಲ್ಲಿ ಹಲವು ವಿಚಾರಗಳು ಮುನ್ನೆಲೆಗೆ ಬರುತ್ತವೆ. ಅವರು ಮುಖ್ಯಮಂತ್ರಿಯಾಗಿದ್ದ ಈ ನಾಲ್ಕೂ ಅವಧಿಗಳು ಏರಿಳಿತಗಳಿಂದ ಕೂಡಿದ್ದವು. ಅದರಲ್ಲೂ ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾದ ಸಂದರ್ಭವು ವಿಶೇಷ ಘಟನೆಗಳಿಂದ ಕೂಡಿತ್ತು. ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ಆಯ್ದ ಶಾಸಕರ ಗುಂಪೊಂದರ ಬಂಡಾಯದಿಂದಾಗಿ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಕುಸಿದು ಯಡಿಯೂರಪ್ಪನವರು ಮುಖ್ಯಮಂತ್ರಿಯಾದರು. ಅಧಿಕಾರದ ಗದ್ದುಗೆ ಏರಿದಾಗ ಯಡಿಯೂರಪ್ಪ ಅವರ ವಯಸ್ಸು, ಸಾರ್ವಜನಿಕ ಅಧಿಕಾರ ಸ್ಥಾನಗಳನ್ನು ಹೊಂದಲು ಅವರ ಪಕ್ಷವು ನಿಗದಿ ಮಾಡಿದ್ದಂತಹ ವಯಸ್ಸನ್ನು ಮೀರಿತ್ತು. ಪಕ್ಷದಲ್ಲಿನ ಹಳೆಯ ಕಾಲದ ನಿಷ್ಠರು ಹಾಗೂ ಹೊಸದಾಗಿ ಸೇರ್ಪಡೆಯಾದವರ ನಡುವೆ ಅವರದು ಕಠಿಣ ಸಮತೋಲನದ ನಡಿಗೆಯಾಗಿತ್ತು. ಈ ಹಿಂದಿನಂತೆ, ಸರ್ಕಾರವನ್ನು ನಡೆಸುವಲ್ಲಿ ಅವರದೇ ಮಾರ್ಗ ಯಡಿಯೂರಪ್ಪ ಅವರಿಗೆ ಇದ್ದಂತಿರಲಿಲ್ಲ. ಅವರ ಜೊತೆಗೆ ಇದ್ದ ಉಪಮುಖ್ಯಮಂತ್ರಿಗಳ ದಂಡು, ಯಡಿಯೂರಪ್ಪ ಅವರದೇ ಆಯ್ಕೆ ಎಂದೇನಾಗಿರಲಿಲ್ಲ. ಪಕ್ಷದ ನಾಯಕತ್ವದ ನಿರ್ದೇಶನಗಳ ಆಧಾರದಲ್ಲಿ ಸಚಿವ ಖಾತೆಗಳನ್ನು ಅವರು ಹಂಚಿದ್ದರು. ಹಲವು ಹಂತಗಳಲ್ಲಿ, ಅವರು ಪಕ್ಷದ ಕೇಂದ್ರ ನಾಯಕತ್ವದ ನಿರ್ದೇಶನಗಳಿಗೆ ಮಣಿದು ಅವುಗಳನ್ನು ಅನುಷ್ಠಾನಕ್ಕೆ ತರಬೇಕಾಗುತ್ತಿತ್ತು. ಈ ಅವಧಿಯಲ್ಲಿ, ಈ ಹಿಂದೆ ಅವರ ಟ್ರೇಡ್ ಮಾರ್ಕ್ ಎನಿಸಿದ್ದ ಎಂದಿನ ಭಾವೋದ್ರೇಕ, ಹುರುಪು ಹಾಗೂ ಉತ್ಸಾಹಗಳಿಲ್ಲದೆ ಸರ್ಕಾರವನ್ನು ಅವರು ಮುನ್ನಡೆಸುತ್ತಿದ್ದದ್ದು ಕಂಡುಬಂದಿತ್ತು. ಇನ್ನೇನು ಅಧಿಕಾರದಿಂದ ನಿರ್ಗಮಿಸುವುದು ಅವಶ್ಯಕವಾಗುತ್ತದೆ ಎಂಬುದು ಮುಖ್ಯಮಂತ್ರಿಯವರಿಗೆ ಗೊತ್ತಿದೆಯೇನೋ ಎಂಬಂತೆ ಭಾಸವಾಗುವಂತಿತ್ತುಆದರೆ, ಈಗಿನ ಈ ಬದಲಾವಣೆ ತನ್ನದೇ ವಿಶಿಷ್ಟ ಅಂಶಗಳನ್ನು ಒಳಗೊಂಡಿದೆ. ಈ ಹಿಂದೆ ಬಿಜೆಪಿಯಲ್ಲಿ ಕಂಡುಬರುತ್ತಿದ್ದಂತಹ ರೀತಿಯ ಬದಲಾವಣೆ ಅಲ್ಲ ಇದು. ಇದು, ಪಕ್ಷದ ಕೇಂದ್ರೀಯ ನಾಯಕತ್ವದ ಸ್ಪಷ್ಟ ನಿರ್ದೇಶನ ದಲ್ಲಿ ಆಗುತ್ತಿರುವಂತಹ ಅಧಿಕಾರ ಹಸ್ತಾಂತರ. ಹೀಗಿದ್ದೂ, ಈ ಅಧಿಕಾರ ಹಸ್ತಾಂತರದಲ್ಲೂ ನಿರ್ದಿಷ್ಟವಾಗಿ ಕರ್ನಾಟಕದ ವಿಶಿಷ್ಟ ಗುಣವಿದೆ. ವಿಂಧ್ಯದ ದಕ್ಷಿಣದಲ್ಲಿ ಬಿಜೆಪಿಗಿರುವ ಏಕೈಕ ಕೋಟೆ ಎಂದರೆ ಕರ್ನಾಟಕ. ಈ ಹಿಂದೆ, ಯಡಿಯೂರಪ್ಪ ಅವರನ್ನು ನಯವಾಗಿ ಮುಖ್ಯಮಂತ್ರಿ ಸ್ಥಾನದಿಂದ ಹೊರಗಿಡಲಾಗಿತ್ತು ಹಾಗೂ ಇದು 2012ರಲ್ಲಿ ಪಕ್ಷ ಒಡೆಯಲು ಕಾರಣವಾಗಿತ್ತು. ಆ 2012, ಈಗಿನ 2021 ಅಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಕರ್ನಾಟಕದಲ್ಲಿ ಬಿಜೆಪಿಯ ಹುಟ್ಟು ಹಾಗೂ ಬೆಳವಣಿಗೆಯಲ್ಲಿ ಯಡಿಯೂರಪ್ಪ ಅವರದು ಪ್ರಮುಖ ಪಾತ್ರ. ಅವರು, ಲಿಂಗಾಯತ ಸಮುದಾಯದ ಪ್ರಭಾವಿ ನಾಯಕರೂ ಹೌದು. ಈ ಎಲ್ಲಾ ಅಂಶಗಳು, ಪಕ್ಷಕ್ಕೆ ಮತ್ತೊಂದು ರೀತಿಯಲ್ಲಿ ಯಾವುದೇ ಹಾನಿ ಆಗದಂತೆ ಈ ಅಧಿಕಾರ ಹಸ್ತಾಂತರ ಪ್ರಕ್ರಿಯೆಯನ್ನು ಅಳೆದೂ ಸುರಿದು ಮಾಡಬೇಕಾದುದರ ಅಗತ್ಯಕ್ಕೆ ಕಾರಣವಾಗಿವೆ. ಹೀಗಾಗಿ, ಸುದೀರ್ಘ ಕಾಲದ ಕಾರ್ಯತಂತ್ರ ಹಾಗೂ ಅತ್ಯಂತ ಕಠಿಣ ಸಂಧಾನ ಪ್ರಕ್ರಿಯೆಗಳ ಸಂಕಟಗಳನ್ನೂ ಇದು ಒಳ ಗೊಂಡಿದೆ. ಅಂತಿಮವಾದ ಅಧಿಕಾರ ಹಸ್ತಾಂತರದ ಕಡೆಯ ಹೆಜ್ಜೆಗಳನ್ನು ದಾಟಲಾಗಿದೆಯೇ ಎಂಬುದು ಇನ್ನೂ ಖಚಿತವಿಲ್ಲ. ಮುಂದಿನ ಕೆಲ ದಿನಗಳು ಇದಕ್ಕೆ ಸೂಚಕವಾಗಲಿವೆ.ಕಳೆದ ಕೆಲವು ದಿನಗಳಿಂದ ಯಡಿಯೂರಪ್ಪ ಅವರ ಮಾತುಗಳು ಹಾಗೂ ತಮ್ಮ ಸರ್ಕಾರವು ಎರಡು ವರ್ಷ ಪೂರೈಸಿದ ಸಂದರ್ಭದಲ್ಲಿ ತಮ್ಮ 'ವಿದಾಯ ಭಾಷಣ'ದಲ್ಲಿ ಅವರು ಆಡಿದ ಮಾತುಗಳು ಅವರ ನಿಲುವಿಗೆ ಸಾಕಷ್ಟು ಸೂಚನೆಗಳನ್ನು ಒದಗಿಸಿವೆ.











ದ ಪ್ರಭಾವಿ ನಾಯಕರೂ ಹೌದು. ಈ ಎಲ್ಲಾ ಅಂಶಗಳು, ಪಕ್ಷಕ್ಕೆ ಕ್ಕೆ ಕಾರಣವಾಗಿವೆ. ಹೀಗಾಗಿ, ಸುದೀರ್ಘ ಕಾಲದ ಕಾರ್ಯತಂತ್ರ ನ್ನು ದಾಟಲಾಗಿದೆಯೇ ಎಂಬುದು ಇನ್ನೂ ಖಚಿತವಿಲ್ಲ. ಮುಂದಿನ ರ್ಷ ಪೂರೈಸಿದ ಸಂದರ್ಭದಲ್ಲಿ ತಮ್ಮ 'ವಿದಾಯ ಭಾಷಣ'ದಲ್ಲಿ ದೆ.

# ರಿಕಾರನ ಸಿತು..!











## ಯಡಿಯೂರಪ್ಪ ಹಾದಿ

ಬಲಪಂಥೀಯ ನಿಲುವಿನ ಬಿಜೆಪಿ ಪಕ್ಷದಲ್ಲಿದ್ದರೂ ಹಸಿರು ಶಾಲು ಹೊದ್ದುಕೊಂಡು, ಪ್ರತಿಭಟನೆ, ಹೋರಾಟದ ಮೂಲಕ ಪಕ್ಷ ಸಂಘಟಿಸಿದವರು ಯಡಿಯೂರಪ್ಪ. ಮೂರು ದಶಕಗಳ ಕಾಲ ವಿರೋಧ ಪಕ್ಷದಲ್ಲಿದ್ದು ಕೆಲಸ ಮಾಡಿದ್ದ ಯಡಿಯೂರಪ್ಪ ಅವರು ಸಿಎಂ ಗದ್ದುಗೆಗೆ ಸಾಗಿ ಬಂದ ಹಾದಿ ಕುರಿತು ಹೇಳಬೇಕೆಂದರೆ ಅದೊಂದು ರೋಚಕತೆಯೇ ಸರಿ.

ಮಂಡ್ಯ ಜಿಲ್ಲೆಯಲ್ಲಿ ಜನಿಸಿ, ಶಿವಮೊಗ್ಗದ ಶಿಕಾರಿಪುರದಿಂದ ರಾಷ್ಟ್ರ ರಾಜಕೀಯಕ್ಕೆ ಜಿಗಿದು ನಂತರ ಕರುನಾಡಿಗೆ ಮರಳಿ ಮತ್ತೊಮ್ಮೆ ಕರ್ನಾಟಕದಲ್ಲಿ ಕಮಲ ಅರಳುವಂತೆ ಮಾಡಿದ ಯಡಿಯೂರಪ್ಪ ಇದೇ ಮೊದಲ ಬಾರಿಗೆ ರಾಜಕೀಯವಾಗಿ ಮುಂದೇನು? ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುವಂಥ ಪರಿಸ್ಥಿತಿ ಎದುರಿಸುತ್ತಿದ್ದು, ಅವರ ರಾಜಕೀಯ ಬದುಕು

## ಯಡಿಯೂರಪ್ಪ ದಿಡೀರ್ ಸೃಷ್ಟಿಯಾದವರಲ್ಲ

ಬೂಕನಕೆರೆ ಎಂಬ ಕುಗ್ರಾಮದ ಬಡ ರೈತ ಕುಟುಂಬದ ಯಡಿಯೂರಪ್ಪ ದಿಢೀರ್ ನಾಯಕರಾದವರಲ್ಲ. ಯಾವುದೇ ಗಾಡ್ ಫಾದರ್ ಇಲ್ಲದೇ ಸ್ವಂತ ಪರಿಶ್ರಮ ಮೇಲೆ ಹಂತಹಂತವಾಗಿ ಬೆಳೆದು ಬಂದ ಧೀಮಂತ ನಾಯಕ. ಹಳ್ಳಿಯಿಂದಲೇ ಹೋರಾಟ ಆರಂಭಿಸಿ ರಾಜಕೀಯ ನೆಲೆಗಟ್ಟನ್ನು ಕಂಡುಕೊಂಡವರು. ಯಡಿಯೂರಪ್ಪ ಧೃತಿಗೆಡದೆ 80ರ ದಶಕದಲ್ಲಿ ಎರಡು ಶಾಸಕರಿದ್ದ ಪಕ್ಷವನ್ನು ಹಂತಹಂತವಾಗಿ ಬೆಳೆಸುತ್ತಾ 110 ಶಾಸಕರ ಪಕ್ಷವಾಗಿ ಮಾಡಿದ್ದು ಕಡಿಮೆ ಸಾಧನೆ ಏನಲ್ಲ. ಹೀಗಾಗಿ ವಿರೋಧ ಪಕ್ಷದ ದ್ವೇಷಿಗಳಿಗೂ ಸಕಾರಣವಾಗಿ ಬೆದರಿಕೆ ಹುಟ್ಟಿಸಬಲ್ಲ ಛಾತಿಯುಳ್ಳವರು. ಆದರೆ, ಒಮ್ಮೆಯಾದರೂ ಬಿಜೆಪಿ ಸಂಪೂರ್ಣ ಮೆಜಾರಿಟಿ ಹೊಂದಬೇಕು ಎಂಬ ಅವರ ಆಸೆ ಇನ್ನೂ ಈಡೇರಿಲ್ಲ. ಮುಖ್ಯಮಂತ್ರಿ ಹುದ್ದೆಗೆ ರೇಸ್‌ನಲ್ಲಿ ಇದ್ದವರೆಷ್ಟು? ಕೊನೆಯಲ್ಲಿ ಉಳಿದವರು ಯಾರು? ಇಲ್ಲಿದೆ ಕುತೂಹಲಕಾರಿ ಮಾಹಿತಿ!ಮುಖ್ಯಮಂತ್ರಿ ಹುದ್ದೆಗೆ ರೇಸ್‌ನಲ್ಲಿ ಇದ್ದವರೆಷ್ಟು? ಕೊನೆಯಲ್ಲಿ ಉಳಿದವರು ಯಾರು? ಇಲ್ಲಿದೆ ಕುತೂಹಲಕಾರಿ ಮಾಹಿತಿ!

## ಸುಮ್ಮನೇ ಕೂರುವುದಿಲ್ಲ

ಇಷ್ಟೆಲ್ಲ ಆದಮೇಲೂ ಬಿಎಸ್‌ವೈ ಸುಮ್ಮನೇ ಕೂರುವುದಿಲ್ಲ ಅವರು ಪ್ರತಿ ಕ್ಷಣವೂ ರಾಜಕೀಯ ದ್ರವೀಕರಣದತ್ತ ಯೋಚಿಸುತ್ತಲೇ ಇರುತ್ತಾರೆ ಒಂದು ವೇಳೆ ತಾವು ಹೇಳಿದ್ದನ್ನು ಬಸವರಾಜ್ ಬೊಮ್ಮಾಯಿ ಕೇಳಲಿಲ್ಲ ಎಂದರೆ ಅವರು ರಾಜಕೀಯ ದಿಕ್ಕನ್ನೇ ಬದಲಾಯಿಸುತ್ತಾರೆ.ಅವರು ವಿದಾಯಿ ಭಾಷಣದ ನಂತರ ರಾಜಕೀಯದಿಂದ ದೂರುವಿರುವುದಿಲ್ಲ ರಾಜಕಾರಣವೇ ನನ್ನ ಹುಸಿರು ಎಂದಿದ್ದಾರೆ ಹೀಗಾಗಿ ಅವರು ರಾಜಕೀಯ ತಂತ್ರಗಳ ಗುರಿಕಾರ ಹಾಗಾಗಿ ಬೇಕಾದಾಗ ಪಾನ್‌ಗಳನ್ನು ಬಿಡುತ್ತಲೇ ಇರುತ್ತಾರೆ ಸಂದರ್ಭಗಳು ಬಂದಾಗ ಏನು ಬೇಕಾದರೂ ಮಾಡಬಲ್ಲರು ಎನ್ನುವುದನ್ನು ಹಿಂದೆ ಜಗದೀಶ್ ಶೆಟ್ಟರ್ ಮತ್ತು ಸದಾನಂದ ಸಿಎಂ ಮಾಡಿ ಆನಂತರ ಅವರನ್ನು ಕೆಳಗಿಳಿಸಿದ ರೀತಿ ಇದೆಯಲ್ಲ ಅದೇ ಅವರ ತಾಕತ್ತು ಹಾಗಿಯೇ ಬಸವರಾಜ್ ಬೊಮ್ಮಾಯಿ ಅತ್ಯಂತ ಸೂಕ್ಷ್ಮವಾಗಿ ತಮ್ಮ ಗುರುವಿನೊಡನೆ ವ್ಯವಹರಿಸಬೇಕಾಗುತ್ತದೆ.



● 14ನೇ ಪುಟಕ್ಕೆ...

## ಪತ್ರಿಕೆ ಬಿಎಸ್‌ವೈ ನಿರ್ಗಮನವನ್ನು ಖಚಿತಪಡಿಸಿತ್ತು

ಕೆಂಧೂಳಿ ಆರಂಭವಾದಾಗಿನಿಂದಲು 'ಹೊಸ ನಾಯಕನ ಹುಡುಕಾಟ' ಎನ್ನುವ ಶೀರ್ಷಿಕೆಯೊಂದಿಗೆ ಪತ್ರಿಕೆ ಯನ್ನು ಆರಂಭಿಸಿದ್ದೆವು ವಿಶೇಷ ಎಂದರೆ ಅ ಹೊಸ ಸಂಚಿಕೆಯನ್ನು ಬಿ.ಎಸ್.ಯಡಿಯೂರಪ್ಪ ಅವರೇ ಬಿಡುಗಡೆ ಗೊಳಿಸಿದ್ದರು. ಅದಾದ ನಂತರ ಹಲವು ಬಾರಿ ಬೆಳವಣಿಗೆಗಳ ಸಂದರ್ಭದಲ್ಲಿ ರಾಜಕೀಯ ತಂತ್ರಗಳ ಎಣೆಯುತ್ತಿರುವ ಸಮಯದಲ್ಲೆಲ್ಲ ಬಿಎಸ್‌ವೈ ಪತನ ಸನಿಹ. ಎಂದು 'ಬಿಎಸ್‌ವೈ ಪತನಕ್ಕೆ ಪೀಠಿಕೆ ' ಎಂದು ಕಳೆದ ಸಂಚಿಕೆಯಲ್ಲಿ 'ಬಿಎಸ್‌ವೈ ನಿರ್ಗಮನ ಖಚಿತ' ಎಂದು ಬರೆಯಲಾಗಿತ್ತು ಮತ್ತು 26 ರೊಂದೆ ಅವರು ರಾಜೀನಾಮೆ ಸಲ್ಲಿಸುತ್ತಾರೆ ಎಂದು ಬರೆಯಲಾಗಿತ್ತು. ಇದು ಪತ್ರಿಕೆಯ ವಿಶೇಷ ರಾಜಕೀಯ ದೂರದೃಷ್ಟಿಗಳನ್ನು ಬಲ್ಲ ಆ ಎಳೆಯ ಹಾದಿ ಹಿಡಿದು ವಿಶ್ಲೇಷಣೆ ಮಾಡುವುದೇ ಪತ್ರಿಕೆಯ ವಿಶೇಷ.



**ಯಡಿಯೂರಪ್ಪ ತಮ್ಮ ಆಪ್ತರನ್ನೇ ನೇಮಕ ಮಾಡುವ ಮೂಲಕ ತಮ್ಮ ತಾಕತ್ತು ಏನು ಎನ್ನುವುದನ್ನು ರುಜುವಾತು ಮಾಡಿದ್ದಾರೆ.ಆರ್‌ಎಸ್‌ಎಸ್ ಮೂಲದ ವ್ಯಕ್ತಿಗೆ ಸಿಎಂ ಸ್ಥಾನ ದೊರಕುತ್ತದೆ ಎನ್ನುವ ಸತ್ಯವನ್ನು ಸುಳ್ಳು ಮಾಡಲಾಗಿದೆ ಯಾಕೆಂದರೆ ಬಸವರಾಜ್ ಬೊಮ್ಮಾಯಿ ಜನತಾಪರಿವಾರದವರು ಜೆಡಿಯು ನಿಂದ ಬಿಜೆಪಿಗೆ ಬಂದವರು ಹಾಗೆ ಹೊರಗಿನಿಂದ ಬಂದವರು ಅತ್ಯಂತ ವಿನಿಯ ಮತ್ತು ತೂಕದ ಮಾತುಗಳಿಂದಲೇ ತಮ್ಮ ವ್ಯಕ್ತಿತ್ವ ಮತ್ತು ಪಕ್ಷದ ನಿಷ್ಠೆಯನ್ನು ಸಂಪಾದಿಸಲುವುದರಲ್ಲಿ ಯಶಸ್ಸುಕಂಡವರು.ಹೈಕಮಾಂಡ್‌ಗೆ ಹತ್ತಿರವಾದವರು ಕೂಡ.**

# ಅಂತೂ ಸಮರ್ಥ ಉತ್ತರಾಧಿಕಾರಿಯನ್ನೇ ಆಯ್ಕೆ ಮಾಡಿದ ಬಿಜೆಪಿ

● ತುರುವನೂರು ಮಂಜುನಾಥ

ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಆಯ್ಕೆಯಾಗಿದ್ದಾರೆ. ಸಂಘ ಪರಿವಾರದ ಸಹವಾಸ ಇಲ್ಲದೇ, ಹೊರಗಿನಿಂದ ಬಂದವನೊಬ್ಬನನ್ನು ಮುಖ್ಯಮಂತ್ರಿ ಮಾಡಿದ್ದು ಅತಿ ಮುಖ್ಯ ಬೆಳವಣಿಗೆ. ಅದಕ್ಕೆ ಎರಡು ಕಾರಣ ಮೇಲ್ನೋಟಕ್ಕೆ ಕಾಣುತ್ತಿದೆ

ಇದರಲ್ಲಿ ಎರಡು ಮಾತಿಲ್ಲ ಎಲ್ಲರೂ ಒಪ್ಪುವಂತ ವ್ಯಕ್ತಿ ಅಂತ ವ್ಯಕ್ತಿಯನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿದವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ. ಅವರ ತಾಕತ್ತೆ ಅದು ಸೆಟೆದು ನಿಂತು ರಾಜೀನಾಮೆ ಕೊಟ್ಟು ಹೈಕಮಾಂಡ್‌ಗೆ ಕಳಿಸಿದ ಸಂದೇಶ ಇದೆಯಲ್ಲ ಅದು ಅಷ್ಟು ಸಲೀಸಾಗಿರಲಿಲ್ಲ ,ಎಕೆಂದರೆ ದಕ್ಷಿಣ ಭಾರತದಲ್ಲಿ ಬಿಜೆಪಿಯ ಅಧಿಕಾರ ಬಾಗಿಲು ತೆರೆಯಲು ಪ್ರಮುಖಕಾರಣಕರ್ತರೆ ಬಿ.ಎಸ್.ವೈ. ಹಾಗಾಗಿ ಅವರನ್ನು ನಿರ್ಲಕ್ಷ್ಯಸುವುದು ಅಷ್ಟು ಸುಲಭವಾದ ಮಾತಲ್ಲ. ರಾಜೀನಾಮೆ ಕೊಡುವುದಿಲ್ಲ ಎಂದು ಹಠ ಹಿಡಿದಿದ್ದರೆ ಹೈಕಮಾಂಡ್ ಏನು ಮಾಡಲು ಆಗುತ್ತಿರಲಿಲ್ಲ ಹಾಗೇನಾದರೂ ಮಾಡಿದ್ದರೆ ಅವರ ಮೇಲೆ ಇಡಿ ದಾಳಿ ಮಾಡಿಸಬಹುದಿತ್ತು ಮತ್ತು ಕೆಲವು ಕೇಸ್‌ಗಳಿಗೆ ಮರುಜೀವ ನೀಡಬಹುದಿತ್ತು ಹಾಗೇ ಮಾಡಿದ್ದರೆ ನಾಡಿನ ಜನಕ್ಕೆ ಸಲೀಸಲಾಗಿ ಹೈಕಮಾಂಡ್‌ನ ಕಾರ್ಯ ಎನ್ನುವುದು ಗೊತ್ತಾಗಿಬಿಡುತ್ತಿತ್ತು. ಹಾಗಾಗಿಯೇ ಅವರಿಗೆ ಮನವರಿಕೆ ಮಾಡಿಕೊಟ್ಟು ರಾಜೀನಾಮೆ ನೀಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆದರೆ ಅವರ ವಿರೋಧ ಪಾಳೆ ಅಷ್ಟಕ್ಕೆ ತೃಪ್ತಿಪಟ್ಟುಕೊಂಡರೆ ಸಾಲದು ಆಟ ಮುಂದಿದೆ ಬಿಎಸ್‌ವೈ ಅಷ್ಟು ಸುಲಭವಾಗಿ ಆ ವಿರೋಧಿಗುಂಪನ್ನು ದಹಿಸದೆ ಬಿಡಲಾರರು. ಬಸವರಾಜ್ ಬೊಮ್ಮಾಯಿ ಆಯ್ಕೆ ಮೂಲಕ ಅವರಿಗೂ ಈಗ ನಡುಕ ಆರಂಭವಾಗಿದೆ.

ಅದೇನೆ ಇರಲಿ ಈಗ ಯಡಿಯೂರಪ್ಪ ತಮ್ಮ ಆಪ್ತರನ್ನೇ ನೇಮಕ ಮಾಡುವ ಮೂಲಕ ತಮ್ಮ ತಾಕತ್ತು ಏನು ಎನ್ನುವುದನ್ನು ರುಜುವಾತು ಮಾಡಿದ್ದಾರೆ.ಆರ್‌ಎಸ್‌ಎಸ್ ಮೂಲದ ವ್ಯಕ್ತಿಗೆ ಸಿಎಂ ಸ್ಥಾನ ದೊರಕುತ್ತದೆ ಎನ್ನುವ ಸತ್ಯವನ್ನು ಸುಳ್ಳು ಮಾಡಲಾಗಿದೆ ಯಾಕೆಂದರೆ ಬಸವರಾಜ್ ಬೊಮ್ಮಾಯಿ ಜನತಾಪರಿವಾರದವರು ಜೆಡಿಯು ನಿಂದ ಬಿಜೆಪಿಗೆ ಬಂದವರು ಹಾಗೆ ಹೊರಗಿನಿಂದ ಬಂದವರು ಅತ್ಯಂತ ವಿನಿಯ ಮತ್ತು ತೂಕದ ಮಾತುಗಳಿಂದಲೇ ತಮ್ಮ ವ್ಯಕ್ತಿತ್ವ ಮತ್ತು ಪಕ್ಷದ ನಿಷ್ಠೆಯನ್ನು ಸಂಪಾದಿಸಲುವುದರಲ್ಲಿ ಯಶಸ್ಸುಕಂಡವರು. ಸಂಯಮ ಮತ್ತು ವಿನಯಶೀಲತೆಯ ಬೊಮ್ಮಾಯಿ ಎಂದೂ ದುಡುಕಿ ಮಾತನಾಡಿದವರಲ್ಲ ಯಾವುದೇ ವಿವಾದಗಳಿಗೆ ಸಿಕ್ಕಿಹಾಕಿಕೊಂಡವರಲ್ಲ. ಎಲ್ಲವನ್ನೂ ಅಳೆದು ತೂಗಿ ಮಾತನಾಡುತ್ತಿದ್ದವರು. ಹಾಗಾಗಿಯೇ ಅವರು ತಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಿಕೊಂಡಿದ್ದರು .ಇದೆಲ್ಲದಕ್ಕೂ ಮುಖ್ಯವಾಗಿ ಯಡಿಯೂರಪ್ಪ ಅವರಿಗೆ ಯಾವುದೇ ರಾಜಕೀಯ ಸಲಹೆಗಳಿದ್ದರೂ ಆ ಸಲಹೆಗಳು ಬಸವರಾಜ್ ಬೊಮ್ಮಾಯಿ ಅವರದ್ದೇ




ಎನ್ನುವುದರಲ್ಲಿ ಸಂದೇಹವಿಲ್ಲ. ಹಲವಾರು ಬಾರಿ ರಾಜಕೀಯ ನಡೆಗಳ ಸೂಕ್ಷತೆಯನ್ನು ಅವರ ತಲೆಗೆ ತುಂಬುವ ಪ್ರಾಣವಾಗಿದ್ದರು ಹಾಗಾಗಿಯೇ ಬೊಮ್ಮಾಯಿ ಸಲೀಸಾಗಿ ಮುಖ್ಯಮಂತ್ರಿಯಾಗಲು ಕಾರಣಕರ್ತರಾಗಿದ್ದಾರೆ. ಈ ಮೂಲಕ ಸರ್ವಸಮ್ಮತ ವ್ಯಕ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ ಯಾರು ದುಸರಾ ಮಾತನಾಡದೆ ಅವರನ್ನು ಒಪ್ಪಿಕೊಂಡಿದ್ದಾರೆ.

## ಹೈಕಮಾಂಡ್ ಒಪ್ಪಲು ಕಾರಣಗಳೇನು?

ಬಿಎಸ್‌ವೈ ರಾಜೀನಾಮೆಯಿಂದ ಲಿಂಗಾಯಿತ ಸಮುದಾಯ ಪಕ್ಷವನ್ನು ಬದಲಿಸುವ ಸಾಧ್ಯತೆಗಳು ಹೆಚ್ಚು ,ಈ ನಿಟ್ಟಿನಲ್ಲಿ ಲಿಂಗಾಯತ ನಾಯಕನನ್ನೇ ಪರ್ಯಾಯವಾಗಿ ಆಯ್ಕೆ ಮಾಡಬೇಕಿತ್ತು ಅಲ್ಲದೆ ತೂಕದ ವ್ಯಕ್ತಿಯೊಬ್ಬರ ಅಗತ್ಯವಿತ್ತು ಅಂತ ಗುಣಗಳು ಕಂಡಿದ್ದು ಬಸವರಾಜ್ ಬೊಮ್ಮಾಯಿಯಲ್ಲಿ ಎಲ್ಲಿಯೂ ವಿವಾದಗಳಿಗೆ ಗುರಿಯಾಗದೆ ವಿವಾದಗಳನ್ನು ಮೈಮೇಲೆ ಎಳೆದುಕೊಳ್ಳದೆ ಆಡುವ ಮಾತಿನಲ್ಲಿ ಸೂಕ್ಷ್ಮತೆಯನ್ನು ಕಂಡುಕೊಂಡವರು ಹೀಗಾಗಿ ಬಿಎಸ್‌ವೈಗೆ ಪರ್ಯಾಯ ವ್ಯಕ್ತಿ ಎಂದರೆ ಬೊಮ್ಮಾಯಿ ಎನ್ನುವುದನ್ನು ಹೈಕಮಾಂಡ್ ಮನವರಿಕೆ ಮಾಡಿಕೊಂಡಿತ್ತು ಈ ಕಾರಣಕ್ಕೆ ಬಿಎಸ್‌ವೈ ಹೇಳಿದ ಲಿಂಗಾಯಿತ ವ್ಯಕ್ತಿಯನ್ನೇ ಸಿಎಂ ಮಾಡಲು ಒಪ್ಪಿದ್ದು.

ಎರಡನೇಯದಾಗಿ ಮುಂದಿನ ಚುನವಾಣೆಯೇ ಹೈಕಮಾಂಡ್‌ಗೆ ಬಹಳ ಮುಖ್ಯ ಮತ್ತೇ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎನ್ನುವುದಾದರೆ ಅದಕ್ಕೆ ಒಬ್ಬ ಚಾರಿತ್ರಿಕ ಹಿನ್ನೆಲೆಯುಳ್ಳ ವ್ಯಕ್ತಿ ಸಮುದಾಯದ ಮತಗಳನ್ನು ತರುವ ಭರವಸೆ ನಾಯಕ ಬೇಕಾಗಿತ್ತು ಹೀಗಾಗಿ ಬಸವರಾಜ್ ಬೊಮ್ಮಾಯಿ ಸೂಕ್ತ ವ್ಯಕ್ತಿ ಎನ್ನುವ ಕಾರಣಕ್ಕೆ ಅವರನ್ನು ಸರ್ವಸಮ್ಮತ ನಾಯಕನನ್ನಾಗಿ ಆಯ್ಕೆಮಾಡಲಾಗಿದೆ.

ಮೂರು ಬಾರಿಯ ಶಾಸಕರರಾದ ಬೊಮ್ಮಾಯಿ, ಯಡಿಯುರಪ್ಪ ಅವರ ಆಪ್ತರಲ್ಲಿ ಒಬ್ಬರು. ಉತ್ತರ ಕರ್ನಾಟಕದವರೇ ಸಿಎಂ ಆಗಬೇಕು ಎಂಬ ಆಗ್ರಹಗಳನ್ನು ಸಂತೈಸುವುದು ಬಿಜೆಪಿ ತಂತ್ರಗಳಲ್ಲಿ ಒಂದು ಜಾತಿ, ಶಿಕ್ಷಣ, ಆಡಳಿತ ಸಾಮರ್ಥ್ಯ ಮತ್ತು ಪಕ್ಷದ ಕೇಂದ್ರ ಮುಖಂಡರೊಂದಿಗಿನ ಸಾಮೀಪ್ಯವನ್ನು ಗಮನಿಸಿದರೆ, ಬೊಮ್ಮಾಯಿ ಅವರು 2023ರ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಅತ್ಯಂತ ಸುರಕ್ಷಿತ ಆಯ್ಕೆ. ಬೊಮ್ಮಾಯಿ ಅವರು ಲಿಂಗಾಯತ ಸಮುದಾಯದವರು. ಇದು ಬಿಜೆಪಿಯ ಪ್ರಬಲ ಮತಬ್ಯಾಂಕ್. ಉತ್ತರ ಕರ್ನಾಟಕದ ಹಾವೇರಿ ಜಿಲ್ಲೆಯ ಶಿಗ್ಗಾವಿ ವಿಧಾನಸಭಾ ಕ್ಷೇತ್ರವನ್ನು ಬೊಮ್ಮಾಯಿ ಪ್ರತಿನಿಧಿಸುತ್ತಿದ್ದು, ಆಡಳಿತಾತ್ಮಕವಾಗಿ ಅನುಭವ ಹೊಂದಿದವರು. ಅಲ್ಲದೆ, ಎಲ್ಲ ನಾಯಕರೊಂದಿಗೆ ಅವರು ಹೊಂದಿರುವ ಸುಮಧುರ ಬಾಂಧವ್ಯ ಅವರ ಆಯ್ಕೆಗೆ ನೆರವಾಗಿರಬಹುದು ಎನ್ನುವ ಕಾರಣಗಳು ಇವೆ.

ಇನ್ನೊಂದು ಕಾರಣವಿದೆ ಬಸವರಾಜ ಬೊಮ್ಮಾಯಿ ಆಯ್ಕೆಗೆ. ಓರ್ವ ಮಂತ್ರಿ ಆಗಿ ಅವರು ಖಾತೆಯನ್ನು ಕಾರ್ಯ ನಿರ್ವಹಿಸುವ ರೀತಿ ವಿಭಿನ್ನವಾಗಿದ್ದು. ಯಾವುದೇ ಯೋಜನೆ ಬಗ್ಗೆ ಚರ್ಚೆ ಬಂದರೂ ಅವರು ಅಧಿಕಾರಿಗಳಿಗೆ ಕೇಳುವುದು ಒಂದೇ ಮಾತು: ಇದನ್ನು ಹೇಗೆ ಜಾರಿಗೊಳಿಸುತ್ತೀರಾ? ಅಧಿಕಾರಿಗಳು ನೀಡಿದ ರೋಡ್ ಮ್ಯಾಪ್ ನಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಥವಾ ಅವರಿಗೆ ಸಂಪೂರ್ಣ ಒಪ್ಪಿಗೆ ಆಗದೇ ಇದ್ದರೆ, ಮುಲಾಜಿಲ್ಲದೇ ಹೊಸ ಯೋಜನಾ ಕರಡು ತಯಾರಿಸಲು ಅಧಿಕಾರಿಗಳಿಗೆ ಸೂಚಿಸುವುದು ಅವರ ಕಾರ್ಯ ವೈಖರಿ. ಇದು ಯಡಿಯೂರಪ್ಪನವರ ಕಾರ್ಯವೈಖರಿಗಿಂತ ಭಿನ್ನ.

ಇನ್ನೊಂದು ವಿಚಾರದಲ್ಲಿ ಅವರು ಯಡಿಯೂರಪ್ಪನವರಿಗಿಂತ ಭಿನ್ನ. ತಾವು ಮಾಡುವ ಭಾಷಣದ ಮಧ್ಯೆ ಕಾಗದದಲ್ಲಿ ಬರೆದ ವಿಚಾರವನ್ನು ನೋಡಿಕೊಂಡು ಮಾತನಾಡುವುದು ಯಡಿಯೂರಪ್ಪನವರ ರೀತಿ. ಅವರಿಗಿಂತ ಭಿನ್ನ, ಬಸವರಾಜ ಬೊಮ್ಮಾಯಿ. ಯಾವ ಬರಹದ ಬೆಂಬಲ ಇಲ್ಲದೇ ನೆನಪಿನ ಸುಳಿ ಬಿಚ್ಚಿ ಮಾತನಾಡುವ ವ್ಯಕ್ತಿ ಬೊಮ್ಮಾಯಿ. ಹಾಗೇ ನೋಡಿದರೆ ಮೂಲ ಬಿಜೆಪಿ



ಕೆಲ ನಾಯಕರಿಗಿಂತ ಕೆಲ ವಿಚಾರದಲ್ಲಿ ಅವರು ಭಿನ್ನ ಬಸವರಾಜ ಬೊಮ್ಮಾಯಿ. ಕರ್ನಾಟಕ ರಾಜಕೀಯದಲ್ಲಿ ಮತ್ತಿಬ್ಬರು ಇದೇ ರೀತಿ ಇದ್ದರು. ಅವರೇ ರಾಮಕೃಷ್ಣ ಹೆಗಡೆ ಮತ್ತು ಎಸ್.ಎಮ್. ಕೃಷ್ಣ. ಪ್ರಾಯಶಃ ಬಸವರಾಜ ಬೊಮ್ಮಯಿ ಅವರಿಗೆ

## ಹೊಸ ಬೆಳವಣಿಗೆಯ ಮೊದಲ ಹೆಜ್ಜೆ

61 ವರ್ಷದ ಬಸವರಾಜ್ ಬೊಮ್ಮಾಯಿ ಎರಡನೇ ತಲೆಮಾರಿನ ರಾಜಕಾರಿಣಿ. ಅವರ ತಂದೆ 1980 ರ ದಶಕದಲ್ಲಿ ಮುಖ್ಯಮಂತ್ರಿ ಆಗಿದ್ದರು. ಅದು ಕೂಡ ಜನತಾ ಪರಿವಾರದಲ್ಲಿ ಕರ್ನಾಟಕದಲ್ಲಿದ್ದ ಆ ಜನತಾ ಪರಿವಾರ ಈಗ ಇಲ್ಲ. ಅರ್ಧ ಭಾಗ ಜೆಡಿಎಸ್ ಆಗಿ ಉಳಿದಿದ್ದರೆ ಇನ್ನರ್ಧ ಭಾಗ ಬಿಜೆಪಿಯಲ್ಲಿ ವಿಲೀನವಾಗಿ ಎರಡು ದಶಕಗಳೇ ಕಳೆಯಿತು.

## ಮೂವರು ಡಿಸಿಎಂ ಯಾಕೆ?

ಇಲ್ಲಿ ಇನ್ನೊಂದು ವಿಚಾರದಲ್ಲೂ ಕೂಡ ಬಿಜೆಪಿ ಸಂಘರ್ಷಕ್ಕೆ ದಾರಿ ಮಾಡಿಕೊಡದೆ ಹೆಜ್ಜೆಯನ್ನಿಟ್ಟಿದೆ. ಮೂರು ಸಮುದಾಯಗಳಿಗೂ ಪ್ರಾಧಾನ್ಯತೆಯನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಕಳೆದ ಬಾರಿ ಬಿಎಸ್‌ವೈಗಿಂತಲೂ ಸಂತೋಷ ಮಾರ್ಗಗಳೆ ಹೆಚ್ಚು ಪ್ರಭಲವಾಗಿ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡುವ ಕೈಚಳಕ ತೋರಿಸಿದ್ದರೋ ಅವೆಲ್ಲವೂ ಈಗ ಠುಸ್ ಆಗಿವೆ. ಇಲ್ಲಿ ಬಿಎಸ್‌ವೈ ನಿರ್ಧಾರಗಳೇ ಕೆಲಸಮಾಡಿವೆ. ಹಾಗಾಗಿಯೇ ಹಿಂದುಳಿದ ವರ್ಗಗಳ ನಾಯಕ ಶ್ರೀರಾಮುಲು, ದಲಿತ ನಾಯಕ ಗೋವಿಂದ ಕಾರಜೋಳ ಮತ್ತು ಒಕ್ಕಲಿಗ ಸಮುದಾಯದ ಅಶೋಕ್ ಅವರನ್ನು ಉಪ ಮುಖ್ಯಮಂತ್ರಿಗಳನ್ನು ಮಾಡುವ ಮೂಲಕ ಆ ಸಮುದಾಯದ ಮತಗಳನ್ನು ಬಿಜೆಪಿಯತ್ತ ಸೆಳೆಯಲು ಯಶಸ್ವಿಯತ್ತ ಸಾಗಿದ್ದಾರೆ. ಬರುವ ಚುನಾವಣೆ ಮೇಲೆ ಕಣ್ಣಿಟ್ಟಿರುವ ಪಕ್ಷ ಗೆದ್ದೇ ತೀರಬೇಕು ಎನ್ನುವ ಛಲ ಅವವರಲ್ಲಿದ್ದಂತೆ ಕಾಣುತ್ತದೆ ಹಾಗಾಗಿ ಬಿಜೆಪಿ ಹೈಕಮಾಂಡ್ ಎಲ್ಲವನ್ನೂ ಅಳೆದು ತೂಗಿ ಲೆಕ್ಕಾಚಾರಗಳನ್ನು ಮಾಡಿಯೇ ಈ ತೀರ್ಮಾನಕ್ಕೆ ಬಂದಂತೆ ಕಾಣುತ್ತದೆ ಎಲ್ಲವೂ ಬಿಎಸ್‌ವೈ ಮಾರ್ಗದರ್ಶನದ ಮೂಲಕವೇ ನಡೆದಿದ್ದುಬರುವ ಚುನಾವಣೆಯೂ ಅವರ ಮಾರ್ಗದರ್ಶನದಲ್ಲೇ ತೆರಳಲು ಹೈಕಮಾಂಡ್ ನಿರ್ಧರಿಸಿದಂತೆ ಕಾಣುತ್ತಿದೆ.

# ವೀಳೆಯದ ಬೇಡಿಕೆ, ವ್ಯಾಪಾರ ಮತ್ತು ವ್ಯಾಪಾರಿ ಸಂಘಗಳೂ

ಪರಿಶೋಧನೆ

ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ



ವೀಳೆಯವು ದೇಹ ಮತ್ತು ಮನಸ್ಸಿಗೆ ಆರೋಗ್ಯ ಮತ್ತು ಆಹ್ಲಾದಕರ ತಿನಿಸಾದರೆ, ಪೂಜೆ, ನೈವೇದ್ಯಗಳ ಅಲಂಕಾರವೂ ಹೌದು. ಪರಸ್ಪರ ಸ್ನೇಹ, ಪ್ರೀತಿ, ಗೌರವ, ವಿಶ್ವಾಸ, ವಿನಿಮಯ ಮತ್ತು ಒಪ್ಪಂದದ ಸಾಮಗ್ರಿಯೂ, ಬಾಂಧವ್ಯದ ಬೆಸುಗೆಯೂ ಆಗಿದೆ. ವೀಳೆಯದೆಲೆಗೆ ನಾಗವಲ್ಲಿ, ಫಣಿಲತಾ, ತಾಂಬೂಲ(ಸಂಸ್ಕೃತ), ಪಾನ್(ಹಿಂದಿ), ನಾಗವಲ್ಲಿ(ಗುಜರಾತಿ), ವೆಟ್ಟಿಲೈ(ತಮಿಳು), ತಮಲಪಾಕು(ತೆಲುಗು), ವೆಟ್ಟಿಲ(ಮಲಯಾಳಂ) ಎಂದೂ ಕರೆಯುವರು. ವೀಳೆಯದೆಲೆಯಲ್ಲಿ ಜಗತ್ತಿನಾದ್ಯಂತ 90 ವಿಧದ ತಳಿಗಳಿದ್ದು ಅವುಗಳಲ್ಲಿ 40 ತಳಿಗಳನ್ನು ಭಾರತದಲ್ಲಿ ಬೆಳೆಯಲಾಗುವುದೆಂದು ಅಧ್ಯಯನಗಳಿಂದ ತಿಳಿಯುವುದು. ಅವುಗಳಲ್ಲಿ ಇಂದು ಕಲ್ಕತ್ತಾ ಪಾನ್, ಬನಾರಸ್ ಪಾನ್, ಮಗಾಯಿ ಪಾನ್ ಮೊದಲಾಗಿ ಪ್ರತಿ ಗಲ್ಲಿ, ಹೋಟೆಲ್‌ಗಳ ಬಳಿ ಬೀಡಾ ಅಂಗಡಿಗಳು ದಾಂಗುಡಿಯಿಟ್ಟಿವೆ. ಅಡಕೆ ಎಲೆಗಳ ಬೆಳೆ ಹೆಚ್ಚಾಗಿ ಭಾರತವಲ್ಲದೆ ಆಗ್ನೇಯ ಏಶ್ಯಾ ದೇಶಗಳಾದ ಮಲೇಶಿಯಾ, ಇಂಡೋನೇಶಿಯಗಳಲ್ಲಿ ಬೆಳೆಯಲಾಗುತ್ತದೆ. ವೀಳೆಯಕ್ಕೆ ನವಶಿಲಾಯುಗದಷ್ಟು ಪ್ರಾಚೀನತೆಯಿದೆ. ಚಾರಿತ್ರಿವಾಗಿ ಗುಪ್ತರು, ರಾಷ್ಟ್ರಕೂಟ, ಚಾಲುಕ್ಯ, ವಿಜಯನಗರ, ಮೊಗಲ್, ತಂಜಾವೂರು, ನವಾಬರು ಮತ್ತು ಮೈಸೂರು ಒಡೆಯರ ಕಾಲದಲ್ಲೂ ಇದರ ಬಳಕೆ, ವ್ಯಾಪಾರ ಕುರಿತ ದಾಖಲೆಗಳಿವೆ. ಅಲ್ಲದೆ ಇಂದಿಗೂ ವೀಳೆಯ ಅಥವಾ ತಾಂಬೂಲಕ್ಕೆ ವಿಶೇಷ ಮಹತ್ವವನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ವೀಳೆಯ ಬೆಳೆಗೆ ಹೆಚ್ಚು ಹೆಚ್ಚು ಪ್ರಾಧಾನ್ಯತೆಯಿತ್ತು. ಈ ತಾಂಬೂಲವು ಎಷ್ಟರಮಟ್ಟಿಗೆ ಪ್ರಸಿದ್ಧಿಯೆಂದರೆ ಜನ ಸಮುದಾಯದ ಜೊತೆಯಲ್ಲಿ ಅವಿನಾಭಾವ ಸಂಬಂಧವನ್ನು ಹೊಂದಿದೆ. ಅಬ್ದುಲ್ ರಜಾಕ್ ವಿಜಯನಗರದ ಜನರ ಅಭಿರುಚಿಯನ್ನು ಕಂಡು ಇಲ್ಲಿನ ಜನರಿಗೆ ಗುಲಾಬಿಯೆಂದರೆ ಬಲುಇಷ್ಟ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಎಂಬಂತೆ ಅದನ್ನು ಇಷ್ಟಪಡುತ್ತಿದ್ದರೆಂದು ಹೇಳಿದ್ದಾನೆ. ಇಂದು ಊಟವಿಲ್ಲದಿದ್ದರೂ ಚಿಂತೆಯಿಲ್ಲ ಎಲೆ-ಅಡಕೆ ಅದರಲ್ಲೂ ಪಾನ್ ಅಥವಾ ಗುಟ್ಕಾ ಜನರಿಗೇ ಬೇಕೇ ಬೇಕು ಎಂಬಂತಾಗಿದೆ. ಡೊಮಿಂಗೊ ಪೆಯಾಸನು ಎಲೆಯಡಕೆಯನ್ನು ಅಗಿಯುವ ಜನರನ್ನು ಕಂಡು, "ವೀಳೆಯದೆಲೆ ಮೆಣಸಿನ ಎಲೆಯಂತೆ ಇರುತ್ತದೆ. ಇದನ್ನು ಅಡಕೆಯ ಜೊತೆ ಹಾಕಿಕೊಂಡು ಅಗಿಯುತ್ತಾ ದವಡೆಯಲ್ಲಿ ಒತ್ತಲಿಸಿಕೊಂಡಿರುತ್ತಾರೆ. ಇಡೀ ದಿನ ಈ ವೀಳ್ಯದೆಲೆ ಮೆಲ್ಲುವುದನ್ನು ಅವರು ಬಿಡರು" ಎಂದಿದ್ದಾನೆ. ಹಳೆಯ ಜನರು ತಮ್ಮ ಜೊತೆಯಲ್ಲಿ ತಾಂಬೂಲ ಪರಿಕರಗಳ ಚೀಲವನ್ನೇ ತಮ್ಮೊಂದಿಗೆ ಹೊಂದಿರುತ್ತಿದ್ದರು. ಅದಕ್ಕೆ ಎಲೆ-ಅಡಿಕೆ ಚೀಲ, ಬುಡ್ಡಿಚೀಲ, ಸಂಚಿ ಎಂದೇ ಕರೆಯುತ್ತಿದ್ದರು. ರಾಜ-ಮಹಾರಾಜರ ಅವಧಿಯಲ್ಲಿ ಎಲೆ-ಅಡಕೆ-ಸುಣ್ಣ ಮೊದಲಾದ ತಾಂಬೂಲ ಪರಿಕರಗಳನ್ನು ಒಪ್ಪವಾಗಿಟ್ಟು ಜೋಡಿಸಿಕೊಡಲು ರಾಜರ ಆಸ್ಥಾನದಲ್ಲಿ ಪ್ರತ್ಯೇಕ ವರ್ಗವೇ ಇತ್ತು. ಅದನ್ನು ಸಂಚಿಯ ಊಳಿಗದವರು ಎಂದೇ ಕರೆಯಲಾಗುತ್ತಿತ್ತು. ತಾಂಬೂಲದ ಎಲ್ಲ ಪರಿಕರಗಳನ್ನು ಇಡುವ ಪೆಟ್ಟಿಗೆಯೇ ಸಂಚಿ ಪೆಟ್ಟಿಗೆ. ಈ ಬಗೆಯ



ಹೆಸರನ್ನು ಹೊಂದಿದ್ದ ಸಂಚಿ ಹೊನ್ನಮ್ಮ ಮೈಸೂರು ಒಡೆಯರ ಕಾಲದಲ್ಲಿದ್ದುದು ಗಮನಾರ್ಹ. ವೀಳೆಯವನ್ನು ನೀಡುವವಳನ್ನು ವೀಳೆಯದ ಲತಾಂಗಿಯೆಂದೂ, ಸಂಚಿಯವಳೆಂದೂ ಕರೆಯಲಾಗಿದೆ. "ತಂಬುಲದೆಲೆಯಂ ತೆಗೆದಡದಂಗೈಯೊಳಗಿರಿಸುವ ವೀಳೆಯದ ಲತಾಂಗಿಯ ದಕ್ಷಿಣಹಸ್ತಂ ಧರಿಸಿತು ಪಿರಿದುಂ ಚೆಲ್ವಿಕೆಯಾ" ಎಂದು ಸಾಹಿತ್ಯದಲ್ಲಿ ಉಲ್ಲೇಖಗಳಿವೆ.

ವೀಳೆಯಕ್ಕೆ ಹೇಗೆ ಬೇಡಿಕೆಯಿತ್ತೋ ಹಾಗೆಯೇ ಪ್ರಾಚೀನ ಕಾಲದಿಂದಲೂ ಅದರ ವ್ಯಾಪಾರವೂ ವಿಶೇಷವೇ ಆಗಿತ್ತು. ಇದಕ್ಕೆಂದೇ ವ್ಯಾಪಾರಿ ಸಮುದಾಯಗಳು ಬೆಳಕು ಕಂಡಿದ್ದುದು ಗಮನಾರ್ಹ. ಪ್ರಾಚೀನ ಕಾಲದಿಂದಲೂ ಎಲೆ ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡವರು ಎಲೆಗಾರರು. ಇಂದಿಗೂ ಉತ್ತರ ಕರ್ನಾಟಕದಲ್ಲಿ ಎಲೆಗಾರರ ಕುಟುಂಬಗಳೇ ಇವೆ. ವಿಜಯನಗರ ಕಾಲದಲ್ಲಿ ದೇವದಾಸಿಯರು ರಾಜಪರಿವಾರದ ಜೊತೆಯಲ್ಲಿ ಕೂತು ಎಲೆ-ಅಡಕೆ ಮೆಲ್ಲುವಷ್ಟು ಗೌರವ ಪಡೆದಿದ್ದರು. ಡೊಮಿಂಗೊ ಪೆಯಾಸ್ ದೇವದಾಸಿಯರ ಬಗ್ಗೆ ಹೇಳುತ್ತಾ, ಈ ಮಹಿಳೆಯರಿಗೆ ರಾಜನ ಪತ್ನಿಯರ ಸಮಕ್ಷಮಕ್ಕೂ ಪ್ರವೇಶಿಸಲು ಅನುಮತಿಯಿರುತ್ತದೆ. ಅವರು ಇವರೊಂದಿಗೆ ಇರಬಹುದು ಮತ್ತು ವೀಳ್ಯದೆಲೆ ಸೇವಿಸಬಹುದು. ಹೀಗೆ ಮಾಡಲು ಎಂಥ ಉನ್ನತ ದರ್ಜೆಯ ವ್ಯಕ್ತಿಗೂ ಸಾಧ್ಯವಿಲ್ಲ ಎಂದಿದ್ದಾನೆ. ವಿಜಯನಗರಕ್ಕೆ ಭೇಟಿ ನೀಡಿದ್ದ ಪರ್ಶಿಯಾ ರಾಯಭಾರಿ ಅಬ್ದುಲ್ ರಜಾಕ್, ಸಿಪಾರಿ ಎಂದು ಕರೆಯುವ ಅಡಕೆಯನ್ನು ಸ್ವಲ್ಪ ಜಜ್ಜಿ ಬಾಯೊಳಕ್ಕೆ ಹಾಕಿಕೊಳ್ಳುತ್ತಾರೆ. ವೀಳೆಯದೆಲೆಗೆ ಸುಣ್ಣವನ್ನು ಹಚ್ಚಿ ಸುರುಳಿ ಮಾಡಿ ಬಾಯಲ್ಲಿಟ್ಟು ಅಗಿಯುತ್ತಾರೆ ಎಂದಿದ್ದಾನೆ. ಬಾರ್ಬೊಸಾ 'ಈ ಎಲೆ ಇಂಡಿಯಾದಲ್ಲೆಲ್ಲಾ ಬಹಳ ಬೇಕಾದದ್ದು, ಎಂದಿದ್ದಾನೆ. ಹಿಂದೆ ಹಿರಿಯರಿಗೆ ಅನಿವಾರ್ಯವಾಗಿದ್ದ ಎಲೆ-ಅಡಕೆ ಇಂದು ರೂಪಾಂತರ ಹೊಂದಿ ಗುಟ್ಕಾ ಆಗಿ ಯುವಸಮೂಹದಲ್ಲಿ ಅನಾರೋಗ್ಯಕರ ವಾತಾವರಣ ನಿರ್ಮಿಸುತ್ತಿರುವುದು ವಿಷಾದನೀಯ. ಅಲ್ಲದೆ ಆದಾಯದ ಪ್ರಮುಖ ಭಾಗವಾಗಿ ಜಗಜ್ಜಾಹೀರಾಗಿದೆ.

ಪ್ರಾಚೀನ ಕಾಲದಿಂದಲೂ ವೀಳೆಯ ಮತ್ತು ಅದರ ವ್ಯಾಪಾರ ವಿಶಿಷ್ಟವಾಗಿದ್ದುದನ್ನು ಶಾಸನಗಳು ಮನದಣಿಯೆ ವರ್ಣಿಸಿವೆ. ಅಲ್ಲದೆ ಇದರ ವ್ಯಾಪಾರಕ್ಕಾಗಿಯೇ ಪ್ರತ್ಯೇಕ ವರ್ಗಗಳಿದ್ದವು. ಅವೆಂದರೆ ಗವರೆ, ಗಾತ್ರಿಗ, ತಂಬುಲಿಗ, ಉಗುರು ಎಂಬವು ವಿಶೇಷವಾಗಿ ಬಳಕೆಯಾಗಿವೆ. ಎಲೆಬಳ್ಳಿ ಬೆಳೆಗೆ ಭಾರತ ಮತ್ತು ಕರ್ನಾಟಕ ಹಿಂದಿನಿಂದಲೂ ಪ್ರಸಿದ್ಧಿ, ಇದರ ವ್ಯಾಪಾರ ಮತ್ತು ವ್ಯವಹಾರ ಗಮನಾರ್ಹವೇ ಆಗಿದ್ದಿತು. ಉಗುರು ಎಲೆಗಳನ್ನು ಬಳ್ಳಿಯಿಂದ ಕತ್ತರಿಸಲು ಹೆಬ್ಬೆರಳಿಗೆ ಹಾಕಿರುವ ಚಿಕ್ಕ ಉಳಿಯಂತಹ ಸಾಧನ. ಇದನ್ನು ಕೊಯ್ಯುವವರು ಕೊಯ್ಲಾಳಿಗಳು. ಎಲೆ ಭೋಜಂಗರು ಮತ್ತು ಎಲೆದೋಟದ ಒಡೆಯರು ವೀಳೆಯವನ್ನು ಬೆಳೆಯುವವರು. ಇದನ್ನು ಮಾರುವವರಲ್ಲಿ ತಲೆ ಮೇಲೆ ಹೊತ್ತು ಅಥವಾ ಪ್ರಾಣಿಗಳ ಮೇಲೆ ಹೇರಿಕೊಂಡು ಮಾರಾಟ ಮಾಡುವವ ಗವರೆ ಮತ್ತು ಗಾತ್ರಿಗರು. ಇವರನ್ನು ಗವರೆಸೆಟ್ಟಿ, ಗವರೆಗಂಡ, ಹೆಗಲಗವರೆ, ತಂಬುಲಿಗಸೆಟ್ಟಿ, ಗಾತ್ರಿಗಸೆಟ್ಟಿ ಎಂದೂ ಕರೆಯಲಾಗಿದೆ. ಗಾತ್ರಿಗ ಎಂಬುದು ಒಂದು ನಿರ್ದಿಷ್ಟ ಇಲ್ಲವೆ ಸಾವಿರ ವೀಳ್ಯದೆಲೆಗಳ ಕಟ್ಟುಳ್ಳ ಗಾತ್ರ. ಇಂತಹ ಕಟ್ಟುಗಳನ್ನು ಮಾರಾಟ ಮಾಡುವ ವ್ಯಾಪಾರಿ ಗಾತ್ರಿಗ. ಅವರು ಹೇರೆತ್ತಿನ ಗಾಡಿ, ಎತ್ತು, ಕತ್ತೆಗಳ ಮೂಲಕ ವಿವಿಧೆಡೆ ಹೋಗಿ ವ್ಯಾಪಾರ ಮಾಡುತ್ತಿದ್ದರು. ಈ ವ್ಯಾಪಾರಿಗಳು ತಮ್ಮ ತಮ್ಮದೇ ಆದ ಸಂಘ ಮತ್ತು ಗುಂಪುಗಳನ್ನು ಸ್ಥಾಪಿಸಿಕೊಂಡಿದ್ದರು. ಇವರು ತಂಬುಲಿಗ ಸಾಸೀರ್ವರು, ಗವರೆಗಳಯ್ನೂರ್ವರು, ಉಗುರಮುನ್ನೂರ್ವರು, ಉಳಿಯ ಮುನೂರ್ವರು ಎಂದೇ ಗುರುತಿಸಿಕೊಂಡಿದ್ದರು. ಇವರೇ ವೀಳೆಯದ ವ್ಯಾಪಾರ-ವ್ಯವಹಾರವನ್ನು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಗೊಳಿಸಿದವರು. ಇದರ ವ್ಯಾಪಾರ ಎಷ್ಟಿತ್ತೆಂಬುದಕ್ಕೆ ಅದರ ಮೇಲೆ ಹಾಕಲಾಗುತ್ತಿದ್ದ ತೆರಿಗೆಯೂ ಮುಖ್ಯವಾಗಿತ್ತು. ಅದನ್ನು ವೀಳೆಯದೆರೆ, ಅಡಕೆಯ ತೆರಿಗೆಗಳಿದ್ದವು. ಕಲ್ಯಾಣ ಚಾಲುಕ್ಯ ಅರಸ ಅಹವಮಲ್ಲ ಅದುವರೆಗೆ ಎಲೆಯ ಹೇರಿಗೆ ಇದ್ದ ಸುಂಕವನ್ನು ಹೆಚ್ಚಿಸಿದಾಗ ಅದನ್ನು ಸಂಘಗಳು ಪ್ರಶ್ನಿಸಿ ಮೊದಲಿದ್ದ ತೆರಿಗೆಯನ್ನೇ ಉಳಿಸಿಕೊಂಡದ್ದು ಗಮನಾರ್ಹ. ಹೀಗೆ ಎಲೆ, ಅಡಕೆಗಳ ವ್ಯಾಪಾರ, ವ್ಯವಹಾರಗಳು ರಾಜ್ಯ-ಸಾಮ್ರಾಜ್ಯಗಳ ಆದಾಯ ಮೂಲಗಳಲ್ಲಿ ಒಂದಾಗಿದ್ದುದು ನೈಜನೀಯ.

---

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದು ಒಂದು ಹೊಸ ಬೆಳವಣಿಗೆಯ ಮೊದಲ ಹೆಜ್ಜೆ ತರಹ ಕಾಣುತ್ತಿದೆ: ಇತ್ತೀಚಿನ ವರ್ಷಗಳಲ್ಲಿ ಸಂಘ ಪರಿವಾರದ ಸಹವಾಸ ಇಲ್ಲದೇ, ಹೊರಗಿನಿಂದ ಬಂದವನೊಬ್ಬನನ್ನು ಗುರುತಿಸಿ ಮುಖ್ಯಮಂತ್ರಿ ಮಾಡಿದ್ದು ಅತೀ ಮುಖ್ಯ ಬೆಳವಣಿಗೆ. ಅದಕ್ಕೆ ಎರಡು ಕಾರಣ ಮೇಲ್ನೋಟಕ್ಕೆ ಕಾಣುತ್ತಿದೆ

ಒಂದು ಮಾಜೀ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಆಪ್ತವಾಗಿ ನಿಂತಿರುವ ಬೊಮ್ಮಾಯಿಯ ಆಯ್ಕೆಯಿಂದ ಯಡಿಯೂರಪ್ಪನವರನ್ನು ಖುಷಿಪಡಿಸುವ ಪ್ರಯತ್ನವಿರಬಹುದು. ಅದಕ್ಕೂ ಹೆಚ್ಚಾಗಿ, ವೀರಶೈವ ಲಿಂಗಾಯತ ಸಮುದಾಯಕ್ಕೆ ಬಿಜೆಪಿ ಒಂದು ಸಂದೇಶ ಕೊಟ್ಟಂತಿದೆ: ಯಡಿಯೂರಪ್ಪನವರನ್ನು ತೆಗೆಯುವ ಮೂಲಕ ಆದ 'ಅನ್ಯಾಯ'ಕ್ಕೆ ನ್ಯಾಯ ಒದಗಿಸಿ, ಆ ಮೂಲಕ ಮತ ಬ್ಯಾಂಕನ್ನು ತನ್ನ ಕೈನಲ್ಲಿ ಇಟ್ಟುಕೊಳ್ಳುವ ವ್ಯಾವಹಾರಿಕ ನಿರ್ಧಾರವಿರಬಹುದು

## ಮರುಕಳಿಸಿದ ಇತಿಹಾಸ

ಈ ಹಿಂದೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಎಸ್. ಆರ್. ಬೊಮ್ಮಾಯಿ ಸೇವೆ ಸಲ್ಲಿಸಿದ್ದರು. ಇದೀಗ ಅವರ ಮಗ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಇದು ಕರ್ನಾಟಕ ರಾಜಕಾರಣದ ಇತಿಹಾಸವೊಂದು ಮರುಕಳಿಸಿದಂತಾಗಿದೆ. ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಜೋಡಿಯಂತೆಯೇ ತಂದೆ-ಮಗ ಮುಖ್ಯಮಂತ್ರಿಯಾದ ಇತಿಹಾಸ ಮತ್ತೊಮ್ಮೆ ಮರುಕಳಿಸಿದೆ.

ಈ ಹಿಂದೆ ಹುಬ್ಬಳ್ಳಿ ಪ್ರಾಂತ್ಯವನ್ನು ಪ್ರತಿನಿಧಿಸಿ ಮುಖ್ಯಮಂತ್ರಿಯಾಗಿದ್ದ ಎಸ್ ಆರ್ ಬೊಮ್ಮಾಯಿ ಮತ್ತು ಜಗದೀಶ್ ಶೆಟ್ಟರ್ ಇಬ್ಬರೂ ಕೇವಲ 6 ತಿಂಗಳ ನಂತರ ಮಾತ್ರ ಆಡಳಿತ ನಡೆಸಿದ್ದರು. 2004ರಲ್ಲಿ ಜಗದೀಶ್ ಶೆಟ್ಟರ್ ಅವರಿಂದ ಹುಬ್ಬಳ್ಳಿಯಲ್ಲಿ ಚುನಾವಣೆಯಲ್ಲಿ ಸೋಲುಂಡಿದ್ದ ಬಸವರಾಜ ಬೊಮ್ಮಾಯಿ 2008ರ ನಂತರ ಶಿಗ್ಗಾಂವ್ ಕ್ಷೇತ್ರದಲ್ಲಿ ತಮ್ಮ ಅಸ್ತಿತ್ವ ಕಂಡುಕೊಂಡರು. ಅವರು ಇದೀಗ ಮುಖ್ಯಮಂತ್ರಿಯಾಗುತ್ತಿದ್ದಾರೆ. ಹುಬ್ಬಳ್ಳಿ ಒಡನಾಟ ಹೊಂದಿರುವ ಮೂರನೇ ಮುಖ್ಯಮಂತ್ರಿ ಅವರು ಎಂಬುದು ಸಹ ವಿಶೇಷವಾದದ್ದು. ಅಲ್ಲದೇ 6 ತಿಂಗಳ ಕಾಲವಷ್ಟೇ ಎಸ್.ಆರ್.ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದನ್ನೂ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಮುಂದಿನ ವಿಧಾನಸಭಾ ಚುನಾವಣೆಗೆ ಇನ್ನೂ ಎರಡು ವರ್ಷಗಳಿದ್ದು, ಬಿಜೆಪಿಯ ಎಲ್ಲ ಸುಳಿಗಳನ್ನೂ ಸಮರ್ಥವಾಗಿ ನಿಭಾಯಿಸಿದಲ್ಲಿ ಬಸವರಾಜ ಬೊಮ್ಮಾಯಿ ಎರಡೂ ವರ್ಷ ಮುಖ್ಯಮಂತ್ರಿ ಸ್ಥಾನ ಅಲಂಕರಿಸಲು ಸಾಧ್ಯ.

## ಅತ್ಯಂತ ಪ್ರಖರತೆಯುಳ್ಳವರು

2012ರಲ್ಲಿ ಯಡಿಯೂರಪ್ಪ ಕರ್ನಾಟಕ ಜನತಾ ಪಕ್ಷ ಕಟ್ಟಿದಾಗ ಹೊರಗಿನಿಂದ ಬಂದ ಅನೇಕರು ಬಿಜೆಪಿ ಬಿಟ್ಟು ಕೆಜೆಪಿಗೆ ಹೋಗಲಿಲ್ಲ. ಅಂಥವರಲ್ಲಿ ಬಸವರಾಜ ಬೊಮ್ಮಾಯಿ ಕೂಡ ಒಬ್ಬರು. ಅಷ್ಟೇ ಅಲ್ಲ, ಬಿಜೆಪಿಯ ಟಿಕೆಟ್ ಮೇಲೆ ನಿಂತು ಅವರು ಶಿಗ್ಗಾಂವ್ ಕ್ಷೇತ್ರದಿಂದ ಗೆದ್ದು ಬಂದಿದ್ದರು. ಹಾಗಂತ ಅವರು ಯಡಿಯೂರಪ್ಪನವರ ಮೇಲೆ ದ್ವೇಷ ಕಟ್ಟಿಕೊಂಡು ಅವರನ್ನು ದೂರ ಮಾಡಿಕೊಳ್ಳಲಿಲ್ಲ. ಇದೇ ಕಾರಣಕ್ಕೆ ಇರಬಹುದು, 2019 ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರನ್ನು ಮತ್ತೆ ತಮ್ಮ ಹತ್ತಿರದಲ್ಲಿಟ್ಟುಕೊಂಡರು. ರಾಜಕೀಯದಲ್ಲಿ ಬೊಮ್ಮಾಯಿ ಅವರಿಗೆ ಈ ಕಲೆ ರಕ್ತಗತವಾದಂತಿದೆ. ಪ್ರಾಯಶಃ ಅತೀ ಸಣ್ಣ ವಯಸ್ಸಿನಿಂದ ರಾಜಕೀಯವನ್ನು ನೋಡಿರುವ ಬೊಮ್ಮಾಯಿ ಯಾರನ್ನೂ ದ್ವೇಷಿಸಿ ದೂರ ಮಾಡಿಕೊಳ್ಳುವ ರಾಜಕಾರಿಣಿ ಅಲ್ಲ.

ಆದರೂ ಮೊಸರಿನಲ್ಲಿ ಕಲ್ಲು ಇದ್ದರೆ ಎದ್ದು



ಕಾಣುವುದು ಸಹಜ: ಅವರು ಯತಾರೀತಿಯ ರಾಜಕಾರಿಣಿ ತರಹ ಅನ್ನಿಸುತ್ತಾರೆ. ಈಗ ಗೃಹ ಸಚಿವರಾಗಿ ಆ ಇಲಾಖೆ ನಡೆಸಿದ್ದನ್ನು ನೋಡಿದರೆ ಹಾಗೇ ಅನ್ನಿಸಿದರೆ ಆಶ್ಚರ್ಯವಿಲ್ಲ. ಹೊಸ ಹೊಸ ವಿಚಾರವನ್ನು ಮುನ್ನೆಲೆಗೆ ತಂದು ಅದನ್ನು ಜಾರಿಗೆ ತರುವ ಮೂಲಕ, 1983 ರಲ್ಲಿ ರಾಮಕೃಷ್ಣ ಹೆಗಡೆ ಹೇಗೆ ಒಂದು ಹೊಸ ಗಾಳಿ ಬೀಸಿದ್ದರೋ ಆ ರೀತಿ ಮಾಡುವ ಕಲೆಯನ್ನು ಬಸವರಾಜ ಬೊಮ್ಮಾಯಿ ತೋರಿಸಿಲ್ಲ. ಹಾಗಾಗಿ, ಈಗ ಇರುವ ಸರಕಾರದ ಯಂತ್ರವನ್ನು ಯಾವ ಗಲಾಟೆ ಅಥವಾ ವಿವಾದ ಇಲ್ಲದೇ ಮುನ್ನಡೆಸಿಕೊಂಡು ಹೋಗುವ ಕಲೆ ಇದೆ. ಅಥವಾ ಅದನ್ನೇ ಹೈಮಾಂಡ್ ನಿರೀಕ್ಷಿಸುತ್ತಿರಬಹುದು. ಆದರೆ, ಪ್ರತಿ ಕಾನೂನಿಗೂ ಒಂದು ವಿನಾಯಿತಿ ಇರುತ್ತದೆ. ಅದೇ ಪ್ರಕಾರ ಮುಂದಿನ ಎರಡು ವರ್ಷದಲ್ಲಿ ಮೈ ಛಳಿ ಬಿಟ್ಟು ಆಡಳಿತ ಯಂತ್ರಕ್ಕೆ ಬಡಿದ ಗರ ಬಿಡಿಸಿ ಎಬ್ಬಸಿದರೆ ಅವರು ಯಡಿಯೂರಪ್ಪನವರಿಗಿಂತ ಹೆಚ್ಚಿನ ಮೆಚ್ಚುಗೆ ಗಳಿಸುವುದರಲ್ಲಿ ಸಂದೇಹವಿಲ್ಲ.

## ಎದುರಿಗಿರುವವರ ಸೆಡ್ಡೆ

## ಹೊಡೆಯಬಲ್ಲ ವ್ಯಕ್ತಿ

ರಾಜಕೀಯವಾಗಿ ಕೂಡ ಮುಂದಿನ ಎರಡು ವರ್ಷ ಅವರಿಗೆ ದೊಡ್ಡ ಸವಾಲು. ಸಾಮಾಜಿಕ ಜಾಲತಾಣವನ್ನು ಅಷ್ಟೇನು ಮೆಚ್ಚದ ಬೊಮ್ಮಾಯಿ ಅವರದು ಹಳೇ ಧಾಟಿಯ ರಾಜಕಾರಣ. ಆದರೆ ಎದುರುಗಡೆ ಇರುವುದು- ಸಿದ್ದರಾಮಯ್ಯ-ಡಿಕೆಶಿ ಜೋಡಿ. ಬೊಮ್ಮಾಯಿ ಅವರಿಗೆ ಸೆಡ್ಡು ಹೊಡೆಯುವ ತಂತ್ರವನ್ನು ಅವರು ಹೆಣೆಯುತ್ತಾರೆ. ಒಂದು ಇಮೇಜ್ ಮೇಕ್ಓವರ್ ಕಂಪೆನಿಯ ಸಹಾಯದಿಂದ ಹೊಸ ಹೊಸ ರೀತಿಯ ರಾಜಕೀಯ ಪ್ರಯೋಗಕ್ಕೆ ಇಳಿದಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬೊಮ್ಮಾಯಿಯವರ ಹಳೇ ಮಾದರಿಯ ರಾಜಕೀಯ ತಂತ್ರವನ್ನು ಹಣಿಯಲು ಶಕ್ತರು. ಚುನಾವಣಾ ತಂತ್ರಗಾರಿಕೆಯ ಎಲ್ಲ ಮಾದರಿಗಳನ್ನು ಮುರಿದು ಹೊಸ ಪ್ರಯೋಗಕ್ಕೆ ಇಳಿದಿರುವ ಶಿವಕುಮಾರ್ ಅವರ ಮಾತು ಮತ್ತು ಕೃತಿಗೆ ಸರಿಯಾಗಿ ಸೆಡ್ಡು ಹೊಡೆಯಲು ಬಸವರಾಜ ಬೊಮ್ಮಾಯಿ ಅವರಿಗೆ ಯಡಿಯೂರಪ್ಪ ಬೆಂಬಲ ಮತ್ತು ಬಲ ನೀಡಬಹುದೇ ಎಂಬುದು ಯಕ್ಷ ಪ್ರಶ್ನೆ

ಖೇಲಾ ಹೋಬೇ ಘೋಷಣೆಗೆ ಟ್ವಿಸ್ಟ್ ನೀಡಿರುವ ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದಲ್ಲಿ ಒಂದು ಗೇಮ್ ಆಗಿದೆ. ಮತ್ತೊಂದು ಗೇಮ್ ಬಾಕಿ ಇದೆ, ಆಗಸ್ಟ್ 16 ಅನ್ನು ಪಶ್ಚಿಮ ಬಂಗಾಳದಲ್ಲಿ ಖೇಲ್ ದಿವಸ ಆಗಿ ಘೋಷಿಸಿದ್ದಾರೆ. ಪೆಗಾಸಸ್ ಹೆಸರಿನಲ್ಲಿ ಅವರು ನಮ್ಮ ಜೀವನದೊಳಕ್ಕೆ ನುಸುಳಲು ಯತ್ನಿಸುತ್ತಿದ್ದಾರೆ. ನಾನು ನನ್ನ ಫೋನ್ ಅನ್ನು ಪ್ಲಾಸ್ಟಿಕ್ ನಿಂದ ಸುತ್ತಿಟ್ಟಿದ್ದೇನೆ. ಸರ್ಕಾರಕ್ಕೂ ಪ್ಲಾಸ್ಟಿಕ್ ಸುತ್ತಬೇಕು ಎಂದು ಮಮತಾ ಬ್ಯಾನರ್ಜಿ ಕಳೆದ ವಾರ ವ್ಯಂಗ್ಯವಾಡಿದ್ದರು. ಪೆಗಾಸಸ್ ಸ್ಪೈವೇರ್ ಗೂಢಚಾರಿಕೆ ಬಗ್ಗೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮದನ್ ಲೋಕೂರ್ ನೇತೃತ್ವದಲ್ಲಿ ತನಿಖೆಗೆ ಮಮತಾ ಬ್ಯಾನರ್ಜಿ ಆದೇಶ ನೀಡಿದ್ದಾರೆ. ಪೆಗಾಸಸ್ ಸ್ಪೈವೇರ್ ಬಗ್ಗೆ ಸುಪ್ರೀಂಕೋರ್ಟ್ ಗಮನ ಹರಿಸಿ ಸ್ವಪ್ರೇರಣೆಯಿಂದ ಕೇಸ್ ದಾಖಲಿಸಿಕೊಂಡು ವಿಚಾರಣೆ ನಡೆಸಬೇಕು ಎಂದು ಕಳೆದ ವಾರ ಮಮತಾ ಬ್ಯಾನರ್ಜಿ ಹೇಳಿದ್ದರು ಇದೆಲ್ಲದರ ಮಧ್ಯೆ ಮಮತಾ ಬ್ಯಾನರ್ಜಿ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಪಶ್ಚಿಮ ಬಂಗಾಳದ ಚಂಡಮಾರುತದ ಹಾನಿ ಬಗ್ಗೆ ಪರಿಶೀಲನೆ ನಡೆಸಲು ಪ್ರಧಾನಿ ಮೋದಿ ಖುದ್ದಾಗಿ ಬಂದಾಗ ಮಮತಾ ಬ್ಯಾನರ್ಜಿ ಸರಿಯಾಗಿ ಭೇಟಿಯಾಗಿ ಮಾತನಾಡುವ ಸೌಜನ್ಯ, ವ್ಯವಧಾನವನ್ನು ತೋರಿರಲಿಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿ ಕೂಡ ಪ್ರಧಾನಿ ಸಭೆಯಲ್ಲಿ ಭಾಗಿಯಾಗಿರಲಿಲ್ಲ. ಈಗ ದೆಹಲಿಗೆ ಬಂದು ಪ್ರಧಾನಿ ಮೋದಿ ಭೇಟಿಗೆ ಸಮಯ ಕೇಳಿ, ತಾವೇ ಖುದ್ದಾಗಿ ಹೋಗಿ ಭೇಟಿಯಾಗಿದ್ದಾರೆ.



# ಬಿಜೆಪಿಯೇತರ ಪಕ್ಷಗಳ ಒಗ್ಗೂಡಿಸುವತ್ತ ಮಮತಾ ಚಿತ್ತ



ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಜೋಡಿಗೆ ಓಟಕ್ಕೆ ಬ್ರೇಕ್ ಹಾಕಲು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ.ಅಲ್ಲಿನ ವಿಧಾನ ಸಭೆ ಚುನಾವಣೆಯ ಓಟಕ್ಕೆ ಬ್ರೇಕ್ ಹಾಕುವ ಮೂಲಕ ತನ್ನ ಅಧಿಪತ್ಯವನ್ನು ಕಾಪಾಡಿಕೊಂಡ ಮಮತಾ ಈಗ ದೇಶದ ಮೇಲೆ ಕಣ್ಣಿಟ್ಟಿದ್ದಾರೆ.

ಹೌದು ಈಗ 2024 ರ ಲೋಕಸಭಾ ಚುನಾವಣೆ ಮೇಲೆ ಕಣ್ಣಿಟ್ಟಿರುವ ಮಮತಾ ಬ್ಯಾನರ್ಜಿ ಬಿಜೆಪಿಯೇತರ ಪಕ್ಷಗಳನ್ನು ಒಗ್ಗೂಡಿಸುವ ಒಲವು ಮೂಡಿಸಿದ್ದಾರೆ ಈ ಪ್ರಯತ್ನದಲ್ಲಿ ಈಗಾಗಲೇ ತೊಡಗಿಕೊಂಡಿದ್ದಾರೆ ಹೀಗಾಗಿಯೇ ದೆಹಲಿಯಲ್ಲಿ ಎಲ್ಲಾ ಪಕ್ಷಗಳ ಮುಖಂಡರನ್ನು ಭೇಟಿಯಾಗಲಿದ್ದಾರೆ. ಇದೆಲ್ಲದಕ್ಕಿಂತಲೂ ಹೆಚ್ಚಾಗಿ ತನ್ನ ಕಡು ವಿರೋಧಿ ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರನ್ನು ಕೂಡ ಭೇಟಿಯಾಗಿ ಮುಂದಿನ ಸವಾಲುಗಳು ಮತ್ತು ಮುಂದಿನ ಲೋಕಸಭಾ ಚುನಾವಣೆಯ ಗೆಲುವಿನ ಮಂತ್ರವನ್ನು ಪಠಿಸಲಿದ್ದಾರೆ ಎನ್ನಲಾಗಿದೆ.

ದೆಹಲಿಯಲ್ಲಿ ಸಂಸತ್ ಅಧಿವೇಶನ ನಡೆಯುತ್ತಿರುವುದರಿಂದ ಈಗ ಭೇಟಿ ನೀಡಿದರೆ, ಎಲ್ಲಾ ವಿಪಕ್ಷಗಳ ನಾಯಕರನ್ನು ದೆಹಲಿಯಲ್ಲೇ ಭೇಟಿ ಆಗಬಹುದು ಎನ್ನುವುದು ಮಮತಾ ಬ್ಯಾನರ್ಜಿ ಲೆಕ್ಕಾಚಾರ. ಈಗಾಗಲೇ ಕೆಲಸವು ಪಕ್ಷದ ನಾಯಕರುಗಳನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.ಈ ಮೂಲಕ ಮುಂದಿನ ಲೋಕಸಭಾ ಚುನಾವಣೆಗೆ ಇನ್ನೂ ಮೂರು ವರ್ಷ ಬಾಕಿ ಸಮಯ ಇರುವಾಗಲೇ ರಾಜಕೀಯ, ಚುನಾವಣಾ ರಣತಂತ್ರ ರೂಪಿಸಲು ಸಿಎಂ ಮಮತಾ ಬ್ಯಾನರ್ಜಿ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ

ದೇಶದಲ್ಲಿ ಬಿಜೆಪಿಯ ವಿಜಯ ಯಾತ್ರೆಗೆ ಪಶ್ಚಿಮ ಬಂಗಾಳದಲ್ಲಿ ಬ್ರೇಕ್ ಹಾಕಿದಂತೆ, ರಾಷ್ಟ್ರ ಮಟ್ಟದಲ್ಲೂ ಬ್ರೇಕ್ ಹಾಕಬೇಕು ಎನ್ನುವುದು ಸಿಎಂ ಮಮತಾ ಬ್ಯಾನರ್ಜಿ ಬಯಕೆ. ಮುಂದಿನ ಲೋಕಸಭಾ ಚುನಾವಣೆಗೆ ಪ್ಲ್ಯಾನ್ ಮಾಡಲು ಸಮಯ ವ್ಯರ್ಥ ಮಾಡಲ್ಲ ಎಂದು ಕಳೆದ ವಾರ ಹುತಾತ್ಮ ದಿವಸ ಉದ್ದೇಶಿಸಿ ವರ್ಚ್ಯುಯಲ್ ಆಗಿ ಮಾತನಾಡುತ್ತಾ ಸಿಎಂ ಮಮತಾ ಬ್ಯಾನರ್ಜಿ ಹೇಳಿದ್ದರು. ಸದ್ಯ ನಡೆಯುತ್ತಿರುವ ಪಾರ್ಲಿಮೆಂಟ್ ಅಧಿವೇಶನದ ಸಮಯದಲ್ಲೇ



ವಿರೋಧ ಪಕ್ಷಗಳ ನಾಯಕರನ್ನು ದೆಹಲಿಯಲ್ಲಿ ಭೇಟಿಯಾಗಲು ಬಯಸಿದ್ದೇನೆ ಎಂದಿದ್ದರು ಅಲ್ಲದೆ ಈ ಸಮಯದಲ್ಲಿ ಕೆಲವರನ್ನು ಈಗಾಗಲೇ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.


ಇಂದು ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದ ಉನ್ನತ ನಾಯಕರನ್ನು ಮಮತಾ ಬ್ಯಾನರ್ಜಿ ಭೇಟಿಯಾಗುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಕಮಲನಾಥ್, ಆನಂದ್ ಶರ್ಮಾ ಹಾಗೂ ಹಿರಿಯ ವಕೀಲರೂ ಆದ ಕಾಂಗ್ರೆಸ್ ನಾಯಕ ಅಭಿಷೇಕ್ ಮನುಸಿಂಘ್ವಿ ಅವರನ್ನು ಮಮತಾ ಬ್ಯಾನರ್ಜಿ ದೆಹಲಿಯಲ್ಲಿ ಭೇಟಿಯಾಗುತ್ತಿದ್ದಾರೆ. ಅಭಿಷೇಕ್ ಮನುಸಿಂಘ್ವಿ ಅನೇಕ ಕೋರ್ಟ್ ಕೇಸ್‌ಗಳಲ್ಲಿ ಮಮತಾ ಬ್ಯಾನರ್ಜಿ ಹಾಗೂ ಟಿಎಂಸಿ ಪರವಾಗಿ ವಾದ ಮಂಡಿರುವ ವಕೀಲರೂ ಕೂಡ ಹೌದು. ಬಿಜೆಪಿಯ ವಿರುದ್ಧದ ಹೋರಾಟಕ್ಕೆ ವಿಪಕ್ಷಗಳ ನಡುವೆ ಒಗ್ಗಟ್ಟು, ಸಹಮತ ಮೂಡಿಸುವ ಕೆಲಸಕ್ಕೆ ಕೈ ಹಾಕಿರುವ ಮಮತಾ ನಾಳೆ ಕೂಡ ದೆಹಲಿಯ ಪಶ್ಚಿಮ ಬಂಗಾಳ ಹೌಸ್‌ನಲ್ಲಿ ವಿರೋಧ ಪಕ್ಷಗಳ ನಾಯಕರ ಸಭೆಯನ್ನು ನಡೆಸಲಿದ್ದಾರೆ.

ಪ್ರಧಾನಿ ಗಾದಿಗೆ ದೀದಿಯೇ ಸೂಕ್ತ

2018ರ ಮೇ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆದ ಕುಮಾರಸ್ವಾಮಿ ಸಿಎಂ ಪದಗ್ರಹಣ ಕಾರ್ಯಕ್ರಮದಲ್ಲಿ ಮೂವರು ರಾಷ್ಟ್ರ ನಾಯಕಿಯರು ಒಂದೇ ವೇದಿಕೆಗೆ ಬಂದಿದ್ದರು. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ, ಬಿಎಸ್ಪಿ ನಾಯಕಿ ಮಾಯಾವತಿ, ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಒಂದೇ ವೇದಿಕೆಗೆ ಬಂದು ಜನರತ್ತ ಕೈ ಬೀಸಿದ್ದರು. ಈಗ ಮೂರು ವರ್ಷದ ಬಳಿಕ ರಾಷ್ಟ್ರ ಮಟ್ಟದಲ್ಲಿ ಅದೇ ಒಗ್ಗಟ್ಟನ್ನು ಈ ನಾಯಕಿಯರು ಹಾಗೂ ಪಕ್ಷಗಳು ತೋರುತ್ತವೆಯೇ ಎಂಬ ಪ್ರಶ್ನೆ ಜನರನ್ನು ಕಾಡುತ್ತಿದೆ. ಆದರೆ, ಬಿಎಸ್ಪಿ ಪಕ್ಷ ಹಾಗೂ ಕಾಂಗ್ರೆಸ್ ನಡುವಿನ ಸಂಬಂಧ ಈಗಾಗಲೇ ಹದಗೆಟ್ಟಿದೆ. ಹೀಗಾಗಿ ಈಗ ಪ್ರಧಾನಿ ಮೋದಿಗೆ ಚಾಲೆಂಜ್ ಆಗುವ ವಿಪಕ್ಷದ ನಾಯಕ ಯಾರು ಎಂಬುದು ವಿಪಕ್ಷದ ಪಾಳಯದಲ್ಲೇ ಚರ್ಚೆಯಾಗುತ್ತಿದೆ. 2024ರಲ್ಲಿ ವಿಪಕ್ಷದ ಪಾಳಯದಿಂದ ಮೋದಿ ಎದುರಾಳಿ ಪ್ರಧಾನಿ ಅಭ್ಯರ್ಥಿ ಯಾರಾಗುತ್ತಾರೆ ಎಂಬುದು ಕೂಡ ಚರ್ಚೆಯಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ಸತತ ಮೂರನೇ ಬಾರಿಗೆ ಟಿಎಂಸಿ ಪಕ್ಷವನ್ನು ಅಧಿಕಾರಕ್ಕೆ ತಂದಿರುವ ಮಮತಾ ಬ್ಯಾನರ್ಜಿ 2024ರಲ್ಲಿ ಪ್ರಧಾನಿ ಅಭ್ಯರ್ಥಿಯಾಗಲು ಸೂಕ್ತ ಎಂಬ ವಿಶ್ಲೇಷಣೆಗಳು ನಡೆಯುತ್ತಿವೆ. ಈ ಹಿನ್ನಲೆಯಲ್ಲೇ ಮಮತಾ ಬ್ಯಾನರ್ಜಿ ಈಗಿನಿಂದಲೇ ವಿಪಕ್ಷಗಳ ನಾಯಕರು ಹಾಗೂ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಕೆಲಸಕ್ಕೆ ಲೆಕ್ಕಾಚಾರ ಹಾಕಿಯೇ ಕೈ ಹಾಕಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಮಮತಾ ಬ್ಯಾನರ್ಜಿಗೆ ರಾಜಕೀಯವಾಗಿ ಆಕ್ರಮಣಕಾರಿ ಗುಣ, ಸ್ವಭಾವ, ಮಹತ್ವಾಕಾಂಕ್ಷೆ ಇದೆ. ಮಮತಾ ಬ್ಯಾನರ್ಜಿಗೆ ಚುನಾವಣೆ ರಣತಂತ್ರ ರೂಪಿಸಿ ಕೊಡುವ ಪ್ರಶಾಂತ್ ಕಿಶೋರ್ ಬೆಂಬಲ ಇದೆ. ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್, ಆರ್‌ಜೆಡಿ, ಎಸ್ಪಿ, ಜೆಡಿಎಸ್‌ನಂಥ ಪಕ್ಷಗಳ ಜತೆಗೆ ಒಳ್ಳೆಯ ಬಾಂಧವ್ಯ ಕೂಡ ಇದೆ. ಆದರೆ, ಕಾಂಗ್ರೆಸ್ ಪಕ್ಷದ ನಾಯಕರು ಕಾಂಗ್ರೆಸ್‌ನ ಹೊರಗಿನವರನ್ನು ಪಿಎಂ ಅಭ್ಯರ್ಥಿಯಾಗಿ ಒಪ್ಪಿಕೊಳ್ಳುತ್ತಾರಾ ಎಂಬ ಪ್ರಶ್ನೆಯೂ ಇದೆ. ಅಲ್ಲದೇ ಕಾಂಗ್ರೆಸ್ ಪಕ್ಷಕ್ಕೆ ಅನೇಕ ರಾಜ್ಯ ಘಟಕಗಳಲ್ಲೇ ಇಬ್ಬರು ಪ್ರಬಲ ನಾಯಕರ ನಡುವಿನ ನಾಯಕತ್ವದ ಬಿಕ್ಕಟ್ಟನ್ನೇ ಸರಿಯಾಗಿ ನಿಭಾಯಿಸಲು ಸಾಧ್ಯವಾಗುತ್ತಿಲ್ಲ. 2024ರ ಲೋಕಸಭಾ ಚುನಾವಣೆಗೆ ವಿಪಕ್ಷಗಳು ಒಗ್ಗೂಡುವ ಮುನ್ನ ಮುಂದಿನ ವರ್ಷ ನಡೆಯುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಎಸ್ಪಿ, ಬಿಎಸ್ಪಿ, ಕಾಂಗ್ರೆಸ್ ಒಗ್ಗೂಡಲು ಸಾಧ್ಯವಿಲ್ಲ ಎಂದೇ ವಿಶ್ಲೇಷಣೆಗಳು ನಡೆಯುತ್ತಿವೆ. ಏಕೆಂದರೆ, 2017ರ ಯುಪಿ ವಿಧಾನಸಭಾ ಚುನಾವಣೆಯಲ್ಲಿ ಎಸ್ಪಿ-ಕಾಂಗ್ರೆಸ್ ಒಗ್ಗೂಡಿದರೂ ಉತ್ತಮ ಫಲಿತಾಂಶ ಬಂದಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಎಸ್ಪಿ, ಬಿಎಸ್ಪಿ ಮೈತ್ರಿ ಮಾಡಿಕೊಂಡಿದ್ದರೂ, ಬಿಜೆಪಿ 62 ಲೋಕಸಭಾ ಕ್ಷೇತ್ರಗಳಲ್ಲಿ ಗೆದ್ದಿದೆ.





ಕಳೆದ ತಿಂಗಳು ದೆಹಲಿಯಲ್ಲೇ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ರಾಷ್ಟ್ರ ಮಂಚ್ ಹೆಸರಿನಲ್ಲಿ ವಿಪಕ್ಷಗಳ ನಾಯಕರ ಸಭೆ ನಡೆಸಿದ್ದರು. ಆ ಸಭೆಗೆ ಕಾಂಗ್ರೆಸ್ ನಾಯಕರನ್ನು ಆಹ್ವಾನಿಸಿರಲಿಲ್ಲ. ಆದರೆ, ಈಗ ಮಮತಾ ಬ್ಯಾನರ್ಜಿ ಕರೆಯುವ ಸಭೆಗೆ ಯಾವ್ಯಾವ ಪಕ್ಷಗಳ ನಾಯಕರನ್ನು ಆಹ್ವಾನಿಸುತ್ತಾರೆ ಎಂಬ ಕುತೂಹಲವೂ ಇದೆ. 2024ರ ಲೋಕಸಭಾ ಚುನಾವಣೆಗೆ ನಿಜಕ್ಕೂ ವಿಪಕ್ಷಗಳು ಒಗ್ಗೂಡಿ ಹೋರಾಟ ನಡೆಸುವುದು ಸಾಧ್ಯವೇ? ವಿಪಕ್ಷಗಳ ಒಗ್ಗಟ್ಟಿನ ಹೋರಾಟದ ಮೂಲಕ ಬಿಜೆಪಿ ಹಾಗೂ ಮೋದಿಯನ್ನು ಸೋಲಿಸಲು ಸಾಧ್ಯವಾಗುತ್ತಾ ಎಂಬುದು ಚರ್ಚೆಯ ವಿಷಯ. 2019ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್-ಜೆಡಿಎಸ್ ಒಗ್ಗೂಡಿ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದರೂ ಗೆದ್ದಿದ್ದು ಎರಡು ಕ್ಷೇತ್ರಗಳನ್ನು ಮಾತ್ರ.

ಅಷ್ಟೂ ವಿಪಕ್ಷಗಳು ಒಕ್ಕೊರಲಿನಿಂದ ಒಬ್ಬ ಪ್ರಧಾನಿ ಅಭ್ಯರ್ಥಿಯನ್ನು ಆರಿಸಬೇಕಿದೆ

ದೇಶದಲ್ಲಿ 1977ರ ಲೋಕಸಭಾ ಚುನಾವಣೆಯಲ್ಲಿ ವಿಪಕ್ಷಗಳೆಲ್ಲಾ ಒಗ್ಗೂಡಿ ಕಾಂಗ್ರೆಸ್ ವಿರುದ್ಧ ಸ್ಪರ್ಧಿಸಿ ಗೆಲುವು ಸಾಧಿಸಿದ್ದವು. ಇಂದಿರಾಗಾಂಧಿಗೆ ತುರ್ತು ಪರಿಸ್ಥಿತಿ ಮುಗಿದ ಬಳಿಕ ಮತ್ತೆ ಪ್ರಧಾನಿ ಹುದ್ದೆ ಸಿಗದಂತೆ ಮಾಡಿದ್ದವು. ಆ ಇತಿಹಾಸ ಮತ್ತೆ ಪುನರಾವರ್ತನೆ ಮಾಡುವುದು ಸಾಧ್ಯವೇ? ದೇಶದಲ್ಲಿ ಸುಮಾರು 400 ಲೋಕಸಭಾ ಕ್ಷೇತ್ರಗಳಲ್ಲಿ ವಿರೋಧ ಪಕ್ಷಗಳು ಒಗ್ಗೂಡಿ ಬಿಜೆಪಿ ಅಭ್ಯರ್ಥಿಗಳ ವಿರುದ್ಧ ಏಕೈಕ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ, ಬಿಜೆಪಿಯನ್ನು ಸೋಲಿಸಲು ಸಾಧ್ಯ ಎಂದು ಚುನಾವಣಾ ಚಾಣಾಕ್ಯ ಪ್ರಶಾಂತ್ ಕಿಶೋರ್ ನೀಡಿರುವ ಸಲಹೆ. ಈ ಸಲಹೆಯನ್ನು 400 ಲೋಕಸಭಾ ಕ್ಷೇತ್ರಗಳಲ್ಲಿ ವಿರೋಧ ಪಕ್ಷಗಳೆಲ್ಲಾ ಒಪ್ಪಿಕೊಂಡು ಪಾಲಿಸುತ್ತವೆಯೇ ಎಂಬುದು ಕೂಡ ಮುಖ್ಯ. ಇನ್ನು ವಿರೋಧ ಪಕ್ಷಗಳ ಮೈತ್ರಿಗೆ ಕಾಂಗ್ರೆಸ್ ಸೇರಲೇಬೇಕು. ಕಾಂಗ್ರೆಸ್ ಹೊರತುಪಡಿಸಿ, ತೃತೀಯ ರಂಗ, ನಾಲ್ಕನೇ ರಂಗ ರಚಿಸಿದರೂ ಬಿಜೆಪಿ ಸೋಲಿಸಲು ಸಾಧ್ಯವಿಲ್ಲ ಎಂದು ಈಗಾಗಲೇ ಪ್ರಶಾಂತ್ ಕಿಶೋರ್ ಹೇಳಿದ್ದಾರೆ ಎನ್ನುವುದೂ ಗಮನಾರ್ಹ.

ತಮ್ಮ ಖೇಲಾ ಹೋಬೇ ಘೋಷಣೆಗೆ ಟ್ವಿಸ್ಟ್ ನೀಡಿರುವ ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದಲ್ಲಿ ಒಂದು ಗೇಮ್ ಆಗಿದೆ. ಮತ್ತೊಂದು ಗೇಮ್ ಬಾಕಿ ಇದೆ, ಆಗಸ್ಟ್ 16 ಅನ್ನು ಪಶ್ಚಿಮ ಬಂಗಾಳದಲ್ಲಿ ಖೇಲ್ ದಿವಸ ಆಗಿ ಘೋಷಿಸಿದ್ದಾರೆ. ಪೆಗಾಸಸ್ ಹೆಸರಿನಲ್ಲಿ ಅವರು ನಮ್ಮ ಜೀವನದೊಳಕ್ಕೆ ನುಸುಳಲು ಯತ್ನಿಸುತ್ತಿದ್ದಾರೆ. ನಾನು ನನ್ನ ಫೋನ್ ಅನ್ನು ಪ್ಲಾಸ್ಟಿಕ್ ನಿಂದ ಸುತ್ತಿಟ್ಟಿದ್ದೇನೆ. ಸರ್ಕಾರಕ್ಕೂ ಪ್ಲಾಸ್ಟಿಕ್ ಸುತ್ತಬೇಕು ಎಂದು ಮಮತಾ ಬ್ಯಾನರ್ಜಿ ಕಳೆದ ವಾರ ವ್ಯಂಗ್ಯವಾಡಿದ್ದರು. ಪೆಗಾಸಸ್ ಸ್ಪೈವೇರ್ ಗೂಢಚಾರಿಕೆ ಬಗ್ಗೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮದನ್ ಲೋಕೂರ್ ನೇತೃತ್ವದಲ್ಲಿ ತನಿಖೆಗೆ ಮಮತಾ ಬ್ಯಾನರ್ಜಿ ಆದೇಶ ನೀಡಿದ್ದಾರೆ. ಪೆಗಾಸಸ್ ಸ್ಪೈವೇರ್ ಬಗ್ಗೆ ಸುಪ್ರೀಂಕೋರ್ಟ್ ಗಮನ ಹರಿಸಿ ಸ್ವಪ್ರೇರಣೆಯಿಂದ ಕೇಸ್ ದಾಖಲಿಸಿಕೊಂಡು ವಿಚಾರಣೆ ನಡೆಸಬೇಕು ಎಂದು ಕಳೆದ ವಾರ ಮಮತಾ ಬ್ಯಾನರ್ಜಿ ಹೇಳಿದ್ದರು

ಇದೆಲ್ಲದರ ಮಧ್ಯೆ ಮಮತಾ ಬ್ಯಾನರ್ಜಿ ದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಪಶ್ಚಿಮ ಬಂಗಾಳದ ಚಂಡಮಾರುತದ ಹಾನಿ ಬಗ್ಗೆ ಪರಿಶೀಲನೆ ನಡೆಸಲು ಪ್ರಧಾನಿ ಮೋದಿ ಖುದ್ದಾಗಿ ಬಂದಾಗ ಮಮತಾ ಬ್ಯಾನರ್ಜಿ ಸರಿಯಾಗಿ ಭೇಟಿಯಾಗಿ ಮಾತನಾಡುವ ಸೌಜನ್ಯ, ವ್ಯವಧಾನವನ್ನು ತೋರಿರಲಿಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿ ಕೂಡ ಪ್ರಧಾನಿ ಸಭೆಯಲ್ಲಿ ಭಾಗಿಯಾಗಿರಲಿಲ್ಲ. ಈಗ ದೆಹಲಿಗೆ ಬಂದು ಪ್ರಧಾನಿ ಮೋದಿ ಭೇಟಿಗೆ ಸಮಯ ಕೇಳಿ, ತಾವೇ ಖುದ್ದಾಗಿ ಹೋಗಿ ಭೇಟಿಯಾಗಿದ್ದಾರೆ.

# ಒಂಟಿ ಹಕ್ಕಿಗಳ ಮುಳ್ಳುಗೂಡು...

ಸ್ಥಿತಿಬಿಂಬ

ಡಾ.ಶಿವಕುಮಾರ್ ಕಂಪ್ಲಿ



ಕುಟುಂಬ ಸಮಾಜದ ಬಹು ಮುಖ್ಯವಾದ ಅಂಗ.ಕೂಡು ಕುಟುಂಬ ಹಲವು ಸೊಗಸು ಸಂಸ್ಕೃತಿಗಳ ದೊಡ್ಡ ಆಗರ.ಕುಟುಂಬದಲ್ಲಿಯ ಪ್ರೀತಿ ಮತ್ತು ಒಗ್ಗಟ್ಟಿನ ಸೇತುವೆ ಈಗ ಮೆಲ್ಲಗೆ ಬಿರುಕು ಬಿಟ್ಟಿದೆ.ಪಾಶ್ಚಾತ್ಯ ಗಾಳಿ ಬಡಿದು ಅವಿಭಕ್ತ ಕುಟುಂಬ,ಕೂಡು ಕುಟುಂಬ, ದೊಡ್ಡ ಕುಟುಂಬ, ತುಂಬಿದ ಮನೆ ಎಂಬ ಪದಗಳು ಈಗೀಗ ಮರೆವಿನ ಅಂಚಿಗೆ ಸರಿಯುತ್ತಿವೆ. ಒಗ್ಗಟ್ಟಿನ ಪಕ್ಷಿಗಳ ಗುಂಪು,ಪ್ರಾಣಿಗಳ ಗುಂಪಿನಂತೆ ಮಾನವರ ಸಂಬಂಧಗಳ ಗುಂಪನ್ನ ಕಾಣುವುದು ಅಪರೂಪವಾಗುತ್ತಿದೆ.ವಾಣಿಜ್ಯವೇ ಪ್ರಧಾನವಾದ ನಗರಕ್ಕೋ ಕೀರ್ತಿಯ ಹಂಬಲ! ಗಳಿಸುವ ಉಮೇದು,ಸ್ವಾರ್ಥದ ನಡೆ,ದೊಡ್ಡ ದೊಡ್ಡ ಬಂಗಲೆಗಳ ಆಚೆಗಿನ ಪಾಳು ಬಯಲೊಳಗೆ ಊರಿಕೊಂಡ ಟೆಂಟುಗಳಲ್ಲಿ ಅಂತಹ ಕೀರ್ತಿಯ ವಾಸನೆಯಿಲ್ಲ,ಆ ಪಾಟಿ ಗಳಿಕೆಯ ಹುಚ್ಚಿಲ್ಲ,ಇಲ್ಲಿನ ಬದುಕು ತೀರಾ ತೆಳುವಾದದ್ದು.ಇಲ್ಲಿ ದೊಡ್ಡ ಕನಸಿಗೆ ಜಾಗವಿಲ್ಲ.ಆ ಹೊತ್ತಿನ ಊಟದ ಒಲೆ ಹೊತ್ತಿದರೆ ಅನ್ನಕ್ಕೆ ನೆರೆವ ಮಕ್ಕಳು ಎಷ್ಟೊಂದು! ಹಿರಿಯರು,ಕಿರಿಯರು,ಬಂಧು,ಬಳಗಗಳ ದೊಡ್ಡ ಗುಂಪೇ ಅಲ್ಲಿ ಕೂಡುತ್ತವೆ.ಟೆಂಟಲ್ಲಿ ಸವಲತ್ತುಗಳಿಲ್ಲ,ಅವರಿಗೆ ಬೀದಿ ನಲ್ಲಿಯ ನೀರಲ್ಲೇ ಎಲ್ಲಾ..ಗೂಡಂಗಡಿಯ ಮಾಲು,ಕಾಡು ಬೇಟೆಯ ಘಮಲಲ್ಲಿ,ಅರೆ ಬರೆ ಬಟ್ಟೆಗಳಲ್ಲಿ ದಿನ ಕಳೆವ ಅವರೊಳಗೆ ಭವ್ಯ,ನವ್ಯ,ದಿವ್ಯಗಳೆಂಬ ಘನ ..ಘನ...ಲೈಮ್ ಲೈಟ್ ನ ಬಣ್ಣಗಳಿಲ್ಲ.ಅಲ್ಲಿ ಕರುಳ ಬಳ್ಳಿಗಳ ಹೆಣಿಗೆ ಇದೆ.ಒಲವಿದೆ.ಅಕ್ಕರೆಗಳಿವೆ,ಬೈಗುಳ, ಕಿರುಚಾಟಗಳಿಗೆ ಸಾಂತ್ವಾನಗಳ ಕೈಗಳಿವೆ.

ನಗರ ದಾಚೆಯ ಮಣ್ಣು ಧೂಳಿನ ಸ್ಮಾರ್ಟ ಸಿಟಿಯಲ್ಲದ ಹಳ್ಳಿಗಳಲ್ಲಿ, ಕೃಷಿಕ ಕುಟುಂಬಗಳಲ್ಲಿ ಈಗಲೂ ಒಗ್ಗಟ್ಟಿನ ಮಂತ್ರಗಳ ಕಾಪಿದೆ.ಹಿರಿಕಿರಿಯರ ಬೆಸುಗೆ ಇದೆ.ಹಬ್ಬ ಹರಿದಿನಗಳೆಂಬ ಬಂಧುಗಳನ್ನ ನೆರೆಸುವ ಹುಮ್ಮಸ್ಸುಗಳಿನ್ನೂ ಅಲ್ಲಿ ಮಾಸಿಲ್ಲ.ಬದುಕಿನ ಆಚರಣೆಗಳನ್ನ ಅವರು ಹಣ ಮೂಲದಿಂದ ನೋಡಲಾರರು ಅವರು ಜನಮೂಲಗಳಿಂದ ಗ್ರಹಿಸುತ್ತಾರೆ.ಪಾಶ್ಚಾತ್ಯದ ಲಾಭದ ನದರು ತ್ಯಾಗದ ಹಳ್ಳಿಗಳ ಸಂಬಂಧಗಳನ್ನ ಕೆಡಿಸಿಲ್ಲ.ಅಲ್ಲಿನ್ನೂ ಮಕ್ಕಳಿಗಾಗಿ ಪ್ಲೇ ಹೋಂ, ನಲ್ಲೆಯರಿಗಾಗಿ ಡೇಟಿಂಗ್,ಅಪ್ಪ ಅಮ್ಮಂದಿರಿಗಾಗಿ ಸಂಡೇ ಸ್ಪೇಸ್ ಗಳು ಬಂದಿಲ್ಲ. ಲಿವಿಂಗ್ ಟುಗೇದರ್,ಕ್ರಷ್,ಪ್ಯಾಥೋ,ಪ್ರಾಂಕ್ ಮೊದಲಾದ ಪದಗಳ ಪರಿಚಯವಿಲ್ಲ.ಹಳ್ಳಿಯಲ್ಲಿನ್ನೂ ಸಮುದಾಯಗಳ ಭಯವಿದೆ,ಪಂಚಾಯ್ತಿಯ ಕಣ್ಣಿದೆ,ಹಿರೀಕರ ವಿವೇಕವಿದೆ.ಆಸೆ ಇದ್ದರೂ ಅದು ತಲೆ ತಲೆ ಮಾರುಗಳಿಗೆ ಆಗುವಷ್ಟಿದ್ದರೂ ಗಳಿಸಬೇಕೆಂಬ ಹುಚ್ಚಿನದಲ್ಲ.ಇದ್ದುದ್ದರಲ್ಲಿಯೇ ಉಂಡು ಇಲ್ಲದವನಿಗೆ ಅಷ್ಟು ನೀಡಿ ಬಾಳುವ ಕಲೆಯಿದೆ.ಸರೀಕರ ನಾಲಿಗೆಗೆ ಸಿಗದೆ ಬಾಳುವ ಸೂತ್ರವಿದೆ.

ನಗರದ ಬಣ್ಣದ ಅಂಗೈ ಮೇಲೆ ಆಹಾ... ಎನಿಸುವ ಅದ್ದೂರಿ ಸೆಟ್.ಸೊಗಸಾದ ವಾದ್ಯಗೋಷ್ಟಿ. ಅಪರೂಪದ ರುಚಿಕಟ್ಟಾದ ಭೂರಿ ಭೋಜನ. ಎಲ್ಲಿಂದಲೋ ಬಂದ ಬೀಗರು,ಬಂಧು– ಬಾಂಧವರು,ಗೆಳೆಯರು,ನೆರೆಯವರು ಹಿತೈಷಿಗಳೆಲ್ಲಾ ನೆರೆದ ಅನುರೂಪ ಸಂಗಮದ ನಡುವೆ ನಡೆದ ಅವರವರ ಕುಟುಂಬದಲ್ಲೇ 'ನಭೂತೋ ನಭವಿಷ್ಯತಿ' ಎಂಬಂತಹ ಮದುವೆ.ಡ್ರೋನ್ ಕ್ಯಾಮರಾ, ವಿಡಿಯೋ.. ಒಂದೊಂದು ಪೋಟೋ ಚೌಕಟ್ಟಲ್ಲೂ ಅಪ್ಪ ಅಮ್ಮನಿಗೆ ಏನೋ ಸಾಧಿಸಿದ ನೆಮ್ಮದಿ,ಋಣ ಮುಕ್ತರಾದ ಅನುಭವ! ವಧುವರರಿಗೆ ಸ್ವರ್ಗದಲ್ಲೇ ತೇಲುವ ಅನುಭವ.ಬಂದವರೆಲ್ಲಾ ಹರಸಿ ಹರುಷದಲ್ಲಿ ಕಲೆತು ವಲಸೆ ಹಕ್ಕಿಗಳಂತೆ ಹಾರಿ ಹೋದ ಮೇಲೆ ಮಗ ಸೊಸೆಯೊಂದಿಗೆ ಹಿರಿಜೀವಗಳ ಮತ್ತೊಂದು ಪುಟ.ಹೊಸದೊಂದು ಸಂಭ್ರಮ. ಬಳಲಿದ ಜೀವಗಳಿಗೆ ಹೊಸದೊಂದು ತುಂಬು ಕನಸು! ಮಗ ತೊಟ್ಟ ಸೂಟ್ ಮಾಸುವ ಮೊದಲೇ ಹೆಂಡತಿಯ ಕಿರಿ ಕಿರಿ.ಬೇರೆ ಕಡೆ ಮನೆ ಮಾಡಿಸುವ ಹಠ! ಯೌವನದ ನಿಶೆಯಲ್ಲವೇ? ಮುತ್ತಿಗೇ ಒಲಿಯುವ ಮಗ ಸಾಕಿ ಸಲಹಿದ ಹಿರಿ ಜೀವಗಳ ಬಿಟ್ಟು ಬೇರೆ ಮನೆ ಮಾಡುತ್ತಾನೆ! ತನ್ನದೇ ರೆಕ್ಕೆಯೊಳಗೆ ಅರಳಿದ ಪುಟ್ಟಮರಿ, ತನ್ನದೇ ತುತ್ತು ತಿಂದು ಬೆಳೆದ ಜಾಣಮರಿ.ರೆಕ್ಕೆ ಬಲಿತು ಹಾರಿ ಹೋದಮೇಲೆ ಹಿರಿ ಜೀವಗಳು ಮೌನಕ್ಕಂಟಿಕೊಳ್ಳುತ್ತವೆ! ನಗೆಯೇ ತುಂಬಿ ಹೊರಳಾಡುತಿದ್ದ ನೆಲವೀಗ ಬಿಕೋ ಎನ್ನುತ್ತಿದೆ! ಮಾತು .. ಮಾತು.. ಮಾತೇ ಪ್ರತಿಧ್ವನಿಸುತ್ತಿದ್ದ ಕೋಣೆಗಳು. ಮೌನ ಹೊದ್ದುಕೊಂಡಿವೆ. ಕಾಲಿಗೆ ಚಕ್ರಕಟ್ಟಿಕೊಂಡು ಊರು ಊರುಗಳ ಸುತ್ತಿ ಗಳಿಸಿದ ಹಿರಿ ಜೀವವನ್ನ ರೋಗಗಳು ಮುತ್ತಿಕೊಂಡು ಚಲನಶೀಲ ನಡೆಗೇ ತಿರುಗಿ ಬಿದ್ದಿವೆ!ಒಲವಿನ ಸಖಿಗೆ ಮರೆವಿನ ರೋಗ! ಕಪಾಟಿನೊಳಗೆ ದುಡ್ಡಿದೆ,ಮನೆ,ತೋಟಗಳ ಸಂಪತ್ತಿದೆ.ನಾಡು ನೀಡಿದ ಗೌರವ ಮನೆ ತುಂಬಿ ತುಳುಕುವಷ್ಟಿದೆ! ಆದರೆ ಹೋದಲ್ಲಿ... ಬಂದಲ್ಲಿ... ಮನೆ ಮನಗಳಲ್ಲಿ ಮುತ್ತಿಕೊಂಡು ಪರಿಮಳ ಹರಿಸುತಿದ್ದ ಮಕ್ಕಳಿಲ್ಲ!ಮನೆಯಲ್ಲಿ ಅಸಲಿಗೆ ನೋಡಿಕೊಳ್ಳುವವರೇ ಇಲ್ಲ!ಆದರೂ ಗಟ್ಟಿ ಜೀವ ಅಧೀರವಾಗಿಲ್ಲ.ಎದ್ದು ನಗುತ್ತದೆ.ಎಲ್ಲವನ್ನೂ ಹೋರಾಡಿ ಗೆದ್ದ ಛಲದ ಜೀವ ಮತ್ತೊಮ್ಮೆ ಸಿಡಿದೆದ್ದು ಗೆಲ್ಲಲೆಂದೇ ನಿಂತಿದೆ. ಪ್ರಪಂಚ ದೊಡ್ಡದು,ತನ್ನವರು ಇರದಿದ್ದರೇನು. ತನ್ನವರನ್ನ ತನ್ನ ಗೆಳೆಯರಲ್ಲಿ, ಹಿತೈಷಿಗಳಲ್ಲಿ, ನೆರೆಯವರಲ್ಲಿ ಕಾಣುತ್ತಾ...! ಬಂದವರೊಡನೇ ನಕ್ಕು ತನ್ನ ಸ್ಟ್ರಾಂಗ್ ಪಾಯಿಂಟ್ ಮತ್ತು ವೀಕ್ ಪಾಯಿಂಟ್ ಗಳನ್ನ ಷೇರ್ ಮಾಡಿಕೊಳ್ಳುತ್ತಾ... "ಇದು ಜೀವನ. ಯಾವುದೂ, ಯಾವ ಕ್ಷಣವೂ ಸಂಭವಿಸಬಹುದು. ಅನುಭವಿಸಲು ಸಿದ್ಧವಾಗಬೇಕು. ಈ ಕ್ಷಣ ನಿಜ. ಇದನ್ನ ಅನುಭವಿಸೋಣ. ನಾಳೆ ನಮ್ಮದಲ್ಲ ಅದಕ್ಯಾಕೆ ಕೊರಗೋಣ?" ಇದು ಇವರ ಜೀವನ ಸಿದ್ಧಾಂತ! ಇವರಿಗೆ ಓಡಾಡಿ ತರುವ ಚೈತನ್ಯವಿಲ್ಲ! ಇವರ ಪತ್ನಿಗೋ.. ಮಾಡಿನೀಡುವ ಆ ಗಮ್ಮತ್ತು ಉಳಿದಿಲ್ಲ.ಮರೆವೆಯಲ್ಲಿ ಎಲ್ಲಿ ಉಪ್ಪನ್ನೋ ... ಕಾರವನ್ನೋ... ಜಾಸ್ತಿ ಹಾಕುತ್ತಾಳೋ ಏನೋ...?ರುಚಿ ತಿಂದ ನಾಲಿಗೆ ಕೇಳುತ್ತದೆಯೇ? " ನೋಡಿ ಕಾಲ ಕೆಟ್ಟೋಗಿದೆ ಅಂತಾರೆ, ಅದು ಸುಳ್ಳು ಕಾಲ ರೀಫ್ರೆಷ್ ಆಗಿದೆ ಅದನ್ನ ಬಳಸಿಕೊಳ್ಳೋ ಟೆಕ್ನಿಕ್ ಕಲೀಬೇಕು! " ಒಂದು ಪೋನ್ ಮಾಡಿದ್ರೆ ಅಡಿಗೆ ಮನೆಗೇ ಬರುತ್ತೆ.ಇನ್ಯಾಕೆ ಬಡಿದಾಟ ಮೂರೊತ್ತೂ ಸುಲಭ! ಕೆಲಸದವರಿಗೆ ಮಿಕ್ಕದ್ದು ನೀಡುತ್ತಾ ನಗುತ್ತ ಇದ್ದರಾಯ್ತು! ನಮಗಿಂತಲೂ ಸ್ಥಿತಿಗೆಟ್ಟವರಿಗೆ ಉತ್ಸಾಹ ತುಂಬುತ್ತಾ.. ನಮಗಿಂತಲೂ ಚನ್ನಾಗಿರುವವರ ಬಳಿ ಉತ್ಸಾಹ ಪಡೆಯುತ್ತಾ... ಒಂದು ದಿನ ಟಾಟಾಗೂ ರೆಡಿಯಾದರಾಯ್ತು"

***

ದಾರಿಯ ನಡುವೆ ಹಾಗೇ.. ಸಾಗುತಿದ್ದ ಪಯಣದ ನಡುವೆಯೇ ಗಾಡಿಯೊಂದು ಬುಡಮೇಲಾಗಿ ಉರಳಿ ಹೊತ್ತಿ ಉರಿಯುವಂತೆ .. ತಣ್ಣಗೆ ಮಲಗಿದ ಮನೆಯನ್ನೇ ನಡುರಾತ್ರಿಯ ಪ್ರವಾಹ ಕೊಚ್ಚಿ ಬಿಸಾಕಿದಂತೆ .. ಪ್ರೀತಿಯ ಪಾರಿವಾಳದಂತೆ ಮುದ್ದಾಗಿ ಸದ್ದು ಮಾಡುತ್ತಾ... ಆಫೀಸ್ ಗೆ ಹೋದವ 'ಹಾರ್ಟ ಅಟ್ಯಾಕ್' ಎಂಬ ಸುದ್ದಿ ನೀಡುತಿದ್ದಂತೆಯೇ...ಆಕೆಯ ಬದುಕು ಮೂರಾ ಬಟ್ಟೆಯಾಯಿತು.ಗಂಡ ಜೊತೆಗೇ... ಇದ್ದಾಗ ಎದುರಾಡುತ್ತಾ,ಜಗಳ ಕಾಯುತ್ತಾ.. 'ಅದು ಮಾಡು ಇದು ಮಾಡು' ಎಂದಾಗ ಬಿಲ್ ಕುಲ್ ಇಲ್ಲ ಎಂದು ಒಲೆಯ ಉರಿಯ ಹಾಗೆಯೇ ಉರಿಯುತ್ತಾ..ಇರುವಾಗಲೇ ಭರಿಸಲಾಗದ ಆತನ ಅಗಲಿಕೆಯ ನೋವನ್ನ ಹೇಗೆ ತೋರಿಸುವುದು!? ಕಣ್ಣೀರ ಸಮುದ್ರವನ್ನ ಎಷ್ಟಂತ ತಡೆಯುವುದು!?.. ಒಲವು ಹಸಿರಾಗಿತ್ತು. ಬಳ್ಳಿಯ ಹೂವಿನ ಚಲುವಂತಿತ್ತು! ಇರುಳಿಗೊಮ್ಮೆ ,ಮುಂಜಾನೆಗೊಮ್ಮೆ ಹಿತವೆನೆಸುವ ಆತನ ನಗೆಯ ಪುಲಕ ಬದುಕಿನ ದೋಣಿಯನ್ನ ಎಷ್ಟೊಂದು ಚಲುವಾಗಿ ಸಾಗಿಸುತಿತ್ತು.ಈಗ ಮನೆಯ ನಡು ಕಂಬವೇ ಕಳಚಿ ಬಿದ್ದಂತಾಗಿದೆ.ಅವರೇ ಇಲ್ಲದ ಮೊದಲ ಮನೆ!

ಮಗ,ಸೊಸೆ ಮಗಳು ಅಳಿಯ ಬಂದ ಅವಸ್ಥೆ ಕಂಡು ಎರಡು ದಿನ ಕಣ್ಣೀರು ಉಕ್ಕಿಸಿ ಕರುಣೆ ತೋರಿದರೂ ಗಂಡನಂತಾದೀತೇ!?.. ತಿಂಗಳು ಕಳೆಯಲಿಲ್ಲ ಮೆಲ್ಲಗೆ ಅವರ ಒಂದೊಂದೇ ಬಣ್ಣ ಕರಗುತ್ತಿವೆ.ಮುನಿಸುಗಳ ಮೇಳ, ಕೋಪಗಳ ಹಾರ ಹಾಕುತಿದ್ದಾರೆ.." ನೀ ಎಲ್ಲದಕ್ಕೂ ಅಡ್ಡ ಬಾಯಿ ಯಾಕ ಹಾಕತೀ.. ಎದ್ದರೆ ವಟ ವಟ..ಕುಂತರೆ ವಟ ವಟ.. ನನಗಂತೂ ಸಾಕಾಕಿದೆ..ಕಣಮ್ಮಾ..!!!"

ತವರಿಲ್ಲದ ಮನೆ. ಗಂಡನಿಲ್ಲದ ಮನೆ ಎರಡೂ ಹೆಣ್ಣಿಗೆ ಹಿಂಸೆಯೇ..ಗಂಡನಿಲ್ಲದವಳು,ವಯಸ್ಸಾದವಳು... ದುಡಿಮೆ ಇಲ್ಲದವಳು ಈಗ... "ಎರಡು ವಾರ ಮಗಳ ಮನೆ,ಮತ್ತೆ ಎರಡುವಾರ... ಮಗನ ಮನೆ!" ಅಂತಾ ಬೆಕ್ಕು ತನ್ನ ಸಂಸಾರ ಹೊತ್ತು ಸಾಗಿಸುವಂತೆ ಅಲೆದಾಡಿದರೂ ಆಕೆಗೆ ಸಂತೋಷವೆಂಬುದು ಮರೀಚಿಕೆಯೇ!ಸದ್ದಿಲ್ಲದೇ ಬಂದು ಹೊಕ್ಕ ಸಕ್ಕರೆಯ ಕಾಯಿಲೆ ಬೇರೆ.ಮಂಡಿ ಹಿಡಿಯುತ್ತಿದೆ,ರಾತ್ರಿ ಹೇಗೋ ಮೂತ್ರ ಹೋಗಿ ಹಾಸಿಗೆ ತಣ್ಣಗಾಗುವುದರಿಂದ ಯಾರೂ ಸುಧಾರಿಸುತ್ತಿಲ್ಲ. ಮಕ್ಕಳಂತೆಯೇ ಈಗೀಗ ಮೊಮ್ಮಕ್ಕಳೂ ಹಂಗಿಸುತ್ತಿದ್ದಾರೆ. ನಿಂತ ನಿಂತಲ್ಲೇ ಎದೆಗೇ ಚೂರಿ ಬಿದ್ದಂತಾಗಿ ಮೆಲ್ಲಗೆ ಮನೆ ಮುಂದಿನ ಮರದ ಬಳಿ ಕುಳಿತು ಆಗಸ ದಿಟ್ಟಿಸುತ್ತಿದ್ದಾಳೆ.ಸಂಜೆಯ ಮೋಡದಲ್ಲಿ ಸೂರ್ಯನೂ ಇಲ್ಲ. ಬರೀ...ನೆತ್ತರ ಸಂತೆ! ಉಡಿಯಲ್ಲಿ ಒಂಟಿ ತನದ ಹಾಲಾಹಲ! ಕಣ್ಣ ಜಿನುಗು ಮಳೆಯನ್ನ ನಿಲ್ಲಿಸುವವರಾರು!? ಸಾಂತ್ವಾನದ ಮಾತು ಹೇಳುವವರಾರು? ಗಂಡನ ಪೆನಷನ್ ಇದೆ.ಆತನ ನೆನಪುಗಳು ಜೊತೆಗೇ ಇವೆ. ಯಾರಿಗೆ ಯಾಕೆ ಹೊರೆಯಾಗಲಿ ಎಂದು ತನ್ನ ಬಟ್ಟೆಗಂಟು ಕಟ್ಟಿಕೊಂಡು ವೃದ್ಧಾಶ್ರಮದ ಬಾಗಿಲು ಮುಟ್ಟಿದಳು...

ಅವರೊಬ್ಬ ದೊಡ್ಡ ಬರಹಗಾರ.ಅತ್ಯುತ್ತಮ ವಾಗ್ಮಿ. ಜನರನ್ನ ಸೂಜಿಗಲ್ಲಿನಂತೆ ಸೆಳೆಯುತಿದ್ದ ಕಲಾವಿದ. ಹರಡಿ ಕೊಂಡ ಫಲಕಗಳು ಹಾರ ತುರಾಯಿಗಳು ಕೋಣೆ ತುಂಬಾ.ಈಗ ನೀರವ ಮೌನ.! ಚಂದದ ಮನೆ. ಮಕ್ಕಳೆಲ್ಲಾ ಅಮೇರಿಕಾ ಆಸ್ಟೇಲಿಯಾ ಅಂತಾ ದೂರ ದೇಶಗಳತ್ತ ಹರಿದು ಹೋಗಿದ್ದಾರೆ.ಸದಾ ಜೊತೆಗೇ ಇರುವೆನೆಂದು ಅಗ್ನಿ ಸಾಕ್ಷಿಯಾಗಿ ಜೊತೆಯಾದ ಧರ್ಮ ಪತ್ನಿ ಇರುವ ತನಕ ಯಾವ ಕಳಂಕವೂ ಇಲ್ಲದಂತೆ ಬದುಕಿನ ಪಯಣ ಸಾಗಿತ್ತು.ಆಕೆ ಸದ್ದಿಲ್ಲದೇ ಸರಿದೊಡನೆ ಮನಸ್ಸಿನ ಕನ್ನಡಿ ಒಡೆದು ಚೂರಾದಂತೆ ಬದುಕೂ ಚೂರಾಯಿತು.

ಅಮ್ಮನಾಗಿ,ಗೆಳತಿಯಾಗಿ, ಸಖಿಯಾಗಿ ಎಷ್ಟೊಂದು ದೊಡ್ಡ ತ್ಯಾಗ ಮಾಡಿದ್ದಳು.ಎಂದೂ ತನಗಾಗಿ ಯೋಚಿಸದೇ ನಮಗಾಗೇ ದುಡಿದವಳು! ಅವಳಿಲ್ಲದ ಆತನಿಗೆ ಅರ್ಧನಾರೀಶ್ವರನ ಸತ್ಯ ಗೋಚರಿಸಿತು.ಅವಳ ಯೋಚನೆಯಲ್ಲೇ ಮುಳುಗಿದನಿಗೆ ಜೊತೆಗಿದ್ದದ್ದು ಶೂನ್ಯವೇ ..

ಮೊಬೈಲ್ ಗಳಲ್ಲಿ ಮಕ್ಕಳ ಮೊಮ್ಮಕ್ಕಳ ಕಾಳಜಿಗಳನ್ನ ಕೇಳಿ ಪುಲಕಗೊಳ್ಳಬೇಕಿದೆ.ಟಿ.ವಿ.ರೇಡಿಯೋಗಳ ಸಂವಹನ ರಹಿತ ಮಾತುಗಳನ್ನೇ ಕೇಳಿ ಸುಖಿಸಬೇಕಿದೆ. ಕಳೆದ ಆರು ತಿಂಗಳಲ್ಲಿ ಎಂತೆಂತಹ ಬದಲಾವಣೆ ಅವಳಿಲ್ಲದ ಮನೆ ತುಂಬಾ ಮತ್ತಷ್ಟು ನಿಶ್ಯಬ್ದ! ಯಂತ್ರಗಳು ಎಷ್ಟು ಸುಖ ಕೊಟ್ಟಾವು? ಪರರು ಎಷ್ಟು ಆತ್ಮೀಯ ಆದಾರು! ಕಾಡುವ ಹಾಳು ಆರ್ಥೈಟಿಸ್ ಕೈ ಕಾಲುಗಳ ಸ್ವಾಧೀನವನ್ನೇ ಕುಂಠಿತಗೊಳಿಸಿವೆ! ಯಾರು ಪೋನ್ ಮಾಡಿದರೂ ಸ್ವರ ಮೊಳಗುತ್ತಿಲ್ಲ. ಅಲಂಕಾರವಿಲ್ಲ,ಒಪ್ಪ ಓರಣವಿಲ್ಲ.ಮನೆ ಕೆಲಸದವರಿಗಿಂತಲೂ ಸರಳ ಉಡುಪು.ನೋಡಲು ಬಂದವರ ಕಣ್ಣಲ್ಲೂ ಅಚ್ಚರಿ ಮಾತಲ್ಲೂ ಕಡಿತ. ಮಾತುಗಾರನ ಸುತ್ತ ಈಗ ಮೌನದ್ದೇ ಕಾರುಬಾರು. ಕಾಲ ರಾಯನ ಹೊಡೆತದಲ್ಲಿ ಯಾವುದು ಶಾಶ್ವತ? ಯಾವುದು ಗಟ್ಟಿ!?ಬದುಕು ಎಷ್ಟೊಂದು ಅಭದ್ರ? ಜೀವನ ಎಷ್ಟೊಂದು ಪೊಳ್ಳು?

## ಪ್ರೀತಿ ನಿವೇದನೆಗಿದು ಸಕಾಲವಲ್ಲ



ನೀನೇಕೆ ನನ್ನಿಂದ
ದೂರಾದೆಯೋ ಗೊತ್ತಿಲ್ಲ
ಆದರೆ ಗೆಳತಿ, ನೀನು ಜೀವ ಬಿಟ್ಟರೆ
ನನ್ನೆದೆಯೊಳಗೆ "ಧಪನ್"
ಮಾಡಿಕೊಳ್ಳುವೆ ನನ್ನಾಣೆ

ನೀ ಕೊಟ್ಟ ಬೆಚ್ಚಗಿನ ಸುಖ ಬಯಸಿ
ಮತ್ತೆ ಮತ್ತೆ ತೋಳು ಚಾಚುತ್ತೇನೆ
ಆಲಿಂಗನಕ್ಕೆ ನೀನು ಮಾತ್ರ ಕೈ
ಅಳತೆಗೆ ನಿಲುಕುವುದೇ ಇಲ್ಲ

ನಿನ್ನ ಮನವೆಂಬುದು
ನಿಗೂಢತೆಯ ನೂರು
ಸಾವಿರ ತಿರುವುಗಳಿರುವ
ಮಡುವು ನೀನೊಂದು
ಸುಮುದ್ರದೊಳಗಾಟವಾಡುವ
ಮೀನು

ಭಾವನೆಗಳುಬ್ಬರ ಅಬ್ಬರದ ಅಲೆಗಳ
ಹೊಡೆತಕ್ಕೆ ಹೃದಯ ಕಂಪಿಸುತ್ತದೆ
ನಿನ್ನ ನವ್ರಂಗಿ ಆಟಕ್ಕೆ ಬಾಜಿ ಕಟ್ಟಿದ್ದೇನೆ

ನಿನ್ನ ವಂಚನೆಯ ಪ್ರೀತಿಗೆ ನರಳಿ
ಉಸಿರು ನಿಂತ ಈ ದೇಹ ಮಣ್ಣಲ್ಲಿ
ನಾಟಿಯಾಗುತ್ತದೆ
ಬೇಗ ಸಾವು ಬರಲಿ
ಗೋರಿಯೊಳಗಾದರು
ನಮ್ಮ ಮಿಲನ ಆಗಬಹುದೆನೋ......

ಆದರೆ ಪ್ರೀತಿಗಿದು ಸಕಾಲವಲ್ಲ...




● ರಂಗಸ್ವಾಮಿ ಎಸ್
ನಾಗದೇವನಹಳ್ಳಿ

# ಟೋಕಿಯೊದಲ್ಲಿ ಬೆಳ್ಳಿ ಮಿಂಚು

● ಶರಣ್ ಮುಷ್ಟೂರ್

ಜಗತ್ತಿನ ಕ್ರೀಡಾಭಿಮಾನಿಗಳ ಚಿತ್ತ ಈಗ ಟೋಕಿಯೊದತ್ತ ನೆಟ್ಟಿದೆ. ಬರೀ ಫುಟ್ಬಾಲ್, ಕ್ರಿಕೆಟ್, ಟೆನಿಸ್, ಬೇಸ್ ಬಾಲ್, ರಗ್ಬಿ ನೋಡಿ ಎಂಜಾಯ್ ಮಾಡುತ್ತಿದ್ದವರು ಈಗ ಸ್ವಿಮ್ಮರ್ ಗಳ ಕೈಚಳಕ, ಅಥ್ಲಿಟ್ ಗಳ ಮಿಂಚಿನ ಓಟ, ಜಿಮ್ನಾಸ್ಟಿಕ್ಸ್ ಸ್ಪರ್ಧಿಗಳ ಮನಮೋಹಕ ಕಸರತ್ತು, ತೊಡೆ ತಟ್ಟುವ ಕುಸ್ತಿಪಟುಗಳ ಚುರುಕು ತನದ ಜತೆಗೆ ಹತ್ತಾರು ಬಗೆಯ ಆಟದ ಸೋಲು ಗೆಲುವಿಗೆ ಜಪಾನ್ ರಾಜಧಾನಿ ಟೋಕಿಯೊ ವೇದಿಕೆ ಆಗಿ ಜಗತ್ತಿನ ಗಮನ ಸೆಳೆಯುತ್ತಿದೆ. ಇಂತಹ ಸಂಭ್ರಮದ ಕ್ರೀಡಾಹಬ್ಬದ ಮೊದಲ ದಿನವೇ ಭಾರತಕ್ಕೆ ಬೆಳ್ಳಿ ಹಬ್ಬದ ಸಂಭ್ರಮ. ಜು.24ರಂದು ಮಣಿಪುರದ ಬೆಡಗಿ ಮೀರಾಬಾಯಿ ಚಾನು ತೋಳುಗಳಲ್ಲಿ ತಾಕತ್ತು ಪ್ರದರ್ಶಿಸಿ ಬೆಳ್ಳಿ ಪದಕ ಕೊರಳಿಗೆ ಹಾಕಿಕೊಂಡ ಕ್ಷಣವನ್ನು ದೇಶದ ಕೋಟ್ಯಾಂತರ ಜನರು ವೀಕ್ಷಿಸಿ, ಮೀರಾ ಭಾರತ್ ಮಹಾನ್ ಎಂದು ಬಹುಪರಾಕ್ ಹೇಳಿ ಸಂಭ್ರಮಿಸಿದರು. 49 ಕೆಜಿ ವಿಭಾಗದ ವೇಟ್ ಲಿಫ್ಟಿಂಗ್ ನಲ್ಲಿ ಮೀರಾಬಾಯಿ ಚಾನು ಬೆಳ್ಳಿ ಪದಕ ಬೇಟೆಯಾಡುವ ಮೂಲಕ ಟೋಕಿಯೊದಲ್ಲಿ ತಿರಂಗವನ್ನು ಎತ್ತಿ ಹಿಡಿದರು. ಚಾನು ಗೆಲುವಿನ ಸ್ಪರ್ಷದಿಂದ ಇಡೀ ದೇಶ ಪುಳಕಗೊಂಡಿದೆ. 2009ರಲ್ಲಿ ದೇಶೀಯ ಚಾಂಪಿಯನ್ ಆಗುವುದರೊಂದಿಗೆ ಕ್ರೀಡಾಲೋಕದಲ್ಲಿ ಮುನ್ನಲೆಗೆ ಬಂದ ಮಣಿಪುರದ ಹುಡುಗಿ ಮೀರಾಬಾಯಿ ಚಾನು ಸ್ಕಾಟ್ಲೆಂಡ್ ನ ಗ್ಲಾಸ್ಗೋದಲ್ಲಿ 2014ರಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಕೊರಳಿಗೇರಿಸಿಕೊಂಡರೆ 2016 ರಿಯೊ ಒಲಿಂಪಿಕ್ಸ್ ನಲ್ಲಿ ಪದಕ ಬೇಟೆಯಾಡಲು ವಿಫಲಗೊಂಡಿದ್ದರು. ಬಳಿಕ 2017ರಲ್ಲಿ ನಡೆದ ವಿಶ್ವ ಚಾಂಪಿಯನ್ ಶಿಪ್ ನಲ್ಲಿ ಪದಕ ಗೆದ್ದು ಸಾಧನೆ ಮಾಡಿದ್ದರು..2018ರಲ್ಲಿ ಆಸ್ಟ್ರೇಲಿಯಾ ದಲ್ಲಿ ನಡೆದಿದ್ದ ಕಾಮನ್‌ವೆಲ್ತ್ ಗೇಮ್ಸ್



ಹಾಗೂ 2020ರಲ್ಲಿ ಉಜ್ಬೇಕಿಸ್ತಾನದಲ್ಲಿ ನಡೆದ ಏಷ್ಯನ್ ಗೇಮ್ಸ್ ನಲ್ಲಿ 48 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದರು.

### 20 ವರ್ಷಗಳ ಬಳಿಕ ಪದಕ

ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಸಾಧನೆ ಅಷ್ಟಕ್ಕೆ ಅಷ್ಟೇ.. ಆದರೆ, ವೇಟ್ ಲಿಫ್ಟಿಂಗ್ ವಿಭಾಗದಲ್ಲಿ ಭಾರತಕ್ಕೆ 20 ವರ್ಷ ಬಳಿಕ ಒಲಿಂಪಿಕ್ಸ್ ನಲ್ಲಿ ಪದಕ ಬಂದಿದೆ. ಮೀರಾಬಾಯಿಗೆ ಒಲಿಂಪಿಕ್ಸ್ ನಲ್ಲಿ ದೊರೆತ ಗರಿಷ್ಠ ಗೌರವ ಇದಾಗಿದೆ. ಇದಕ್ಕೂ ಮೊದಲು 2000 ಸಿಡ್ನಿ ಒಲಿಂಪಿಕ್ಸ್ ನಲ್ಲಿ ಕರ್ಣಂ ಮಲ್ಲೇಶ್ವರಿ ಕಂಚಿನ ಪದಕ ಗೆದ್ದಿದ್ದು ಇದುವರೆಗಿನ ಸಾಧನೆ ಆಗಿತ್ತು..

### ಕುಸ್ತಿಯಲ್ಲಿ ಬಂತು ಚಿನ್ನ

ಒಂದೆಡೆ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಮೀರಾಬಾಯಿ ಚಾನು ಬೆಳ್ಳಿ ಪದಕ ಮುಡಿಗೇರಿಸಿಕೊಂಡರೆ ಮತ್ತೊಂದೆಡೆ ಹಂಗೆರಿಯಲ್ಲಿ ನಡೆದ ವಿಶ್ವ ಕೆಡೆಟ್ ಕುಸ್ತಿಯಲ್ಲಿ ಟೂರ್ನಿಯಲ್ಲೂ ಭಾರತದ ವನಿತೆ ಪ್ರಿಯಾ ಮಲಿಕ್ ತಿರಂಗ ಹಾರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಚಿನ್ನದ ಪದಕ ಗೆಲ್ಲುವ ಮೂಲಕ ಹೊಸ ಇತಿಹಾಸ ಬರೆದಿದ್ದಾರೆ. ಕೆಡೆಟ್ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ ಭಾರತದ ಮಹಿಳಾ ಕ್ರೀಡಾಪಟುಯೊಬ್ಬರು ಚಾಂಪಿಯನ್ ಆಗಿದ್ದು ಇದೇ ಮೊದಲು..

### ನಿರೀಕ್ಷೆ ಹುಸಿಗೊಳಿಸದ ಮಹಿಳೆಯರು

ಈ ಟೋಕಿಯೋ ಒಲಿಂಪಿಕ್ಸ್ ನಲ್ಲಿ ಭಾರತಕ್ಕೆ ಮೊದಲ ಪದಕ ಕೊಡಿಸಿದ್ದು, ಮೀರಾಬಾಯಿ ಚಾನು ಎಂಬ ಮಣಿಪುರದ ಹುಡುಗಿ. 2016 ರಿಯೋ ಒಲಿಂಪಿಕ್ಸ್ ನಲ್ಲಿ ವಿಫಲವಾಗಿದ್ದ ಚಾನು ಈ ಬಾರಿ ಬೆಳ್ಳಿ ಪದಕ ಬೇಟೆಯಾಡುವ ಮೂಲಕ ಮಹಿಳೆಯರು ಯಾರಿಗೂ ಕಡಿಮೆ ಅಲ್ಲ ಎಂದು ಸಾಬೀತು ಪಡಿಸಿದ್ದಾರೆ. ಮತ್ತೊಂದೆಡೆ ಪ್ರಿಯ ಮಲಿಕ್ ಕೆಡೆಟ್ ವಿಶ್ವ ಕುಸ್ತಿ ಚಾಂಪಿಯನ್ ಶಿಪ್ ನಲ್ಲಿ ಬಂಗಾರ ಗೆಲ್ಲುವ ಮೂಲಕ ಹೊಸ ದಾಖಲೆ ಬರೆದಿದ್ದಾರೆ. ಅದು ಕ್ರೀಡಾಹಬ್ಬದಲ್ಲಿ ಭಾರತೀಯ ಮಹಿಳೆಯರು ಅದ್ಬುತ ಸಾಧನೆ ಮರೆದಿದ್ದಾರೆ..ಇನ್ನು ಬಾಕ್ಸಿಂಗ್ ನಲ್ಲಿ ಮೇರಿ ಕೋಮ್, ಸಿಂಧು ಪ್ರಶಕ್ತಿ ಗೆಲ್ಲುವ ಭರವಸೆ ಮೂಡಿಸಿದ್ದಾರೆ. ಹೀಗಾಗಿ, ಮಹಿಳಾ ಕ್ರೀಡಾಪಟುಗಳು ಟೊಕಿಯೋ ಒಲಿಂಪಿಕ್ಸ್ ನಲ್ಲಿ ಅಧಿಕ ಪದಕ ಗೆಲ್ಲುಗತ್ತಾರೆ ಎಂಬ ಭರವಸೆ ಭಾರತೀಯ ರಲ್ಲಿ ಮನೆ ಮಾಡಿದೆ.

### ಚಿನ್ನವಾಗುವುದೇ ಬೆಳ್ಳಿ..!

ಭಾರತಕ್ಕೆ ರಜತ ಪದಕ ಗೆದ್ದು ಕೊಡುವ ಕ್ರೀಡಾಭಿಮಾನಿಗಳ ಸಂಭ್ರಮಕ್ಕೆ ಕಾರಣವಾಗಿರುವ ಮೀರಾಬಾಯಿ ಚಾನು, ಗೆದ್ದಿರುವ ಬೆಳ್ಳಿ ಈಗ ಚಿನ್ನವಾಗಿ ಪರಿವರ್ತನೆ ಆಗುವ ಸಾಧ್ಯತೆ ಇದೆ. ಮಹಿಳೆಯರ 49 ಕೆಜಿ ವೇಟ್ ಲಿಫ್ಟಿಂಗ್ ವಿಭಾಗದ ಸ್ಪರ್ಧೆಯಲ್ಲಿ ಚಿನ್ನ ಗೆದ್ದ ಚೀನಾದ ಹೌ ಜಿಹುಯಿಗೆ ಡೋಪಿಂಗ್ ಮರು ಪರೀಕ್ಷೆ ಸವಾಲು ಎದುರಾಗಿದೆ. ಒಂದು ವೇಳೆ ಉದ್ದೀಪನ ಪರೀಕ್ಷೆ ಯಲ್ಲಿ ವಿಫಲವಾದರೆ ಚಾನುಗೆ ಚಿನ್ನ ಒಲಿದು ಬರಲಿದೆ.

● 9ನೇ ಪುಟದಿಂದ...

## ಹೊಸ ಸವಾಲುಗಳ ಗುರಿಕಾರನ ಹೆಜ್ಜೆಗಳ ಗುರುತು..!

### ಅಲ್ಪಾವವಧಿಯಲ್ಲೂ ಮೊದಲೇ

2007 ರ ನವೆಂಬರ್ 12 ರಂದು ಮೊದಲ ಬಾರಿಗೆ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರಪ್ಪ ಅವರು ನವೆಂಬರ್ 19(7ದಿನ)ರ ತನಕ ಪಟ್ಟದಲ್ಲಿದ್ದರು. 2008 ರ ಮೇ 30 ರಂದು ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿ 2011 ರ ಜುಲೈ 31 ರವರೆಗೆ 3 ವರ್ಷ 62 ದಿನಗಳ ಕಾಲ (39 ತಿಂಗಳು) ಅವರು ಮುಖ್ಯಮಂತ್ರಿಯಾಗಿದ್ದರು. 3 ನೇ ಬಾರಿಗೆ ಮುಖ್ಯಮಂತ್ರಿಯಾಗಿ ಮೇ 18, 2018ರಂದು ಪ್ರಮಾಣ ವಚನ ಸ್ವೀಕರಿಸಿ 55 ಗಂಟೆಗಳ ಕಾಲ ಸಿಎಂ ಆಗಿ ಅಲ್ಪಾವಧಿ ಸರ್ಕಾರದ ದೊರೆ ಎನಿಸಿಕೊಂಡರು. 4ನೇ ಬಾರಿಗೆ ಸಿಎಂ ಆಗಿ ಜುಲೈ 26ರಂದು ಸಂಜೆ 6 ಗಂಟೆ ನಂತರ ಪ್ರಮಾಣ ವಚನ ಸ್ವೀಕರಿಸಿ, 2 ವರ್ಷಗಳ ನಂತರ ಜುಲೈ 26, 2021ರಂದು ರಾಜೀನಾಮೆ ಸಲ್ಲಿಸಿದ್ದಾರೆ.

### ರಾಜಕೀಯ ಬದುಕಿನಲ್ಲಿ ಕಪ್ಪುಚುಕ್ಕೆ ಏನು?

ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರಪ್ಪ ಅವರ ಅಧಿಕಾರ ಅವಧಿಯಲ್ಲಿ ಗೋಲಿಬಾರ್‌ನಲ್ಲಿ ರೈತನೊಬ್ಬ ಮೃತಪಟ್ಟ ಘಟನೆ ಮರೆಯುವಂತಿಲ್ಲ. ಅಮಾಯಕ ರೈತ ಬಲಿಯಾದ ಹಾವೇರಿಯಲ್ಲೇ ಉದಯವಾದ ಹೊಸ ಪ್ರಾದೇಶಿಕ ಪಕ್ಷದ ಚುಕ್ಕಾಣಿ ಹಿಡಿದ ಯಡಿಯೂರಪ್ಪ ಅವರ ಸುತ್ತ ಇನ್ನೂ ಅನೇಕ ಹಗರಣಗಳ ಬಲೆ ಇದ್ದೇ ಇದೆ. ಡಿ ನೋಟಿಫಿಕೇಷನ್, ಸ್ವಜನಪಕ್ಷಪಾತ, ಭೂ ಹಗರಣಗಳ ಜೊತೆ ಯಡಿಯೂರಪ್ಪ ಅವರ ಸಿಡುಕು ಕಂಡರೆ ಜನ ಮುಖ ಬೇರೆಡೆ ತಿರುಗಿಸುತ್ತಾರೆ ಎಂಬ ದೂರಿದೆ. ಕೆಜೆಪಿ ಅಳಿವು ಉಳಿವಿನೊಂದಿಗೆ ಯಡಿಯೂರಪ್ಪ ಅವರ ರಾಜಕೀಯ ಭವಿಷ್ಯ ನಿರ್ಧಾರ ಎನ್ನಲಾಗಿತ್ತು. ಪ್ರಬಲ ಲಿಂಗಾಯತ ನಾಯಕರಾಗಿರುವ ಯಡಿಯೂರಪ್ಪ ಅವರು ಪ್ರತ್ಯೇಕ



ಲಿಂಗಾಯತ ಧರ್ಮ ಹೋರಾಟ, ಗೊಂದಲಗಳಲ್ಲಿ ಸರಿ ಮಾರ್ಗವನ್ನು ತಮ್ಮ ಅನುಯಾಯಿಗಳಿಗೆ ತೋರಲಿಲ್ಲ ಎಂಬ ಕೊರಗಿದೆ. ಆದರೆ, ಮತ್ತೊಮ್ಮೆ ಬಿಜೆಪಿ ಸೇರ್ಪಡೆಯೊಂದಿಗೆ ಅಂತ್ಯ ಕಂಡಿತು. ಬಿಜೆಪಿ ಹಿರಿಯ ನಾಯಕರು, ವಿಪಕ್ಷಗಳ ವಿರೋಧದ ನಡುವೆ ಬಿಎಸ್ ವೈ ಮತ್ತೊಮ್ಮೆ ಏಳಿಗೆ ಕಂಡರು. ಅಧಿಕಾರ ಹುಡುಕಿಕೊಂಡು ಬಂದರೂ ಪೂರ್ಣಾವಧಿ ಅಧಿಕಾರ ಹೊಂದಲು ಸಾಧ್ಯವಾಗಲೇ ಇಲ್ಲ.

### ರಾಜ್ಯದ ಬಗ್ಗೆಯೇ ಅವರಿಗೆ ಒಲವು

ಕೆಜೆಪಿಯಿಂದ ಬಿಜೆಪಿಗೆ ಮರಳಿದ ಬಳಿಕ ಬಿಎಸ್ ಯಡಿಯೂರಪ್ಪ ಲೋಕಸಭೆ ಚುನಾವಣೆಗೆ ಶಿವಮೊಗ್ಗ ಕ್ಷೇತ್ರದಿಂದ ಕಣಕ್ಕೆ ಇಳಿದು ಜಯಗಳಿಸಿದರು. ರಾಷ್ಟ್ರರಾಜಕಾರಣದಲ್ಲಿ ಮಿಂಚುವ ಅವಕಾಶ ಸಿಕ್ಕರೂ, ರಾಜ್ಯಕ್ಕೆ ಮರಳಿದರು. ಶಿವಮೊಗ್ಗದ ಸಂಸದರಾಗಿ ಕಾರ್ಯ ನಿರ್ವಹಿಸಿದ ನಂತರ ಬಿಜೆಪಿಯ ರಾಜ್ಯಾಧ್ಯಕ್ಷರಾದರು. ಚುನಾವಣೆಗೆ ಕಾರ್ಯಕರ್ತರನ್ನು ಹುರಿದುಂಬಿಸಿದರು. 'ಮಾಸ್ ಲೀಡರ್' ಎಂದೆನಿಸಿಕೊಂಡಿರುವ ಯಡಿಯೂರಪ್ಪ ಅವರು ಪಕ್ಷದ ಇತರೆ ನಾಯಕರ ಜತೆ ಮನಸ್ತಾಪಗಳಿದ್ದರೂ ಪಕ್ಷಕ್ಕಾಗಿ ಅವಡುಗಚ್ಚಿಕೊಂಡು ಕಣಕ್ಕಿಳಿದರು. 2018ರ ವಿಧಾನಸಭೆ ಚುನಾವಣೆ ವೇಳೆ 'ಮತ್ತೊಮ್ಮೆ ಸಿಎಂ ಆಗುವ ಕನಸಿಗಿಂತ ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ನನಗೆ ಮುಖ್ಯ' ಎಂದರು. ಪ್ರತಿಷ್ಠೆಯ ಸಮರದಲ್ಲಿ ಬಿಎಸ್ವೈ, ಅಂದುಕೊಂಡಿದ್ದನ್ನು ಸಾಧಿಸಿದರು. 2018ರ ವಿಧಾನಸಭೆ ಚುನಾವಣೆಗೆ ಶಿಕಾರಿಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿ.ಎಸ್.ಯಡಿಯೂರಪ್ಪ ಅವರು 86983 ಮತಗಳನ್ನು ಪಡೆದು ಜಯಗಳಿಸಿದರು. ಆದರೆ, ಬಿಜೆಪಿ ಶಾಸಕರ ಸಂಖ್ಯಾಬಲ 105 ದಾಟಲಿಲ್ಲ. ಆತುರವಾಗಿ ಸಿಎಂ ಆಗಿ ಕೆಲ ದಿನಗಳ ಅಲ್ಪಾವಧಿ ಸರ್ಕಾರದ ಸಿಎಂ ಆಗಬೇಕಾಯಿತು.

### ಹೊಸ ಯೋಜನೆಗಳ ಗುರಿಕಾರ

ತಮ್ಮ ಅಧಿಕಾರ ಅವಧಿಯಲ್ಲಿ ರೈತರ ಸಾಲ ಮನ್ನಾ, ಸಾರಾಯಿ ನಿಷೇಧ. ಲಾಟರಿ ನಿಷೇಧ, ರೈತರಿಗೆ ಶೇ.4 ಬಡ್ಡಿದರದಲ್ಲಿ ಸಾಲ, ಬಿಪಿಎಲ್ ಕುಟುಂಬಗಳ ಹೆಣ್ಣುಮಕ್ಕಳ ಸಬಲೀಕರಣಕ್ಕೆ ಭಾಗ್ಯಲಕ್ಷ್ಮಿ ಯೋಜನೆ, ಉಚಿತ ಬೈಸಿಕಲ್ ವಿತರಣೆ ಯೋಜನೆ, ನಿರುದ್ಯೋಗ ನಿವಾರಣೆಗೆ ಸುವರ್ಣ ಕಾಯಕ ಉದ್ಯೋಗ ತರಬೇತಿ ಯೋಜನೆ, ಹಿರಿಯ ನಾಗರಿಕರ ಸಾಮಾಜಿಕ ಭದ್ರತೆಗೆ ಸಂಧ್ಯಾ ಸುರಕ್ಷಾ ಯೋಜನೆ, ಮೊದಲಾದ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಅಳವಡಿಸಿ ಅನುಷ್ಠಾನಗೊಳಿಸಿದ ಹೆಗ್ಗಳಿಕೆ. ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡನೆ ಮಾಡಿ, ರೈತ ಪರ ಕಾಳಜಿ ಮೆರೆದರು. ಕೋವಿಡ್ 19 ಸಾಂಕ್ರಾಮಿಕಕ್ಕೆ ಕರ್ನಾಟಕದಲ್ಲೇ ಮೊದಲ ಬಲಿ ಆಗಿದ್ದು ಮರೆಯುವಂತಿಲ್ಲ. ಹೆಚ್ಚು ಲಸಿಕೆ ನೀಡುವ ಮೂಲಕ ಸಾಂಕ್ರಾಮಿಕ ನಿಯಂತ್ರಣ ಸಾಧಿಸಿದರೂ ಹಗರಣ, ಆರೋಗ್ಯ ಸಚಿವ ಸ್ಥಾನಕ್ಕಾಗಿ ಪೈಪೋಟಿ ಎಲ್ಲವನ್ನು ಎದುರಿಸಬೇಕಾಯಿತು.

### ಯಡಿಯೂರಪ್ಪಗೆ ಸಿಕ್ಕಿದ್ದ ವಿನಾಯಿತಿ

ಬಿ.ಎಸ್.ಯಡಿಯೂರಪ್ಪ ಅವರ ಪಾಲಿಗೆ ವಯಸ್ಸು ಕೇವಲ ನಂಬರ್. 2018ರ ವಿಧಾನಸಭೆ ಚುನಾವಣೆ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಣೆ ಮಾಡಿದಾಗಲೇ 75 ವಸಂತಗಳನ್ನು ಕಂಡಿದ್ದವರು. 75 ವರ್ಷ ಮೇಲ್ಪಟ್ಟವರಿಗೆ ಉನ್ನತ ಹುದ್ದೆ ಸಿಗುವುದಿಲ್ಲ ಎಂಬ ಬಿಜೆಪಿಯ ಅಲಿಖಿತ ನಿಯಮದಿಂದ ಯಡಿಯೂರಪ್ಪ ಅವರಿಗೆ ವಿನಾಯಿತಿ ಸಿಕ್ಕಿತ್ತು. ಇದಲ್ಲದೆ, ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಶಾ ರಂತೆ ಕರ್ನಾಟಕ ರಾಜ್ಯಾಧ್ಯಕ್ಷ ಯಡಿಯೂರಪ್ಪ ಕೂಡಾ ಎರಡು ಹುದ್ದೆಗಳನ್ನು ನಿಭಾಯಿಸಿದ್ದರು. ಆದರೆ, ಈಗ ಕಾಲ, ನಿಯಮ ಬದಲಾಗಿದೆ. ವಯಸ್ಸು, ಎರಡು ಹುದ್ದೆ ನಿಯಮ, ಹೆಚ್ಚಿದ ಭಿನ್ನಮತ, ಭ್ರಷ್ಟಾಚಾರ, ಹೊಸ ಮುಖಗಳಿಗೆ ಆದ್ಯತೆ ಎಲ್ಲವನ್ನು ಪರಿಗಣಿಸಿ ಯಡಿಯೂರಪ್ಪರನ್ನು ಬದಲಾಯಿಸಲಾಗಿದೆ. ಯಡಿಯೂರಪ್ಪರಂಥ ಮಾಸ್ ಲೀಡರ್ ಮತ್ತೊಬ್ಬರು ಸದ್ಯಕ್ಕಂತೂ ಯಾರೂ ಕಂಡು ಬರುತ್ತಿಲ್ಲವಾದರೂ 2023ರ ವಿಧಾನಸಭೆ ಚುನಾವಣೆಗೆ ಈಗಿಂದಲೇ ತಯಾರಿ ನಡೆಸಿರುವ ಬಿಜೆಪಿ, ಲಿಂಗಾಯತ ಲಿಂಗಾಯಿತ ನಾಯಕನನ್ನೇ ಕುರ್ಚಿಯ ಮೇಲೆ ಕೂರಿಸಿ ಆ ಮೂಲಕ ಬಿಎಸ್‌ವೈ ಅವರನ್ನು ಚುನಾವಣೆ ಮುನ್ನಲೆಗೆ ತರುವ ನಿರ್ಧಾರವನ್ನು ಮಾಡಿದೆ.

# ಸತ್ಯ ಹರಿಶ್ಚಂದ್ರ, ಭಕ್ತಕುಂಬಾರ ಬಬ್ರುವಾಹನ ನಿರ್ದೇಶಿಸಿದ ಹುಣಸೂರು ಕೃಷ್ಣಮೂರ್ತಿ

ತೆರೆಮರೆ

## ಕನ್ನಡ ಚಿತ್ರ ಇತಿಹಾಸ

ಭಾಗ-36







ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ಬಾಲನಟನಾಗಿ ರಂಗಭೂಮಿ ಪ್ರವೇಶಿಸಿ, ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದರಾಗಿ, ನಾಟಕ ರಚನೆಕರರಾಗಿ, ಕನ್ನಡ ಚಿತ್ರಗಳಿಗೆ ಗೀತೆ-ಸಂಭಾಷಣೆ ರಚಿಸುವ ಮೂಲಕ ಸಾಹಿತಿಯಾಗಿ, ಚಲನಚಿತ್ರ ನಿರ್ದೇಶಕರಾಗಿ ಪ್ರಖ್ಯಾತೊಗೋಂಡ ಹುಣಸೂರು ಕೃಷ್ಣಮೂರ್ತಿ ಜನಿಸಿದ್ದು 1904ರ ಫೆಬ್ರವರಿ 6ರಂದು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ. ತಂದೆ ಎಂ.ರಾಜಾರಾವ್, ತಾಯಿ ಪದ್ಮಾವತಮ್ಮ. ಸೋದರಮಾವ ನಡೆಸುತ್ತಿದ್ದ ನಾಟಕ ಕಂಪನಿಯಲ್ಲಿ ತಬಲ ನುಡಿಸುವ ಮೂಲಕ ನಾಟಕದ ಗೀಳು ಹತ್ತಿಸಿಕೊಂಡು, ಆಕಸ್ಮಿಕವಾಗಿ ಹರಿಶ್ಚಂದ್ರ ನಾಟಕದಲ್ಲಿ ಲೋಹಿತಾಶ್ವನ ಪಾತ್ರ ಮಾಡುವುದರೊಂದಿಗೆ ಬಣ್ಣದ ಬದುಕಿಗೆ ನಾಂದಿ ಹಾಡಿದರು. ಹುಣಸೂರಿನಲ್ಲಿ ವಿದ್ಯಾಭ್ಯಾಸ ಆಂಭಿಸಿ ಮೈಸೂರಿನಲ್ಲಿ ಮುಂದುವರೆಸಿದರು. ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಒಥೆಲೊ' ಪ್ರದರ್ಶನಗೊಂಡಾಗ ಮೂರ್ತಿ ಇಯಗೋ ಪಾತ್ರ ಮಾಡಿದ್ದರು. ಸಮಾರಂಭಕ್ಕೆ ಆಗಮಿಸಿದ್ದ ಮುಂಬಯಿಯ ಚಲನಚಿತ್ರ ತಂತ್ರಜ್ಞ ಕಪಾಡಿಯ ಬಾಲಕನ ಅಭಿನಯ ಕಂಡು ಬೆರಗಾದರು. ತಮ್ಮೊಂದಿಗೆ ಮೂರ್ತಿಯನ್ನು ಕರೆದೊಯ್ದರು. ಭಾರತದಾದ್ಯಂತ ಆಗ ಹೆಸರು ಮಾಡಿದ್ದ ಖ್ಯಾತ ತಾರೆ ದೇವಿಕಾರಾಣಿ ಅಭಿನಯಿಸಿದ 'ಸಿಂಹಳ ಸುಂದರಿ' ಚಲನಚಿತ್ರದಲ್ಲಿ ಬಾಲನಟನಾಗಿ ಅಭಿನಯಿಸುವ ಅವಕಾಶ ದೊರೆಯಿತು. ಬಾಲಗಂಧರ್ವರ ನಾಟಕ ಸಭಾದಲ್ಲಿದ್ದುಕೊಂಡು ತಬಲ ಹಾಗೂ ಹಾರ್ಮೋನಿಯಂ ವಾದ್ಯಗಳಲ್ಲಿ ಪರಿಣಿತಿ ಪಡೆದುಕೊಂಡರು. ಹದಿನಾರನೆಯ ವಯಸ್ಸಿಗೆ ಮೂರ್ತಿ ಚಿತ್ರರಂಗದ ಒಳ ಹೊರಗುಗಳನ್ನು ಅರಿತುಕೊಂಡರು. ಆ ವೇಳೆಗೆ ಮುಂಬಯಿಗೆ ಬಂದ ಗರೂಡ ಸದಾಶಿವರಾಯರ ನಾಟಕ ಮಂಡಲಿಯೊಂದಿಗೆ ತಾಯ್ನಾಡಿಗೆ ಹಿಂದಿರುಗಿದರು.




ಪೀರ್ ಸಾಹೇಬರ ಚಂದ್ರಕಲಾ ನಾಟಕ ಮಂಡಲಿ ಸೇರಿ ಅಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದರು. ಪೀರ್ ಸಾಹೇಬರ ನಿಧನಾನಂತರ ಸ್ವಲ್ಪ ಕಾಲ ತಾವೇ ನಾಟಕ ಕಂಪನಿಯ ಸಾರಥ್ಯ ವಹಿಸಿಕೊಂಡರು. ನಂತರ ಗುಬ್ಬಿ ವೀರಣ್ಣನವರ ಕಂಪನಿ ಸೇರಿದ ಹುಣಸೂರು ಕೃಷ್ಣಮೂರ್ತಿ, ಅಭಿನಯದೊಂದಿಗೆ ನಾಟಕ ರಚನೆಯತ್ತಲೂ ಗಮನಹರಿಸಿದರು. ಅವರು ರಚಿಸಿದ 'ರಾಜ ಗೋಪಿಚಂದ' ನೂರು ಪ್ರದರ್ಶನ ಕಂಡು ಜನಪ್ರಿಯವಾಯಿತು. ಅಂದಿನ ಮಹಾರಾಜ ಜಯಚಾಮರಾಜ ಒಡೆಯರ್ ಹುಣಸೂರು ಕೃಷ್ಣಮೂರ್ತಿಯವರಲ್ಲಿದ್ದ ಸಾಹಿತ್ಯ ಪ್ರತಿಭೆಯನ್ನು ಗುರುತಿಸಿ ಶ್ಲಾಘಿಸಿದರು. ಭಾರತ ನಾಟಕ ಮಂಡಲಿ ಸೇರಿ ಆ ನಾಟಕ ಸಂಸ್ಥೆಗಾಗಿ 'ಧರ್ಮ ರತ್ನಾಕರ', 'ಸ್ವರ್ಗ ಸಾಮ್ರಾಜ್ಯ' ಮುಂತಾದ ನಾಟಕಗಳನ್ನು ರಚಿಸಿದರು. ಆಕಾಶವಾಣಿಗಾಗಿ ಐವತ್ತಕ್ಕೂ ಹೆಚ್ಚು ನಾಟಕಗಳನ್ನು ಬರೆದುಕೊಟ್ಟರು. ರಂಗಭೂಮಿಯಲ್ಲಿ ಹೊಸ ಸಂಚಲವನ್ನುಂಟು ಮಾಡಿದ ಟಿ.ಪಿ.ಕೈಲಾಸಂ ಒಡನಾಟ ದೊರೆತು ಹುಣಸೂರು ಹೊಸ ಹೊಸ ಆಲೋಚನೆಗಳಿಂದ ಮೈದುಂಬಿಕೊಂಡರು.

1945ರಲ್ಲಿ ಗುಬ್ಬಿ ವೀರಣ್ಣನವರು ತೆರೆಗೆ ತಂದ 'ಹೇಮರೆಡ್ಡಿ ಮಲ್ಲಮ್ಮ' ಚಿತ್ರಕ್ಕೆ ಸಾಹಿತ್ಯ ರಚಿಸುವ ಮೂಲಕ ಚಿತ್ರರಂಗ ಪ್ರವೇಶಿಸಿದರು. 1947ರಲ್ಲಿ ಶಂಕರ್‌ಸಿಂಗ್ ನಿರ್ಮಿಸಿದ 'ಕೃಷ್ಣಲೀಲೆ' ಚಿತ್ರಕ್ಕೆ ಸಂಭಾಷಣೆ, ಗೀತೆಗಳನ್ನು ರಚಿಸಿ ಪೂರ್ಣ ಪ್ರಮಾಣದ ಸಾಹಿತಿಯಾಗಿ ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡರು. ಡಿ.ಶಂಕರ್‌ಸಿಂಗ್ ಅವರು ಮಹಾತ್ಮ ಪ್ರೊಡಕ್ಷನ್ ಲಾಂಛನದಲ್ಲಿ ತೆರೆಗೆ ತಂದ ಹಲವಾರು ಚಿತ್ರಗಳಿಗೆ ಹುಣಸೂರು ಕೃಷ್ಣಮೂರ್ತಿ ಕೆ.ಎಂ.ಹುಣಸೂರ್ ಹೆಸರಿನಲ್ಲಿ ಸಾಹಿತ್ಯ, ಗೀತೆಗಳನ್ನು ರಚಿಸಿಕೊಟ್ಟರು. 1947ರಲ್ಲಿ ಹುಣಸೂರರು 'ಮಹಾನಂದ' ಚಿತ್ರವನ್ನು ನಿರ್ಮಿಸಿದರು. ಬಿ.ಜಾನಕಿರಾಂ ನಿರ್ದೇಶನದ ಈ ಚಿತ್ರದಲ್ಲಿ ಕೆಂಪರಾಜ ಅರಸ್ ಪಾತ್ರ ಮಾಡಿದರು. ರಾಜಕುಮಾರ್ ಅಭಿನಯಿಸಿದ 'ಶ್ರೀ ಕೃಷ್ಣಗಾರುಡಿ' (1958) ಚಿತ್ರವನ್ನು ನಿರ್ದೇಶಿಸುವ ಮೂಲಕ ನಿರ್ದೇಶನ ಕ್ಷೇತ್ರಕ್ಕೆ ಪದಾರ್ಪಿಸಿ ಹಲವಾರು ಉತ್ಕೃಷ್ಟ ಚಿತ್ರಗಳನ್ನು ನಿರ್ದೇಶಿಸಿದರು. ಪೌರಾಣಿಕ ಚಿತ್ರಗಳನ್ನು ನಿರ್ದೇಶಿಸುವಲ್ಲಿ ಸಿದ್ಧಹಸ್ತರಾದ ಹುಣಸೂರು ಉತ್ತಮ ಜಾನಪದ ಹಾಗೂ ಸಾಮಾಜಿಕ ಚಿತ್ರಗಳನ್ನೂ ದಿಗ್ದರ್ಶಿಸಿದ್ದಾರೆ. ನೂರಾರು ಗೀತೆಗಳನ್ನು ರಚಿಸಿರುವ ಹುಣಸೂರು ಭಕ್ತಿ ಪ್ರಧಾನ ಗೀತೆಗಳನ್ನೇ ಅಲ್ಲದೆ ಶೃಂಗಾರಭರಿತ ಗೀತೆಗಳನ್ನೂ ಉತ್ಕೃಷ್ಟವಾಗಿ ರಚಿಸಿರುವುದು ಒಂದು ವಿಶೇಷ. ಹುಣಸೂರು ಕೃಷ್ಣಮೂರ್ತಿಯವರು ದ್ವಾರಕೀಶ್, ಬಿ.ಎಂ.ವೆಂಕಟೇಶ್, ರಾಜೇಶ್, ಎಂ.ಪಿ.ಶಂಕರ್, ರಮಾದೇವಿ, ಎಂ.ಎನ್.ಲಕ್ಷ್ಮಿದೇವಿ, ಭಾರ್ಗವ ಮುಂತಾದವರನ್ನು ಕನ್ನಡ ಚಿತ್ರರಂಗಕ್ಕೆ ಕೊಡುಗೆ ನೀಡಿದ್ದಾರೆ. ಇವರ ತಂಗಿಯ ಮಗ ದ್ವಾರಕೀಶ್, ನಿರ್ದೇಶಕ ಭಾರ್ಗವ ಇವರ ಅಣ್ಣನ ಮಗ. ಹುಣಸೂರು ನಿರ್ದೇಶಿಸಿದ 'ಸತ್ಯ ಹರಿಶ್ಚಂದ್ರ', 'ಭಕ್ತ ಕುಂಬಾರ' ಚಿತ್ರಗಳು ಅನೇಕ ಪ್ರಶಸ್ತಿಗಳಿಗೆ ಪಾತ್ರವಾಗಿವೆ. ರಾಜ್ಯ ಸರ್ಕಾರ ಪುಟ್ಟಣ ಕಣಗಾಲ್ ಹೆಸರಿನಲ್ಲಿ ಒಂದು ಲಕ್ಷ ರೂ. ಮೌಲ್ಯದ ಪ್ರತಿಷ್ಠಿತ ಪ್ರಶಸ್ತಿ ಸ್ಥಾಪಿಸಿದಾಗ ಅದು ಮೊದಲು ಕೊರಳು ತುಂಬಿದ್ದು ಇವರನ್ನೇ. ಕನ್ನಡ ಚಿತ್ರರಂಗಕ್ಕೆ ಅಪೂರ್ವ ಕೊಡುಗೆ ನೀಡಿದ ಹುಣಸೂರು ಕೃಷ್ಣಮೂರ್ತಿ ಎಪ್ಪತ್ತೈದನೆಯ ವಯಸ್ಸಿನಲ್ಲಿ 1989ರ ಫೆಬ್ರವರಿ 13ರಂದು ನಿಧನರಾದರು.



## ನಿಮ್ಮ ಮಾತು

### ಒಂದೊಳ್ಳೆ ಅಭಿರುಚಿಯ ಪತ್ರಿಕೆ

ದಿನ ಪತ್ರಿಕೆಗಳು ಸಮೂಹ ಮಾಧ್ಯಮಗಳಲ್ಲಿ ಒಂದು. ಟಿ.ವಿ. ರೇಡಿಯೋ ಮತ್ತು ದಿನಪತ್ರಿಕೆಗಳು ಹಿಂದಿನಿಂದಲೂ ಮನುಷ್ಯನ ಸಾಮಾಜಿಕ ಬದುಕಿನಲ್ಲಿ ಹಾಸುಹೊಕ್ಕಾಗಿವೆ. ಟಿ.ವಿ. ರೇಡಿಯೋ ಮಾಧ್ಯಮವು ದೃಶ್ಯ ಮತ್ತು ಶ್ರವ್ಯ ಮಾಧ್ಯಮವಾಗಿದೆ. ದಿನ ಪತ್ರಿಕೆಗಳು ಅದಕ್ಕೂ ಮುಂದುವರೆದ ಭಾಷೆಯನ್ನೊಳಗೊಂಡಂತೆ ವಿದ್ಯಾವಂತರಿಗೆ ಅಕ್ಷರ ಕಲಿತವರಿಗೆ ಎಟುಕುವ ಒಂದು ಸುದ್ದಿ ಮಾಧ್ಯಮವಾಗಿವೆ. ಪತ್ರಿಕೆಗಳು ಇಡೀ ಜಗತ್ತಿನಲ್ಲಿ ಆಗುಹೋಗುವ ಸುದ್ದಿಗಳನ್ನು ತನ್ನ ತೆಕ್ಕೆಯಲ್ಲಿ ಕೆಲವೇ ಗಂಟೆಗಳಲ್ಲಿ ಜನಸಾಮಾನ್ಯರಿಗೆ ಸುದ್ದಿ ತಲುಪಿಸಲು ಸಹಾಯಕವಾಗಿವೆ. ಒಂದು ವಾಟ್ಸಾಪ್ ಗ್ರೂಪಲ್ಲಿ ಒಂದು 'ಕೆಂಧೂಳಿ' ಎಂಬ ಶೀರ್ಷಿಕೆಯ ಪಿಡಿಎಫ್ ಬಂದಿತ್ತು. ನಾನು ಅದನ್ನು ಕುತೂಹಲದಿಂದ ಕ್ಲಿಕ್ ಮಾಡಿ ಓದುತ್ತಾ ಓದೆನು. ವೈವಿಧ್ಯಮಯವಾದ ಸುದ್ಧಿಗಳು ಒಳಗೊಂಡಂತೆ ಇತ್ತು. ರಾಜಕೀಯ ಪ್ರಚಲಿತ, ಚಿತ್ರರಂಗದ ವಿಷಯಗಳು, ಸಾಹಿತ್ಯ ಲೇಖನಗಳು, ಕವಿತೆ, ಜನಾಭಿಪ್ರಾಯ, ನಾಡಿನ ಮೂಲೆಮೂಲೆಯಲ್ಲಿ ನಡೆಯುವ ಸುದ್ದಿ ಸಮಾಚಾರ, ಬೆಂಗಳೂರಿನ ಸುತ್ತಮುತ್ತಲ ಸುದ್ಧಿಗಳು, ಅಂಕಣ ಬರಹ, ಪುಸ್ತಕ ವಿಮರ್ಶೆ, ಕ್ರೀಡಾ ಸುದ್ದಿಗಳು ಒಂದು ವಾರದ ಸುದ್ದಿಗಳನ್ನು ಹೊತ್ತು ತರುವ ಈ ವಾರಪತ್ರಿಕೆಯು ಬೇರೆ ಕನ್ನಡ ನಾಡಿನ ಹೆಸರಾಂತ ಪತ್ರಿಕೆಗಳಂತೆ ತನ್ನ ಆಂತರಿಕ ಗಟ್ಟಿತನವನ್ನು ಹೊಂದಿದೆ ಎಂದರೆ ತಪ್ಪಾಗಲಾರದು. ಲಾಕ್ಡೌನ ಸಮಯದಲ್ಲಿ ಈ ಪತ್ರಿಕೆಯ ವೆಬ್ಸೈಟ್ ಸಹ ಪ್ರಾರಂಭವಾಗಿ ಆನ್ಲೈನ್ ನಲ್ಲಿಯೂ ಸಹ ಪತ್ರಿಕೆಯನ್ನು ಓದಲು ಅನುವು ಮಾಡಿಕೊಟ್ಟಿದ್ದಾರೆ. ದಯವಿಟ್ಟಿ ಎಲ್ಲರೂ ಈ ಪತ್ರಿಕೆಯನ್ನು ಬೆಳೆಸಲು ಚಂದಾದಾರರಾಗಿ ಮತ್ತು ಈಗ 'ಕೆಂಧೂಳಿ' ಬ್ಲಾಗ್ ನಲ್ಲಿ ಆನೇಕ ಸುದ್ದಿಗಳನ್ನು ಓದಬಹುದಾಗಿದೆ ಹೆಚ್ಚು ಹೆಚ್ಚು ಜನ ಬ್ಲಾಗನಲ್ಲಿ ಓದಿರಿ. ಮತ್ತು ಈ ಪತ್ರಿಕೆಯು ಅನೇಕ ಯುವ ಬರಹಗಾರರಿಗೆ ವೇದಿಕೆಯನ್ನು ಕಲ್ಪಸಿಕೊಡುವಲ್ಲಿ ಒಂದು ಉತ್ತಮ ಸಾಮಾಜಿಕ ಕೆಲಸವನ್ನು ಪತ್ರಿಕೆ ಮಾಡುತ್ತಿದೆ. ಇಷ್ಟೆಲ್ಲಾ ಕಾರ್ಯಚಟುವಟಿಕೆಗಳನ್ನು ಹೊಂದಿರುವ ಈ ಪತ್ರಿಕೆಯ ಪ್ರಧಾನ ಸಂಪಾದಕರು ಶ್ರೀ. ತುರುವನೂರು ಮಂಜುನಾಥ ಅವರು. ಇಂತಹ ಜನಮೆಚ್ಚಿನ ಕೆಂಧೂಳಿ ಪತ್ರಿಕೆಯಲ್ಲಿ ನನ್ನ ವಾರದ ಅಂಕಣವನ್ನು ಪ್ರಕಟಿಸುತ್ತಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ. ಇಂತಹ ಅವಕಾಶ ಕಲ್ಪಿಸಿದ ಕೆಂಧೂಳಿಗೆ ಮತ್ತು ಅದರ ರೂವಾರಿ ಶ್ರೀ ತುರುವನೂರು ಮಂಜುನಾಥ್ ಸರ್ ಅವರಿಗೆ ಧನ್ಯವಾದಗಳೊಂದಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

✹ ವಿಶಾಲಾ ಆರಾಧ್ಯ ಲೇಖಕರು, ಬೆಂಗಳೂರು.




### ಪತ್ರಿಕೆ ಮೌಲ್ಯಯುತವಾಗಿದೆ

'ಕೆಂಧೂಳಿ ' ಎನ್ನುವ ವಿಶೇಷ ಅರ್ಥವುಳ್ಳ ಪತ್ರಿಕೆಯ ಹೆಸರೆ ಒಂದು ವಿಶಿಷ್ಟವಾಗಿದೆ ,ಹಾಗೆಯೇ ಪತ್ರಿಕೆಯೂ ಕೂಡ ಒಂದು ವಿನೂತವಾಗಿ ಹೊರಬರುತ್ತಿದೆ. ಇತ್ತೀಚಿನ ವಾರಪತ್ರಿಕೆಗಳನ್ನು ನಾನು ಗಮನಿಸುತ್ತಿದ್ದೇನೆ ಅದರಲ್ಲಿ ಯಾವುದೇ ಸುದ್ದಿಗಳು ಇರುವುದಿಲ್ಲ ಇದ್ದರೆ ಯೋರೋ ಒಬ್ಬರ ಬಗ್ಗೆ ಅವರ ವ್ಯಕ್ತಿಚಿತ್ರ ಮತ್ತು ಇನ್ನೊಬ್ಬರ ಬಗ್ಗೆ ಅವಹೇಳನಕಾರಿಯಾಗಿ ಬರೆಯುವುದು ಇಷ್ಟನ್ನು ಹೊರೆತು ಪಡೆಸಿದರೆ ಓದಬೇಕಾದಂತ ತಿಳಿಯಬೇಕಾದಂತ ಸುದ್ದಿಗಳಿರುವುದಿಲ್ಲ ನನ್ನ ಮಟ್ಟಿಗೆ ಅದು ಪತ್ರಿಕೋದ್ಯಮವಲ್ಲ ಒಬ್ಬ ಪತ್ರಕರ್ತ ಮಾಡುವ ಕೆಲಸವಲ್ಲ, ಹಣದಾಸೆಗೆ ಮತ್ತು ಮತ್ತೊಬ್ಬರನ್ನು ಬೆದರಿಸಿ ತಿಂದು ತೇಗುವ ಪತ್ರಿಕೆಯಷ್ಟೆ .ಆದರೆ ಆ ಪತ್ರಿಕೆ ಸಾಲಿನಲ್ಲಿ ಎಲ್ಲಿಯೂ ಹೋಲಿಸಲಾಗದ ಕೆಂಧೂಳಿ ನಿಜಕ್ಕೂ ಈ ನಾಡಿನ ಅತ್ಯಂತ ಒಂದು ಧ್ವನಿಯಾಗಿ ಮೂಡಿಬರುತ್ತಿದೆ ಪ್ರತಿವಾರವೂ ಒನ್ನೊಂದು ವಿಶೇಷ ಸರ್ಕಾರದ ಧೋರಣೆಗಳ ಬಗ್ಗೆ ವಿಮಿರ್ಶಿಸಿ ಬರೆಯುವ ನಿಮ್ಮ ಪತ್ರಿಕೆಗೆ ನಿಜಕ್ಕೂ ಭವಿಷ್ಯವಿದೆ 'ಲಂಕೇಶ್ ಪತ್ರಿಕೆ' ಮತ್ತು' ಹಾಯ್ ಬೆಂಗಳೂರು' ಇಲ್ಲದ ಈ ಸಮಯದಲ್ಲಿ ನಿಮ್ಮ ಪತ್ರಿಕೆ ಎಲ್ಲರ ಮನಸ್ಸಿನಲ್ಲೂ ಉಳಿಯಲಿದೆ. ಮತ್ತು ಒಂದು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಬರುತ್ತಿದೆ ಜೊತೆಗೆ ನಾಡಿನ ಶ್ರೇಷ್ಠ ಪತ್ರಕರ್ತರಾದ ಡಿ.ಉಮಾಪತಿ, ಬಾಸ್ಕರ್‌ರಾವ್, ಆ.ನಾ.ಪ್ರಹ್ಲಾದ್‌ರಾವ್ ಮತ್ತು ಇತಿಹಾಸ ತಜ್ಞರಾದ ಡಾ,ಸೋಮಶೇಖರ್ ಸಾಹಿತಿ ಕವಿ ಡಾ.ಶಿವಕುಮಾರ್ ಕಂಪ್ಲಿ ಅಂತ ತಂಡವಿರುವುದು ಪತ್ರಿಕೆಯ ಮತ್ತಷ್ಟು ಮೌಲ್ಯವನ್ನು ಹೆಚ್ಚಿಸಿದೆ.

✹ ಮಧುಕುಮಾರ್,ಸಿ.ಟಿ. ಬಂಗಾರಪೇಟೆ

KENDHOOLI Kannada Weekly
Volume-01 | Issue-37 PAGE-16 | Rs.16/- JULY 29 TO AUGUST 04, 2021 MAG(2)Npp/49/2020-21
kendhooli.com/e-paper/

# ತೆರೆಗೆ ನಿನ್ನ ಸನಿಹಕೆ

ಸೂರಜ್ ಗೌಡ ಹಾಗೂ ಧನ್ಯಾ ರಾಮ್ ಕುಮಾರ್ ಅಭಿನಯದ 'ನಿನ್ನ ಸನಿಹಕೆ' ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಿದ್ದು ಆಗಸ್ಟ್ 20ರಂದು ಅಂದರೆ ವರಮಹಾ ಲಕ್ಷ್ಮಿ ಹಬ್ಬದ ದಿನದಂದು ಚಿತ್ರ ಬಿಡುಗಡೆ ಮಾಡಲು ಚಿತ್ರತಂಡ ನಿರ್ಧರಿಸಿದೆ.

'ನಿನ್ನ ಸನಿಹಕೆ' ಚಿತ್ರ ಬಿಡುಗಡೆಯ ಹಂತಕ್ಕೆ ಬಂದಿದ್ದು, ಚಿತ್ರ ಏಪ್ರಿಲ್ ತಿಂಗಳಲ್ಲೇ ತೆರೆ ಕಾಣಬೇಕಿತ್ತು. ಆದರೆ ಅಷ್ಟರಲ್ಲಿ ಎರಡನೇ ಲಾಕ್ ಡೌನ್ ಘೋಷಿಸಿದ್ದರಿಂದ ಬಿಡುಗಡೆಯನ್ನು ತಾತ್ಕಾಲಿಕವಾಗಿ ಚಿತ್ರತಂಡ ಮುಂದೂಡಿತ್ತು. ಇದೀಗ ಆಗಸ್ಟ್ 20ರಂದು ಚಿತ್ರತೆರೆಗೆ ಸಿದ್ಧವಾಗಿದ್ದು, ಇದೇ ದಿನಾಂಕದಂದು ದುನಿಯಾ ವಿಜಯ್ ರ ಸಲಗ ಚಿತ್ರ ಮತ್ತು ಲಂಕೆ ಚಿತ್ರ ಕೂಡ ಬಿಡುಗಡೆಯಾಗಲಿದೆ.

ಲಾಕ್ ಡೌನ್ ಬಳಿಕ ಚಿತ್ರಮಂದಿರಗಳಿಗೆ ಪ್ರೇಕ್ಷಕರಿಗೆ ಅವಕಾಶ ನೀಡಿದ್ದು, ಇದೇ ಸಂದರ್ಭದಲ್ಲೇ 'ನಿನ್ನ ಸನಿಹಕೆ' ಚಿತ್ರ ಥಿಯೇಟರ್‌ಗೆ ಬರಲು ಸಜ್ಜಾಗಿದೆ. ರಘು ದೀಕ್ಷಿತ್ ಈ ಚಿತ್ರಕ್ಕೆ ಸಂಗೀತ ಸಂಯೋಜಿಸಿದ್ದು, ವಾಸುಕಿ ವೈಭವ್ ಬರೆದ ಸಾಹಿತ್ಯವಿದೆ. ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಸಾಕಷ್ಟು ಖ್ಯಾತಿಗಳಿಸಿವೆ. ವಿಶೇಷವೆಂದರೆ ಲಾಕ್ ಡೌನ್ ಸಮಯದಲ್ಲಿ ಕವರ್ ಸಾಂಗ್ಸ್ ಮೂಲಕ ಈ ಚಿತ್ರದ 'ನೀ ಪರಿಚಯ' ಎಂಬ ಹಾಡು ಸುದ್ದಿಯಾಗಿತ್ತು.





# ಸಾಮಾಜಿಕ ಕಥಾ ಹಂದರದ ಲಗಾಮ್

ಹಲವು ಯಶಸ್ವಿ ಚಿತ್ರ ನೀಡಿರುವ ನಿರ್ದೇಶಕ ಮಾದೇಶ್,ಇದೇ ಮೊದಲ ಬಾರಿಗೆ ನಟ ಉಪೇಂದ್ರ ಅವರಿಗೆ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಅಂದ ಹಾಗೆ 'ಲಗಾಮ್' ಎನ್ನುವ ಸಾಮಾಜಿಕ ಕಳಕಳಿಯ ಕಥಾ ಹಂದರವಿರುವ ಈ ಚಿತ್ರ . ಚಿತ್ರದಲ್ಲಿ ನಾಯಕ ಯಾರಿಗೆ,ಯಾವ ಕಾರಣಕ್ಕೆ ಲಗಾಮ್ ಹಾಕುತ್ತಾನೆ ಎನ್ನುವುದು ಒಂದು ಎಳೆಯ ಕಥಾಹಂದರವಿದೆ. ಚಿತ್ರದಲ್ಲಿ ಉಪೇಂದ್ರ ಅವರ ಜೋಡಿಯಾಗಿ ನಟಿ ಹರಿಪ್ರಿಯಾ ಕಾಣಿಸಿಕೊಂಡಿದ್ದಾರೆ.

ಮೊದಲ ಬಾರಿಗೆ ಈ ಜೋಡಿ ಜೊತೆಯಾಗಿ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಇಬ್ಬರ ಅಭಿಮಾನಿಗಳು ಚಿತ್ರ ವೀಕ್ಷಣೆಗೆ ಕುತೂಹಲ ಹೆಚ್ಚುವಂತೆ ಮಾಡಿದೆ.

ಸಾಮಾಜಿಕ ಸಮಸ್ಯೆಗಳಿಗೆ ನಾಯಕ ಹೇಗೆ ಲಗಾಮ್ ಹಾಕುತ್ತಾನೆ ಎನ್ನುವುದು ಚಿತ್ರದ ತಿರುಳು. 40 ರಿಂದ 50 ದಿನಗಳ ಚಿತ್ರೀಕರಣ ಬಾಕಿ ಉಳಿದಿದೆ. ನಟಿ ಹರಿಪ್ರಿಯಾ, ಮೊದಲ ಬಾರಿಗೆ ಉಪೇಂದ್ರ ಅವರ ಜೊತೆ ನಟಿಸುತ್ತಿದ್ದೇನೆ. ಚಿತ್ರದಲ್ಲಿ ನನ್ನದು ತನಿಖಾ ವರದಿಗಾರ್ತಿಯ ಪಾತ್ರ. ಕಥೆ ಕೇಳುತ್ತಲೇ ಕುತೂಹಲ ಹೆಚ್ಚಿತು. ಯಾವುದಕ್ಕೂ ಭಯಪಡದ ದಿಟ್ಟ ಹುಡುಗಿಯ ಪಾತ್ರ. ನಾಯಕನ್ನು ಯಾವ ಕಾರಣಕ್ಕೆ ಭೇಟಿ ಆಗುತ್ತೇನೆ ಎನ್ನುದರ ಮೇಲೆ ಚಿತ್ರ ನಡೆಯಲಿದೆ .

ಬೆಂಗಳೂರಿನಲ್ಲಿ ಚಿತ್ರೀಕರಣ ಮುಗಿದ ಮೇಲೆ ಮೈಸೂರಿಗೆ ತೆರಳುತ್ತೇವೆ ಅಲ್ಲಿಂದ ಮಂಗಳೂರು ಸುತ್ತ ಮುತ್ತ ಚಿತ್ರೀಕರಣ ನಡೆಸಿ ಹಾಡಿನ ಚಿತ್ರೀಕರಣವನ್ನು ವಿದೇಶದಲ್ಲಿ ಮಾಡುವ ಉದ್ದೇಶವಿದೆ ಎಂದು ಚಿತ್ರದ ನಿರ್ದೇಶಕ ಮಾದೇಶ್ ತಿಳಿಸಿದ್ದಾರೆ. ಚಿತ್ರವನ್ನು ಎ.ಕೇಶವ, ಎ. ನರಸಿಂಹ, ಎಂ.ಆರ್ ಗೌಡ ನಿರ್ಮಾಣ ಮಾಡುತ್ತಿದ್ದಾರೆ. ಸುರೇಶ್ ಗೋಸ್ವಾಮಿ ಅವರ ಕಥೆಗೆ ಎಂ.ಎಸ್ ರಮೇಶ್ ಸಂಭಾಷಣೆ ಬರೆದಿದ್ದಾರೆ. ರಾಜೇಶ್ ಕಟ್ಟ ಛಾಯಾಗ್ರಾಹಣ, ಸುರಾಗ್ ಮತ್ತು ಸಾಧುಕೋಕಿಲ ಅಪ್ಪ-ಮಗನ ಜೋಡಿ ಚಿತ್ರಕ್ಕೆ ಸಂಗೀತ ನೀಡಿದೆ.ರವಿವರ್ಮಾ ಸಾಹಸವಿದೆ.

# ಅದೊಂದಿತ್ತು ಕಾಲದಲ್ಲಿ ನಿರ್ದೇಶಕನಾದ ವಿನಯ್





'ಅದೊಂದಿತ್ತು ಕಾಲ' ಚಿತ್ರದಲ್ಲಿ ವಿನಯ್‌ರಾಜ್‌ಕುಮಾರ್ ನಿರ್ದೇಶಕನ ಪಾತ್ರ ಮಾಡಲಿದ್ದಾರೆ. ನಿರ್ದೇಶಕ ಕತೆ ಹೊಂದಿರುವ ಈ ಚಿತ್ರ ಅವರ ಕಷ್ಟ-ನಷ್ಟಗಳ ಕುರಿತ ಎಳೆ ಈ ಚಿತ್ರದಲ್ಲಿದೆ. ಕೊವಿಡ್ ಕಾರಣದಿಂದ ಶೂಟಿಂಗ್ ನಿಂತಿದ್ದವು. ಈಗ ಮತ್ತೆ ಚಿತ್ರೀಕರಣ ಆರಂಭವಾಗಿದೆ.

ಈ ಚಿತ್ರದಲ್ಲಿ ಅವರು ನಿರ್ದೇಶಕನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಓರ್ವ ನಿರ್ದೇಶಕನ ಜೀವನವನ್ನು ಈ ಸಿನಿಮಾ ಹೇಳಲಿದೆ. ಈ ಸಿನಿಮಾ ಬಗ್ಗೆ ವಿನಯ್ ರಾಜ್‌ಕುಮಾರ್ ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಾರೆ. ಕೊವಿಡ್ ಕಾರಣದಿಂದ ಈ ಸಿನಿಮಾ ಕೆಲಸಗಳು ನಿಂತಿದ್ದವು. ಈಗ ಮತ್ತೆ ಶೂಟಿಂಗ್ ಶುರುವಾಗಿದೆ. ಇದಲ್ಲದೆ, 'ಗ್ರಾಮಾಯಣ' ಚಿತ್ರದಲ್ಲೂ ವಿನಯ್ ನಟಿಸುತ್ತಿದ್ದು, ಈ ಸಿನಿಮಾ ಮೇಲೂ ಸಾಕಷ್ಟು ನಿರೀಕ್ಷೆ ಇದೆ. ಈ ಬಗ್ಗೆ ಅವರು ಮಾತನಾಡಿದ್ದಾರೆ.

# ಈಗ ಡೆಡ್ಲಿ ಭಾಗ ೩



ರವಿ ಶ್ರೀವಾತ್ಸವ ನೇತೃತ್ವದಲ್ಲಿ ತೆರೆಗೆ ಬಂದಿದ್ದ ಡೆಡ್ಲಿ ಸೋಮ,ಮತ್ತು ಡೆಡ್ಲಿ-2 ಚಿತ್ರದ ಬಳಿಕ ಈಗ "ಡೆಡ್ಲಿ-3 " ಚಿತ್ರೀಕರಣ ಬೆಂಗಳೂರಿನಲ್ಲಿ ಭರದಿಂದ ಸಾಗಿದೆ. ಡೆಡ್ಲಿ-3 ಚಿತ್ರಕ್ಕೆ ಹೊಸ ನಿರ್ಮಾಪಕರು ಮತ್ತು ನಾಯಕ ನಟನ ಪ್ರವೇಶವಾಗಿದೆ.

ಉಳಿದಂತೆ ಹಿಂದಿನ ಚಿತ್ರಗಳಲ್ಲಿ ಇದ್ದ ಕೆಲ ಕಲಾವಿದರು " ಡೆಡ್ಲಿ-3 "ಚಿತ್ರದಲ್ಲಿ ಮುಂದುವರೆಯಲಿದ್ದಾರೆ. ನಿರ್ಮಾಪಕ ಶೋಭಾ ರಾಜಣ್ಣ ಬಂಡವಾಳ ಹಾಕಿ ಪುತ್ರ ದೀಕ್ಷಿತ್ ನನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿರುವ "ಎಂ.ಆರ್ " ಚಿತ್ರ ಕೈಗೆತ್ತಿಕೊಂಡಿದ್ದ ನಿರ್ದೇಶಕ ರವಿ ಶ್ರೀವಾಸ್ತವ ಅದನ್ನು ಅಲ್ಲಿಗೆ ಬಿಟ್ಟು ಅದೇ ನಿರ್ಮಾಪಕ ಮತ್ತು ನಾಯಕನಿಗಾಗಿ "ಡೆಡ್ಲಿ-3 " ಚಿತ್ರದ ಚಿತ್ರೀಕರಣ ನಡೆಸುತ್ತಿದ್ದಾರೆ.

ನಟ ದೀಕ್ಷಿತ್ ಪೊಲೀಸ್ ಆಯುಕ್ತರ ಕಚೇರಿಯಿಂದ ನಾಯಕ ಹೊರಗೆ ಬರುವಾಗ ಆತನ ಬೆಂಬಲಿಗರು ಅದ್ದೂರಿಯಾಗಿ ಸ್ವಾಗತಿಸುವ ಆಕ್ಷನ್ ಸನ್ನಿವೇಶವನ್ನು ನಿರ್ದೇಶಕ ರವಿ ಶ್ರೀವಾತ್ಸವ , ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಮಾರ್ಗದರ್ಶನದಲ್ಲಿ ಛಾಯಾಗ್ರಾಹಕರಾಗಿ ಮಾಥ್ಯೂ ರಾಜನ್ ಇದ್ದಾರೆ.

ಈ ಚಿತ್ರಕ್ಕೆ ನಟ ದೀಕ್ಷಿತ್ ಎದುರು ಯಶಾ ಶಿವಕುಮಾರ್ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಉಳಿದಂತೆ ಹಿರಿ ಕಿರಿಯ ಕಲಾವಿದರ ದಂಡು ಚಿತ್ರದಲ್ಲಿದೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act